
ಕಲ್ಯಾಣ ಕಿರಣ

ಸಂಪುಟ ೭
ಸಂಚಿಕೆ ೬
ಅಕ್ಟೋಬರ್ ೧೯೮೧
ಬಸವ ಶಕೆ ೮೭೫
ಬೆಲೆ : ೧-೫೦



ಕೂಡಲಸಂಗಮದೇವರ ರಾಜತೇಜದಲ್ಲಿಪ್ಪ



ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು
50 ವರ್ಷಗಳನ್ನು ದಾಟಿದ್ದಾರೆ

ಕಲ್ಯಾಣ ಕಿರಣ

ಸಂಪುಟ ೭] ಅಕ್ಟೋಬರ್ 1981 [ಸಂಚಿಕೆ ೬

ಗಾಂಧೀಜಿಯವರಿಗೆ

ನುಡಿ ನೈವೇದ್ಯ

ಭಾರತದ ನಭದಲ್ಲಿ ಬೆಳಗುತಿಹ ಧ್ರುವತಾರೆ ಗಾಂಧೀಜಿ
ನರ ಕುಲದ ಕಾನನದಿ ಸೌರಭಿಪ ಶ್ರೀಗಂಧ ಬಾಪೂಜಿ।

ಎಲ್ಲರೆದೆಯಲ್ಲಿ ರಾಷ್ಟ್ರ ಭಕ್ತಿಯುಕ್ಕುವ ತೆರದಿ ಶಂಖಧ್ವನಿಯನು ಗೈದ ಗಾಂಧೀಜಿ
ಕೋಲ ಕೈಯಲಿ ಹಿಡಿದು ಆತ್ಮ ಬಲದಿಂ ನಡೆದ ದಿವ್ಯ ನೇತಾಜಿ॥

ಸತ್ಯ ಪ್ರೇಮದ ಮೂರ್ತಿ ತ್ಯಾಗ-ಯೋಗಕೆ ಸ್ಫೂರ್ತಿ ಗಾಂಧೀಜಿ
ಸರಳತೆಯ ಸಾಕಾರ, ರಾಷ್ಟ್ರದ ಹರಿಕಾರ, ಸ್ವಾತಂತ್ರ್ಯ ಗುರಿಕಾರ ಬಾಪೂಜಿ॥

ಭಾರತದ ಬೆನ್ನನ್ನು ನೇರಗೊಳಿಸಿದ ವೈದ್ಯ
ಮಾರುತದ ತೆರದಲ್ಲಿ ಜೀವವಿತ್ತಹ ಆದ್ಯ
ದೇವದೂತನೆ ಆಗಿ ಈ ಇಳೆಯ ಮೇಲಿಳಿದು
ನಾಡಿನ ಗುಡಿಯನ್ನು ಹಾರಿಸಿದ ಮಹಯೋಧ ಬಾಪೂಜಿ॥

ನಾಡ ನಂದಾದೀಪ, ಮನುಕುಲದ ಭಾಗ್ಯರವಿ ಗಾಂಧೀಜಿ.
ಎಡಬಿಡದ ಸ್ಫೂರ್ತಿಯಿಂ ಬಡಬಡನೆ ಮುನ್ನಡೆದ
ಮೃಡನ ಒಲಿಮೆಯ ಕಿಡಿ ಬಾಪೂಜಿ॥

ಎಂದೆಂದು ನಮಗಿರಲಿ ನಿನ್ನ ಆದರ್ಶದ ಬದುಕು
ಮುಂದೆ ನಡೆಸುವ ಜ್ಯೋತಿ ನಿನ್ನಯ ನುಡಿದೀಪ್ತಿ॥

– ಜಗದ್ಗುರು ಮಾತೆ ಮಹಾದೇವಿ

ಕಲ್ಯಾಣ ಕಿರಣ

ಮಾಸ ಪತ್ರಿಕೆ

ವಾರ್ಷಿಕ ಚಂದಾ ರೂ. ೧೬ ಆಜೀವ ಸದಸ್ಯತ್ವ ೧೫೧ ರೂ

ಬಿಡಿ ಪ್ರತಿ ೧-೫೦ ರೂ.

ಕಿರಣಗನ್ನಡಿ

ಮುಖ ಪುಟ : ಮಹಾತ್ಮ ಗಾಂಧೀಜಿ

ಎರಡನೆಯ ಪುಟ : ಕೂಡಲ ಸಂಗಮ ದೇವರ ರಾಜತೇಜದಲ್ಲಿಪ್ಪ

ಹಿಂಬದಿಯ ಚಿತ್ರ : ಶರಣು ಶರಣಾರ್ಥಿ



—ಜಗದ್ಗುರು ಮಾತೆ ಮಹಾದೇವಿ

ಶ್ರೀ ಕುವೆಂಪು ಮತ್ತು ಮತಾಂತರ ಕುರಿತು

ಸದ್ಯದಲ್ಲಿ ಎಲ್ಲೆಡೆಯಲ್ಲೂ ಚರ್ಚಾಸ್ಪದವಾಗಿರುವ ವಿಷಯವೆಂದರೆ ಹಿಂದೂ ಹರಿಜನರು ಆಗುತ್ತಿರುವ ಮತಾಂತರ. ಗಾಂಧಿ ಜಯಂತಿಯ ಈ ಸಂದರ್ಭದಲ್ಲಿ ಇದರ ಬಗ್ಗೆ ಚರ್ಚಿಸುವುದೂ ಅಷ್ಟೇ ಸೂಕ್ತ. ಪ್ರಸ್ತುತ ಆವಶ್ಯಕತೆಯನ್ನು ಗಮನಿಸಿ ಪ್ರಜಾವಾಣಿಯು ರಾಷ್ಟ್ರಕವಿ ಕುವೆಂಪುರವರನ್ನು ಸಂದರ್ಶಿಸಿ 26-8-1981ರ ಸಂಚಿಕೆಯಲ್ಲಿ ಸಂದರ್ಶನದ ವಿವರವನ್ನು ಪ್ರಕಟಿಸಿದೆ. ಶ್ರೀಯುತ ರಾಷ್ಟ್ರಕವಿ ಕುವೆಂಪು ರವರು ಮಹಾನ್ ಸಾಹಿತಿಗಳಷ್ಟೇ ಅಲ್ಲ ದಾರ್ಶನಿಕರು, ತತ್ತ್ವಜ್ಞಾನಿಗಳು ಮತ್ತು ಸಾಹಿತ್ಯದೊಡನೆ ಅಧ್ಯಾತ್ಮದ ಜೇನನ್ನೂ ರೂಢಿಸಿಕೊಂಡ ರಸಋಷಿ. ದುಶ್ಚಟ ದುರ್ಗುಣಗಳಿಂದ ಹೊರತಾಗಿ, ಅಂತರ್ಮುಖಿಯಾಗಿ ಸಾಹಿತ್ಯದೊಡನೆ ಆತ್ಮಸಾಧನೆಯನ್ನು ಮೇಳವಿಸಿಕೊಂಡವರು ಅತಿ ವಿರಳ. ಅಂಥ ಉತ್ತುಂಗ ದಾರ್ಶನಿಕ ಸಾಹಿತಿಗಳಾದುದರಿಂದ ಶ್ರೀ ಕುವೆಂಪುರವರ ಮಾರ್ಗದರ್ಶನಕ್ಕಾಗಿ ಸಂದಿಗ್ಧ ಸಮಯದಲ್ಲಿ ಸಮಾಜ ಬಯಸುವುದು ಸ್ವಾಭಾವಿಕ. ಇಂಥದೊಂದು ಪ್ರಯತ್ನವನ್ನು ಪ್ರಜಾವಾಣಿ ಮಾಡಿದಾಗ ಶ್ರೀ ಕುವೆಂಪುರವರು ಆಡಿದ ಮಾತುಗಳು ಮಾರ್ಗದರ್ಶಕ ಕೈಪಿಡಿಯಂತಿವೆ.

"ಮತಾಂತರ" ಈ ಶಬ್ದವು ಮೂಲತಃ ಮನುಷ್ಯ ತಾಳುವ 'ವಿಚಾರ ಪಲ್ಲಟ' ಎಂಬ ಅರ್ಥ ನೀಡುತ್ತದೆ. Conversion ಇದನ್ನು ಅಧ್ಯಾತ್ಮ ದೃಷ್ಟಿಯಿಂದ ನೋಡಿದಾಗ ಅದು change of heart ಅಥವಾ ಹೃದಯ ಪರಿವರ್ತನೆ ಎಂಬ ಭಾವವನ್ನು ನೀಡುತ್ತದೆ. ಆದರೆ ಇಂದು ಬಹುಪಾಲು ಜನರು ಮಾಡುವ ಮತಾಂತರಗಳು ವಿಚಾರ

ಪಲ್ಲಟ, ಹೃದಯ ಪರಿವರ್ತನೆಗಿಂತ ಮಿಗಿಲಾಗಿ ಕೇವಲ ಒಂದು ಮತದಿಂದ ಇನ್ನೊಂದು ಮತಕ್ಕೆ ಬದಲಾವಣೆ ಹೊಂದುವುದನ್ನು, ಒಂದು ಸಮಾಜವನ್ನು ತೊರೆದು ಇನ್ನೊಂದು ಸಮಾಜವನ್ನು ಸೇರುವ ಕ್ರಿಯೆಯನ್ನು ಸೂಚಿಸುವುದೇ ವಿನಾ, ಅದು ವ್ಯಕ್ತಿಯ ಆಚಾರ–ವಿಚಾರ–ಸಂಸ್ಕರಣದಲ್ಲಿ ಮಹತ್ತರ ಪರಿಣಾಮವನ್ನೇನೂ ಉಂಟು ಮಾಡುವುದಿಲ್ಲ. ಇದರಿಂದಾಗಿ ಇಂದಿನ ಮತಾಂತರಗಳು ಧಾರ್ಮಿಕ ಅರ್ಥಕ್ಕಿಂತ ಮಿಗಿಲಾಗಿ (ಗೌಣವಾಗಿ) ಸಾಮಾಜಿಕ ಮತ್ತು (ಪ್ರಾಮುಖ್ಯವಾಗಿ) ರಾಜಕೀಯ ಅರ್ಥವನ್ನು ಹೊಂದಿರುತ್ತವೆ.

ಹರಿಜನರು ಮತ್ತು ಇಸ್ಲಾಂ

"ಬಾಣಲೆಯಿಂದ ಬೆಂಕಿಗೆ ಬೇಡ" ಎಂಬ ಕುವೆಂಪುರವರ ಕರೆ ಬಹಳ ಅರ್ಥಗರ್ಭಿತ. "ಮತಾಂತರ" ಎಂಬ ಮಹತ್ತರವಾದೊಂದು ಬದಲಾವಣೆಗೆ ಒಳಗಾಗಬೇಕಾದರೂ ಮನುಷ್ಯ ಸುಧಾರಿಸಿದ ಒಂದು ಆಚಾರ ವಿಚಾರ ಸಂಸ್ಕೃತಿಗೆ ಹೋಗಬೇಕು. ಹಿಂದೂ ಮತವನ್ನು ತ್ಯಜಿಸಿದರೂ ಅದಕ್ಕಿಂತಲೂ ಉತ್ತಮವಾದ ಒಂದು ವಿಚಾರಧಾರೆಗೆ ಹೋದರೆ ಮುಂಚಿನದನ್ನು ತೊರೆದುದಕ್ಕೂ ಸಾರ್ಥಕ. ಹಿಂದೂ ತತ್ತ್ವ ತಾನಾಗಿ ಯಾರನ್ನೂ ಮತಾಂತರ ಮಾಡಲು ಆತುರ ಪಡದಿದ್ದರೂ, ಜಗತ್ತಿನಾದ್ಯಂತ ಅನೇಕ ಮುಮುಕ್ಷುಗಳು ಸ್ವಯಂ ಇಚ್ಛೆಯಿಂದ, ಅಧ್ಯಾತ್ಮಿಕ ದೃಷ್ಟಿಯಿಂದ ಹೂಬನಕ್ಕೆ ಜೇನ್ನೊಣಗಳು ಬರುವಂತೆ ತಾವಾಗಿ ಹಿಂದೂ ತತ್ತ್ವಜ್ಞಾನದತ್ತ ಆಕರ್ಷಿತರಾಗಿ ಬರುತ್ತಿದ್ದಾರೆ. ಯೋಗಶಾಸ್ತ್ರ, ಧ್ಯಾನ ಜಪತಪಗಳ ವಿಧಾನಗಳಂತೂ ಹಿಂದೂ ಪರಂಪರೆಯ ಉತ್ಕೃಷ್ಟ ಕೊಡುಗೆ. ಜನ ಸಾಮಾನ್ಯರು ಆಚರಿಸುತ್ತಿರುವ ವಿಧಿವಿಧಾನಗಳ (rites and rituals) ನ್ನು ಮೀರಿ ಶುದ್ಧ ಅಧ್ಯಾತ್ಮ ಪಥವನ್ನು ಗಮನಿಸಿದಾಗ ಹಿಂದೂ ತತ್ತ್ವವು ಬಹಳ ಪ್ರೌಢವಾದುದು.

ವ್ಯಕ್ತಿ ಸ್ವಾತಂತ್ರ್ಯ, ವಿಚಾರ ಸ್ವಾತಂತ್ರ್ಯಗಳುಳ್ಳ ತೆರೆದ ಮತ (open religion) ಎಂಬುದನ್ನು ಶ್ರೀಯುತ ಕುವೆಂಪುರವರೂ ಒಪ್ಪಿಕೊಂಡಿದ್ದಾರೆ. ಸ್ಪೃಶ್ಯಾಸ್ಪೃಶ್ಯತೆಯ ಬಗ್ಗೆ ತಪ್ಪು ನಂಬುಗೆ ಹಿಂದುಗಳಲ್ಲಿ ಹುಟ್ಟಿಬಿಟ್ಟಿರುವುದರಿಂದ ಅದನ್ನು ತೆಗೆದು ಹಾಕುವ ಮೆದುಳು ತೊಳೆವ ಕೆಲಸ (Brain washing) ಇಂದು ತೀವ್ರವಾಗಿ ಆಗಬೇಕಾಗಿದೆ. ಬಹಿಷ್ಠೆಯರಾದ ಸ್ತ್ರೀಯರನ್ನು ತಮ್ಮ ಮಕ್ಕಳನ್ನು, ಹೆಂಡಿರನ್ನೇ ಅಸ್ಪೃಶ್ಯರಂತೆ ಕೆಲವು ಹಿಂದುಗಳು ಕಾಣುವುದು ಸಾಮಾನ್ಯ ಮೂಢನಂಬಿಕೆ ಏನಲ್ಲ. ಸಮಯದಲ್ಲಿ ಭೇದಾಭೇದಗಳನ್ನು ಕಲ್ಪಿಸಿಕೊಂಡು ರಾಹುಕಾಲ, ಯಮಗಂಡಕಕಾಲ ಎಂದು ಅನೇಕ ಹಿಂದುಗಳು ಭಯಗ್ರಸ್ತರಾಗಿ ವಿಹ್ವಲಿತರಾಗುವುದನ್ನೂ ಕಾಣುತ್ತೇವೆ. ಇಂಥ ಪ್ರಸಂಗದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಹರಿಜನರನ್ನು ತಿರಸ್ಕಾರ

ದಿಂದ ಕಾಣುವುದು ಸಹಜ ಕ್ರಿಯೆಯಾಗಿ ಇರಬಹುದು. ಆದ್ದರಿಂದ ಅಸ್ಪೃಶ್ಯತೆಯ ಆಚರಣೆಯೊಂದು ಅಪರಾಧ, ಮಾನವಮಾನವರಲ್ಲಿ ಭೇದ ಮಾಡುವುದು ಪಾಪ ಎಂಬುದನ್ನು ಜನರಲ್ಲಿ ತುಂಬಬೇಕು. (ಅದೇ ರೀತಿ ಇನ್ನಿತರ ಮೂಢನಂಬಿಕೆಗಳನ್ನೂ ತೊಳೆಯಬೇಕು) ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಹರಿಜನರು ಹಿಂದೂ ಸಮಾಜವನ್ನು ತೊರೆದು ಅಹಿಂದು ಸಮಾಜವನ್ನು ಸೇರುವುದೆಂದರೆ, 'ಬಾಣಲೆಯಿಂದ ಬೆಂಕಿಗೆ ಹಾರಿದಂತೆ' 'ಹುಲಿಗಂಜಿ ಹುತ್ತವ ಹೊಕ್ಕರೆ ಹಾವು ತಿಂಬುದ ಮಾಣ್ಬುದೇ ?' ಎಂಬಂತೆ ಅತಂತ್ರ ಪರಿಸ್ಥಿತಿ ಪ್ರಾಪ್ತವಾಗುತ್ತದೆ. ಈ ಎಲ್ಲ ದೃಷ್ಟಿಯಿಂದ ಶ್ರೀ ಕುವೆಂಪುರವರ ಹಿತನುಡಿಗಳು ತುಂಬಾ ಮನನೀಯ.

ಆದರೆ ಅವರು ಇನ್ನೆರಡು ಮಾತನ್ನಾಡಿದ್ದಾರೆ. 1. ಬೇಕಾದರೆ ಹಿಂದೂ ಮತವನ್ನು ಬಿಡಿ. ಆದರೆ ಬೇರೆ ಯಾವುದೇ ಮತವನ್ನು ಅಪ್ಪಿಕೊಳ್ಳುವ ಅವಿವೇಕವನ್ನು ಮಾಡಬೇಡಿ.

2. ನಾನೂ ಹಿಂದು ಮತವನ್ನು ತ್ಯಜಿಸಿದ್ದೇನೆ. ನನಗೆ ವೈಯಕ್ತಿಕವಾಗಿ ಯಾವ ಮತದ ಬಂಧನವೂ ಇಲ್ಲ. ಬೇಕಾದರೆ ನೀವೂ ನನ್ನ ಹಾಗೆ ಇರಿ.

ಮನುಷ್ಯ ಕೆಲವೊಂದು ಆಯ್ಕೆ ಮಾಡುವಾಗ Philosophy ಮತ್ತು No-philosophyಗಳ ಮಧ್ಯೆ ಮಾಡಲು ಬರದು. Good philosophy and Bad philosophy ಮಧ್ಯೆ ಮಾತ್ರ ಮಾಡಲು ಸಾಧ್ಯ. ಯಾವುದೇ ಬಗೆಯ ಬದುಕನ್ನು ಅವನು ಬದುಕಿದರೂ ಅದು ಒಂದು ತತ್ತ್ವಜ್ಞಾನದ ದಾಟಿಯನ್ನು ಒಳಗೊಂಡಿರುತ್ತದೆ. ಹೇಗೆಂದರೆ, "ನನ್ನ ಜೀವನಕ್ಕೆ ಯಾವ ತತ್ತ್ವಜ್ಞಾನವೂ ಇಲ್ಲವಪ್ಪ. ಉಂಡು ತಿಂದು ಸುಖವಾಗಿರುವುದಷ್ಟೇ ನನ್ನ ಧ್ಯೇಯ" ಎಂದಾಗ ಆ ಮನುಷ್ಯನಿಗೆ ಯಾವ ಇಸಮ್ (ism) ಅಂದರೆ ತತ್ತ್ವ ವಿಚಾರಧಾರೆ ಇಲ್ಲ ಎಂದು ಸಾಮಾನ್ಯರು ತಿಳಿಯುತ್ತಾರೆ. ಇದೂ ಒಂದು ತತ್ತ್ವಜಾನವೇ !, ಭೋಗವಾದ ಅಥವಾ Hedonism ಎಂದು. "ಅಯ್ಯಾ, ಯಾಕಯ್ಯಾ ಕಾಣದ ದೇವರು, ಆತ್ಮಗಳ ಬಗ್ಗೆ ಚಿಂತಿಸುತ್ತೀಯ. ನಿನ್ನ ಕಣ್ಣೆದುರಿಗೆ ಕಾಣುವ ಜಗತ್ತನ್ನು ನಂಬು. ಕಾಣದ್ದನ್ನು ಬಿಡು". ಎಂದು ನುಡಿದರೆ ಅವನು ಭೌತಿಕವಾದಿ (materialist) ಆಗುವನು "ದೇವರು, ಆತ್ಮ, ಮುಕ್ತಿ ಈ ಎಲ್ಲವೂ ಸತ್ಯ" ಎಂದಾಗ ಚಿತ್ಪ್ರಧಾನ (Idealistic) ಸೇಶ್ವರವಾದಿ (theist) ಆಗುವನು. "ಅಯ್ಯೋ, ತಿಳಿಯಲಸಾಧ್ಯವಾದ ದೇವನ ಬಗ್ಗೆ ಚರ್ಚೆ ಏಕೆ ? ವಾದ ವಿವಾದವೇಕೆ ? ಸುಮ್ಮನಿದ್ದರಾಯಿತು." ಎಂದರೆ ಅಜ್ಞೇಯವಾದಿ (Agnostic) ಆಗುವನು. "ನೋಡಪ್ಪಾ, ದೇವರಿದ್ದಾನೋ ಇಲ್ಲವೋ ಏಕೆ ವ್ಯರ್ಥ ಮಾತು ? ದೇವನನ್ನು ನಂಬುವುದರಿಂದ ಒಂದು ನೈತಿಕ ಭಯವಿರುತ್ತದೆ. ಪಕ್ಕದ ಕೋಣೆ

ಯಲ್ಲಿ ತಂದೆ ಇದ್ದಾನೆ ಎಂಬ ಭಯದಿಂದಲಾದರೂ ಮಗುವು ಓದುವಂತೆ, 'ದೇವರಿದ್ದಾನೆ, ಅವನೊಬ್ಬ ನ್ಯಾಯಾಧೀಶ' ಎಂಬ ಭಯದಿಂದಲಾದರೂ ಮನುಷ್ಯ ಪಾಪಕಾರ್ಯ ಗಳನ್ನು ಕಡಿಮೆ ಮಾಡುವನು. ಆದ್ದರಿಂದ ದೇವರು ಉಪಯುಕ್ತವಸ್ತು. ನಂಬಿದ ರಾಯಿತು ಬಿಡಿ" ಎಂದಾಗ ಅವನು pragmatist, ಉಪಯುಕ್ತವಾದದವನಾಗುವನು. ಹೀಗೆ ಪ್ರತಿ ನಂಬುಗೆ, ಆಚರಣೆಯಲ್ಲೂ ಒಂದು ism ತತ್ತ್ವಜ್ಞಾನ ಇರುತ್ತದೆ. ಅಂತೂ ಮನುಷ್ಯ ಒಂದು ವಿಚಾರಧಾರೆಯ ಆಶ್ರಯದಲ್ಲಿ ಇರಲೇಬೇಕಾಗುತ್ತದೆ. ಆದ್ದರಿಂದ ಒಳ್ಳೆತನ್ನು ಆರಿಸಿಕೊಳ್ಳುವುದು ವಿವೇಕಯುಕ್ತ. ಹಿಂದೂ ಪರಂಪರೆ ವ್ಯಕ್ತಿ ಸ್ವಾತಂತ್ರ್ಯಕ್ಕೆ ತುಂಬಾ ಬೆಲೆಕೊಟ್ಟದೆ. ಧಾರ್ಮಿಕ ವಿಚಾರಗಳಲ್ಲಿ ಭಿನ್ನಮತ ಹೊಂದಿದ ಮಾತ್ರಕ್ಕೆ (ಉದಾ : ಪಾಕಿಸ್ತಾನ ಮತ್ತು ಇರಾನ್‌ಗಳ ವಿಚಾರಣ ವೈಖರಿ) ಮುಖಂಡರು ನೀಡುವಂತಹ ಕ್ರೂರ ಶಿಕ್ಷೆ ಇಲ್ಲಿ ಕಾಣಬರದು. ಹೀಗಿದ್ದಾಗ ಹಿಂದೂ ಮತ ಬಿಟ್ಟು ಬಿಡುವುದು ಬುದ್ಧಿವಂತಿಕೆಯ ಲಕ್ಷಣವಲ್ಲ.

ಯಾವುದೊಂದೂ ಮತವಿರದೆ ಬದುಕಲು ಸಾಧ್ಯವಿಲ್ಲ. ಮನುಷ್ಯ ಸಮಾಜ ಜೀವಿ. ಆಚಾರವ್ಯವಹಾರ, ರೋಟಿ ಬೇಟಿ ಇವುಗಳಿಗಾಗಿ ಅವನು ಇತರರೊಡನೆ ಬಾಳಲೇ ಬೇಕಾಗುತ್ತದೆ. ಸಮಾಜದ ಹಲವಾರು ಜೀವಿಗಳನ್ನು ಬೆಸೆಯುವ ಒಂದು ಸೂತ್ರ ಈ ಧರ್ಮ. (ಇದು ಸೂತ್ರವಾಗಬೇಕೇ ವಿನಾ ಉರುಳಾಗಬಾರದು ಎಂಬು ದನ್ನು ನಾವೂ ಒಪ್ಪುತ್ತೇವೆ.) ಯಾವುದೇ ವಿಧಿವಿಧಾನ ಕಟ್ಟುಪಾಡು (Rites and rituals) ಬೇಡ ಎಂಬ ನಿರ್ಣಯಕ್ಕೆ ಇಬ್ಬರು ಬರಲು ಸಾಧ್ಯ.

1. ಅತ್ಯಂತ ಉನ್ನತ ಮಟ್ಟದ ಜ್ಞಾನ ಸ್ಥಲದಲ್ಲಿ ನಿಂತವನು.

2. ಇಲ್ಲವೇ ಕಟ್ಟಾ ನಾಸ್ತಿಕ. ಮೊದಲನೆಯ ಪ್ರಕಾರದ ಜನರು, ಅಂದರೆ ಮಾನಸ ಪೂಜೆಯನ್ನು ಜ್ಞಾನ ಪ್ರಧಾನವಾಗಿ ಮಾಡಬಲ್ಲಂಥವರು ತೀರಾ ಕಡಿಮೆ. ಆಚಾರ ವಿಚಾರ ಪೂಜೆ ಪುರಸ್ಕಾರ ಎಲ್ಲ ಬಿಟ್ಟ ಕಟ್ಟಾ ನಾಸ್ತಿಕರು ಮೊದಲಿನವರಿಗಿಂತ ಜಾಸ್ತಿ ಇದ್ದರೂ, ಯಾವುದೋ ನಂಬಿಕೆಯ ಬಲದ ಮೇಲೆ ದೈವೀಶಕ್ತಿಯನ್ನು ಆಶ್ರಯಿಸಿಕೊಂಡು ಲೌಕಿಕವಾದ ಬದುಕನ್ನು ಬದುಕುವವರೇ ಬಹಳ. ಇವರು ಮತದ ಅವಲಂಬನೆ ಇಲ್ಲದೆ ಬದುಕಲಾರರು, ಬದುಕಲೂ ಬೇಕಾಗಿಲ್ಲ. ಆದ್ದರಿಂದ ಯಾವುದೇ ಮತವನ್ನು ಅವಲಂಬಿಸಿಕೊಳ್ಳದೆ ಇರಿ ಎಂಬ ಶ್ರೀ ಕುವೆಂಪುರವರ ಹಿತವಾದ ಪ್ರಾಯೋಗಿಕವಾಗದು. ಕೆಲವೊಂದು ಮಾತುಗಳು Quotations ಆಗಿ ಉಲ್ಲೇಖಿ ಸಲಿಕ್ಕೆ ಚೆಂದವಾಗಿ ತೋರುವವೇ ವಿನಾ, ಪ್ರಯೋಗಕ್ಕೆ ಬರಲಾರವು. ನಾನೊಮ್ಮೆ ಒಂದು ಹಾಸ್ಯ ಕಥೆ ಸಣ್ಣವಳಿದ್ದಾಗ ಓದಿದ್ದೆ. ಓರ್ವ ಕಲಾವಿದ ಒಂದು ದಿನ ಸ್ತ್ರೀಯ ವರ್ಣನೆ ಓದಿದ. ಮೀನಿನಂತಹ ಕಣ್ಣುಗಳು, ತೊಂಡೆಯಂತಹ ತುಟಿ, ನಾಗರ

ಹಾವಿನಂತಹ ಕೇಶರಾಶಿ, ಹೀಗೆ ಓದಿ ಇಂಥ ಎಲ್ಲವನ್ನೂ ಹಾಕಿ ಒಂದು ಗೊಂಬೆ ಯನ್ನು ತಯಾರು ಮಾಡಿದರೆಂತು? ಎಂದುಕೊಂಡು ಒಂದು ಮೇಣದ ಗೊಂಬೆ ಮಾಡಿ ಅದಕ್ಕೆ ಕಣ್ಣಿದ್ದಲ್ಲಿ ಎರಡು ಪುಟ್ಟ ಮೀನುಗಳನ್ನು ; ತುಟಿಗಳಿದ್ದಲ್ಲಿ ಎರಡು ತೊಂಡೆ ಹಣ್ಣುಗಳನ್ನು, ಮೂಗಿದ್ದಲ್ಲಿ ಸಂಪಿಗೆ ಹೂವನ್ನು ಹೀಗೆ ಜೋಡಿಸುತ್ತಾ ಬಂದು ಕಡೆಗೆ ಭಯಗ್ರಸ್ತನಾಗಿ ಕಿರುಚಿಕೊಂಡನಂತೆ. ಬುದ್ಧ, ಬಸವಣ್ಣ ಗಾಂಧೀಜಿಯ ವರಂತಹ ಸಮಾಜ ನಿರ್ಮಾಪಕರು ಇಂಥದೊಂದು ಆದರ್ಶದ ಕಲ್ಪನೆ ಹೊತ್ತೇ ಹೊರಟವರು. ಕಡೆಗೆ ಅವರೇ ಬೆಚ್ಚಿಬೀಳುವಂತಹ ಸಮಾಜಗಳು ಇಂದು ನಿರ್ಮಾಣ ವಾಗಿವೆ. ಇದಕ್ಕೆ ಕಾರಣ ಸ್ವಾರ್ಥ ಮಾನವನ ಪಾಶವಿಕ ಪ್ರವೃತ್ತಿ, ಒಡೆದು ಆಳುವ ನೀತಿ. ಇಷ್ಟಾದರೂ ಲೋಪದೋಷಗಳನ್ನು ಸರಿಪಡಿಸಿಕೊಂಡು ಸಾಗಬೇಕೇ ವಿನಾ, ಮತಧರ್ಮಗಳನ್ನು ಬಿಟ್ಟು ಬದುಕಲು ಸಾಧ್ಯವಿಲ್ಲ.


"ನಾನು ಹಿಂದೂ ಮತವನ್ನು ತ್ಯಜಿಸಿದ್ದೇನೆ. ನನಗೆ ವೈಯಕ್ತಿಕವಾಗಿ ಯಾವ ಮತದ ಬಂಧನವೂ ಇಲ್ಲ". ಎಂಬ ಶ್ರೀ ಕುವೆಂಪುರವರ ಮಾತು ನಂಬಲಿಕ್ಕತೀತವಾ ದುದು. ಏಕೆಂದರೆ, ಅವರ ಬಾಳಿನಲ್ಲಿ ಹಿಂದೂ ಸಂಸ್ಕೃತಿ ಹಾಸುಹೊಕ್ಕಾಗಿದೆ. ಪದ್ಮಾಸನ ಹಾಕಿ ಧ್ಯಾನಕ್ಕೆ ಕುಳಿತರವರು ಹಿಂದೂ ಮತಾವಲಂಬಿ, ಅಂತರ್ಮುಖಿಗಳಾಗಿ ಧ್ಯಾನಾ ಸಕ್ತರಾದರದು ಹಿಂದೂ ಯೋಗ. ಅವರ ಹೆಸರೇ ಹಿಂದೂ ಸಂಸ್ಕೃತಿಯದು. 'ನಾನು ಹಿಂದೂ ಮತವನ್ನು ಬಿಟ್ಟದ್ದೇನೆ' ಎಂದವರು ಹೇಳಿದರೆ ಸುಪ್ರಸಿದ್ಧ ವಾಗ್ಮಿಯೊಬ್ಬ ವೇದಿಕೆಯ ಮೇಲೆ ನಿಂತು ಘಂಟಾಘೋಷವಾಗಿ, 'ನನ್ನ ಬಾಯೊಳಗೆ ನಾಲಿಗೆ ಇಲ್ಲ' ಎಂದು ಸಾರಿದಂತೆ ಆಗುತ್ತದೆ. ಏಕೆಂದರೆ ಹಿಂದೂ ತತ್ತ್ವವು ಒಂದು ಜೀವನದ ವಿಧಾನ (a way of life), ಒಂದು ವಿಶಿಷ್ಟ ದೃಷ್ಟಿಕೋನ (a view of life, weltauunshaang). "ಮನುಜ ಮತ, ವಿಶ್ವಪಥ" ಎಂಬ ಶ್ರೀಕುವೆಂಪುರವರ ಘೋಷಣೆ ಹಿಂದೂ ಸಂಸ್ಕೃತಿಯ ಜೀವಾಳ. "ಇವನು ನನ್ನವ, ಇವನು ಬೇರೆಯವ ಎಂದು ಗಣಿಸುವುದು ಕ್ಷುಲ್ಲಕರ ದೃಷ್ಟಿ. ಉದಾರ ಚರಿತ್ರರಾದವರಿಗೆ ವಸುಧೆಯೇ ಕುಟುಂಬ ಎಂಬ ಸುಭಾಷಿತ, "ನಾವಿಬ್ಬರೂ ಕೂಡಿ ಬಾಳೋಣ ಕೂಡಿ ಉಣ್ಣೋಣ" ಎಂಬ ಉಪನಿಷತ್ ವಾಕ್ಯ, "ಇವನಾರವ ಇವನಾರವ ಎನ್ನದಿರು ; ಇವನಮ್ಮವ ಇವನಮ್ಮವ ಎನ್ನು" ಎಂಬ ಬಸವವಾಣಿ, 'ಊರೆಲ್ಲ ನಂಟರು, ಕೇರಿ ಎಲ್ಲವು ಬಳಗ, ಧಾರುಣಿಯೇ ಇನ್ನು ಪರದೈವವಾಗಿರಲು ಯಾರನ್ನು ಬಿಡಲೋ ಸರ್ವಜ್ಞ' ಎಂಬ ಸರ್ವಜ್ಞವಾಣಿಯಾಗಲೀ, ಸಾರುವುದು ಮನುಜ ಮತ ವಿಶ್ವಪಥವನ್ನೇ! ಈ ದೃಷ್ಟಿ ಕೋನ ಹಿಂದೂ ಸಂಸ್ಕೃತಿಯ ಜೀವಾಳವಾಗಿದೆಯೆಂತಲೇ ಈ ನಾಡು ಅನೇಕ ಮತಧರ್ಮ ಪಂಥ ಜನಾಂಗಗಳಿಗೆ ಇಂಬುಕೊಟ್ಟದೆ. ಡೇರೆಯೊಳಗೆ ತಲೆ ಇಟ್ಟ ಒಂಟೆಯಂತೆ ನುಸುಳಿದ ಎಲ್ಲರೂ ಮೂಲ ಸಂಸ್ಕೃತಿಯ ಡೇರೆಯನ್ನೇ ಅಲುಗಿಸ ತೊಡಗಿದರು. ನಮ್ಮ

ಔದಾರ್ಯ ಸಹಿಷ್ಣುತೆ ನಮಗೇ ಬಾಧಕವಾಯಿತು. ಗುಂಡುಕೋವಿ ಹಿಡಿದುಕೊಂಡು ಧೂರ್ತನೊಬ್ಬ ಬಂದು ಮರೆಯಲ್ಲಿ ನಿಂತು ಹೋರಾಡುವಾಗ, ಭಾರತೀಯ ಶೂರರಾಜರು ನಿಯತ್ತಿನಿಂದ ಎದುರು ನಿಂತು ಯುದ್ಧ ಮಾಡಿದಾಗ ಸೋತಂತೆ, ಇಂದು ಹಿಂದೂ ಅಹಿಂದು ಮತಗಳ ಸ್ಪರ್ಧೆ ನಡೆದಿದೆ. ಹಣದ ಆಮಿಷ, ಕ್ರೌರ್ಯ, ರಾಜಕೀಯ ಒತ್ತಡ ಎಲ್ಲ ಸೇರಿ ಗೊಂದಲವಾಗುತ್ತಿದೆ.

ಆದ್ದರಿಂದ ವಿಶ್ವಭ್ರಾತೃತ್ವವನ್ನು ಸಾರುವ ಹಿಂದೂ ಮತವನ್ನು ಶ್ರೀ ಕುವೆಂಪು ರವರು ತ್ಯಜಿಸಿಲ್ಲ, ತ್ಯಜಿಸಲೂ ಆರರು. "ನಾನು ಯಾವ ಆಹಾರವೂ ಇಲ್ಲದೇ ಇದ್ದೇನೆ" ಎಂಬುದೆಂತು ಅಸಾಧ್ಯವೋ ಅಷ್ಟೇ ಅಸಾಧ್ಯ ಕೆಲವು ಮೌಲ್ಯಗಳಿಲ್ಲದೆ ಬದುಕುವುದು. "ಹಿಂದೂ" ಒಂದು ವಿಶಿಷ್ಟ ಜಾತಿಯಲ್ಲ; ಒಂದು ವಿಶಿಷ್ಟ ಮತವಲ್ಲ. ಅದು ಅನೇಕ ಮತಗಳ, ಧರ್ಮಗಳ ಒಕ್ಕೂಟವಾದ ಜನಾಂಗ ವಾಚಕಪದ. ಹಿಂದುತ್ವಕ್ಕೂ ಬ್ರಾಹ್ಮಣತ್ವಕ್ಕೂ, ಹಿಂದೂ ಧರ್ಮಕ್ಕೂ-ವೈದಿಕ ಧರ್ಮಕ್ಕೂ ಸಾಮ್ಯ ಸಂಬಂಧ ಕಲ್ಪಿಸಿ ತಾವು ಹಿಂದೂ ಮತ ತೊರೆಯುತ್ತೇವೆ ಎಂಬ ಮಾತನ್ನು ಯಾರೂ ಆಡುವುದು ಬೇಡ. ಇದೊಂದು ಪರಂಪರೆ, ಸಂಸ್ಕೃತಿ; ಇದರ ಹಕ್ಕು ಎಲ್ಲರಿಗಿದೆ. ಆಗಂತುಕವಾಗಿಯೋ, ಅಜ್ಞಾನದಿಂದಲೋ, ದುರುದ್ದೇಶದಿಂದಲೋ ನುಸುಳಿ ಬಂದಿರುವ ಮೂಢ ನಂಬಿಕೆ, ಅಸ್ಪೃಶ್ಯತೆ ಜಾತೀಯತೆ ತಿರಸ್ಕರಿಸಿ ಒಂದು ಉತ್ತಮ ಪರಂಪರೆಯ ನಿರ್ಮಾಣ ಮಾಡುವಾ. ಇಂಥದೊಂದು ಮಹಾನ್ ಪ್ರಯತ್ನವನ್ನು ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಮಾಡಿ, ಒಂದು ರಾಜಪಥವನ್ನು ನಿರ್ಮಿಸಿಕೊಟ್ಟಿದ್ದಾರೆ. ಆದ್ದರಿಂದ ಈಗ ತೀವ್ರವಾಗಿ ಬೇಕಾಗಿರುವುದು ಮತಾಂತರವಲ್ಲ, ವಿಚಾರಗಳ ವಿಕಸನ, ಮೂಢನಂಬಿಕೆಗಳ ನಿರಸನ, ಶಿವಾತ್ಮ ಭಾವದ ಅಣುರಣನ.

ಮಾತೆ ಮಹಾದೇವಿ

ಒಬ್ಬ ರೋಗಿ ನೆಲದ ಮೇಲೆ ಹೊರಳಾಡುತ್ತಿರುವುದನ್ನು ನೋಡಿ ಮತ್ತೊಬ್ಬನು ಕೇಳಿದ. "ಯಾಕೆ ಹಾಗೆ ಹೊರಳಾಡುತ್ತಿ ? ನೋವು ಹೆಚ್ಚಾಗಿದೆಯೆ?" ರೋಗಿ–"ಇಲ್ಲ, ಡಾಕ್ಟರು ಔಷಧವನ್ನು ಚೆನ್ನಾಗಿ ಕಲಕಿ ತೆಗೆದುಕೊಳ್ಳಲು ಹೇಳಿದ್ದರು. ಮರೆತುಬಿಟ್ಟೆ. ಅದಕ್ಕೆ ಕುಡಿದ ಮೇಲೆ ಹೊಟ್ಟೆಯಲ್ಲಿಯೇ ಕಲಕಲಿ" ಎಂದು ಹೊರಳಾಡುತ್ತಿದ್ದೇನೆ.



—ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು

ವೀರರಾರು ?

ಕೊಟ್ಟ ಕುದುರೆಯನೇರಲರಿಯದೆ ಮತ್ತೊಂದು ಕುದುರೆಯ
ಬಯಸುವವರು ವೀರರೂ ಅಲ್ಲ, ಧೀರರೂ ಅಲ್ಲ.
ಇದು ಕಾರಣ ನೆರೆ ಮೂರುಲೋಕವೆಲ್ಲವು
ಹಲ್ಲಣವ ಹೊತ್ತುಕೊಂಡು ಬಳಲುತ್ತೈದಾರೆ
ಗೊಹೇಶ್ವರನೆಂಬ ಲಿಂಗವನವರೆತ್ತ ಬಲ್ಲರೋ ?

—ಪ್ರಭುದೇವರು

ಮನುಷ್ಯನ ಮನಸ್ಸು ತುಂಬಾ ಚಂಚಲ, ತೀವ್ರವಾದ ಚಪಲತೆಯಿಂದ ಕೂಡಿದ್ದು. ಇರುವುದರಲ್ಲಿ ತೃಪ್ತಿಪಡುವ ಸ್ವಭಾವ ಅವನಿಗಿಲ್ಲ. ಲೌಕಿಕರಲ್ಲಿಯೂ ಅಷ್ಟೇ ಪಾರಮಾರ್ಥಿಕರಲ್ಲಿಯೂ ಅಷ್ಟೆ. ಬಹುಪಾಲು ಜನರಲ್ಲಿ ವಿಚಿತ್ರವಾದ ಅತೃಪ್ತಿ ತುಂಬಿರುತ್ತದೆ. ಅತೃಪ್ತಿ ಮನುಷ್ಯನಿಗಿರಲೇ ಬೇಕು. ತನಗಿಂತಲೂ ಹೆಚ್ಚಿನ ವಿದ್ಯೆ ಗಳಿಸಿದವರನ್ನು ನೋಡಿ, ಜ್ಞಾನ ಸಂಪಾದನೆ ಮಾಡಿದವರನ್ನು ಕಂಡು, ದಾನಧರ್ಮ ಪರೋಪಕಾರ ಒಳ್ಳಿತನ್ನು ಮಾಡುವವರನ್ನು ಕಂಡು ಅತೃಪ್ತಿ ಪಟ್ಟುಕೊಳ್ಳಬೇಕು. ಅತೃಪ್ತಿ ಒಂದು ಉತ್ತಮ ಸಾಧನ, ಜೀವನ ಪಥದಲ್ಲಿ ಮುಂದುವರಿಯಲು. ಆದರೆ ಈ ಅತೃಪ್ತಿ ದುರಾಕಾಂಕ್ಷೆ, ಮತ್ತು ಮತ್ಸರ ಬುದ್ಧಿಯಿಂದ ಕೂಡಿರಬಾರದು.

ಮನುಷ್ಯ ತನ್ನ ಸೋಲಿಗೆ ಇತರರನ್ನು ದೂರುವನು. ಓರ್ವ ಮಹಾನುಭಾವಿ

ಹೇಳುತ್ತಾನೆ. "ಮನುಷ್ಯ ಯಶಸ್ಸನ್ನು ಸಾಧಿಸಿದರೆ ತನ್ನ ಸ್ವಂತ ಬಲದಿಂದ ಸಾಧಿಸಿದೆ ಎಂದು ಹೇಳುತ್ತಾನೆ. ಅಪಜಯ ಹೊಂದಿದರೆ ಅದಕ್ಕೆ ಇನ್ನಿತರರು ಕಾರಣ ಎನ್ನುತ್ತಾನೆ." ಇದನ್ನೇ ಪ್ರಭುದೇವರು ಮಾರ್ಮಿಕವಾಗಿ ಹೇಳುತ್ತಾರೆ, "ಯಾವನೊಬ್ಬ ಸೋತರೆ ಸೋಲಿನ ಕಾರಣವನ್ನು ತನ್ನ ಕುದುರೆಯ ಮೇಲೆ ಹಾಕುತ್ತಾನೆ." ತನಗೆ ಆ ಕುದುರೆಯ ಬದಲು ಇನ್ನೊಂದು ಒಳ್ಳೆಯ ಕುದುರೆಯು ಸಿಕ್ಕಿದ್ದರೆ ತಾನು ಖಂಡಿತಾ ಜಯವನ್ನು ಸಾಧಿಸುತ್ತಿದ್ದೆ ಎನ್ನುತ್ತಾನೆ. "ಈ ಕತ್ತಿಯ ಬದಲು ಇನ್ನೊಂದು ಕತ್ತಿ ಸಿಕ್ಕಿದ್ದರೆ ನಾನು ಶತ್ರುವನ್ನು ನುಚ್ಚುನೂರು ಮಾಡುತ್ತಿದ್ದೆ" ಎಂದು ಪೌರುಷ ಕೊಚ್ಚಿ ತನ್ನ ಸೋಲನ್ನು ಕತ್ತಿಯ ಮೇಲೆ ಹಾಕುತ್ತಾನೆ. ಆದರೆ ಶೂರನಾದವನು ಬರಿ ಕೈಯಲ್ಲಾದರೂ ಹೋರಾಡಿ ಸಾಯುವನೇ ವಿನಾ, ಸೋತು ಬದುಕಿ ಉಳಿಯುವುದಿಲ್ಲ.

ಗುರುವಾಗಿ ಅನೇಕ ಬೋಧಕರಿಗೆ ತರಬೇತಿ ನೀಡುವ ನಮಗೆ ಅನೇಕ ಬಗೆಯ ಶಿಷ್ಯರ ಪ್ರಸಂಗಗಳು ಇದಿರಾಗುತ್ತವೆ. ನಮ್ಮ ಬಳಿ ಓರ್ವ ಶಿಷ್ಯ ಹೆಚ್ಚು ವಿದ್ಯೆ ಕಲಿಯದವನು ಹಲವಾರು ವರ್ಷಗಳಿಂದ ಸೇವೆ ಮಾಡುತ್ತ, ಪ್ರವಚನ ಕಲೆಯನ್ನು ಅಭ್ಯಸಿಸುತ್ತಿದ್ದ. [ಕಲಿತವರಿಗೆ ಮಾತ್ರ ವಿದ್ವತ್ತು ಬರುತ್ತದೆ; ಇಲ್ಲದವರಿಗೆ ಇಲ್ಲ ಎಂಬುದೂ ತಪ್ಪು ಕಲ್ಪನೆ. ಚುರುಕು ಬುದ್ಧಿಯವರಿಗೆ ಉತ್ತಮ ಅವಕಾಶ ಸಿಕ್ಕಾಗ ಹೆಚ್ಚಿನ ವಿದ್ಯಾವಂತರಲ್ಲದಿದ್ದರೂ ಪ್ರತಿಭೆಯನ್ನು ಬೆಳೆಸಿಕೊಳ್ಳುತ್ತಾರೆ]. ವಚನಗಳನ್ನು ಕಷ್ಟಪಟ್ಟು ಬಾಯಿಪಾಠ ಮಾಡುತ್ತಿದ್ದ. ಮತ್ತೆ ಮರೆತು ಬಿಡುತ್ತಿದ್ದ. ಎಷ್ಟು ಕಷ್ಟ ಪಟ್ಟರೂ ಪ್ರವಚನ ಕಲೆ ಅಳವಡಲಿಲ್ಲ. ಅಷ್ಟರಲ್ಲಿ ಪೂಜ್ಯ ಮಾತಾಜಿಯವರು ಆಶ್ರಮಕ್ಕೆ ಬಂದರು. ಒಂದೋ ಎರಡೋ ಪ್ರವಚನಗಳನ್ನು ಅವರು ಸಂಪೂರ್ಣವಾಗಿ ಕೇಳಿರಬಹುದು. ಅಷ್ಟರಲ್ಲಾಗಲೇ ಅವರು ನಿರರ್ಗಳವಾಗಿ ಪ್ರವಚನ ಮಾಡಕಲಿತರು. ಅವರ ಗ್ರಹಣ ಶಕ್ತಿ ಎಷ್ಟು ತೀಕ್ಷ್ಣವಿತ್ತೆಂದರೆ ಏಕಪಾಠಿಯ ರೀತಿಯಲ್ಲಿ ಒಂದೇ ಬಾರಿಗೆ ಕೇಳಿದ್ದನ್ನು ಗ್ರಹಿಸಿಕೊಂಡುಬಿಡುತ್ತಿದ್ದರು. ಪ್ರವಚನ ಕೇಳುತ್ತಲೇ ಅದನ್ನು ವಚನಗಳ ರೂಪದಲ್ಲಿ ಬರೆದುಬಿಡುತ್ತಿದ್ದರು. ಅದನ್ನು ಕಂಡು ನಾನು, ಪ್ರವಚನಕ್ಕೆ ಬರುವ ಸದ್ಭಕ್ತರು ಹರ್ಷಿಸಿದರೂ ಈ ಮೊದಲೇ ಬಂದಿದ್ದ ಶಿಷ್ಯರು ಮತ್ಸರಿಸಿ, "ಗುರೂಜಿಯವರು ನಮಗೆ ಸರಿಯಾಗಿ ತರಬೇತಿ ನೀಡಲಿಲ್ಲ." ಎಂದು ದೂರತೊಡಗಿದಾಗ ನನಗೆ ತುಂಬಾ ನಗು ಬಂದು ಹೇಳುತ್ತಿದ್ದೆ. "ತಮ್ಮಾ, ಮಾತಾಜಿಯವರದು ಈ ಜನ್ಮದ ಸಂಸ್ಕಾರವಲ್ಲಪ್ಪ. ಹಿಂದಿನ ಜನ್ಮದಿಂದಲೇ ತಂದ ಬುತ್ತಿ ಅಗಾಧವಾಗಿದೆ. ಅದಕ್ಕೆ ಮತ್ಸರ ಪಟ್ಟರಾದೀತೆ ? ನೀವೆಲ್ಲ ಈಗ ಗಳಿಸಲು ಆರಂಭಿಸಿದ್ದೀರಿ." ತಮ್ಮ ಶಕ್ತಿ, ಸಾಮರ್ಥ್ಯ ಸಂಸ್ಕಾರದ ಬಲವನ್ನರಿಯದೆ ಅನ್ಯರನ್ನು

ಕಂಡು ಮತ್ಸರಿಸುವುದು, ಇಲ್ಲವೇ ತಮ್ಮ ಸೋಲಿಗೆ ಅನ್ಯರನ್ನು ದೂರುವುದು ಮನುಷ್ಯ ಸಹಜ ಗುಣ.

ತನ್ನಲ್ಲಿ ಯಾವ ಅಭಿರುಚಿ, ಸಾಮರ್ಥ್ಯ ಇದೆಯೋ ಅದನ್ನು ಬೆಳೆಸುತ್ತಾ ಹೋಗಬೇಕು. ತುಂಬಾ ತೀಕ್ಷ್ಣ ಬುದ್ಧಿಮತ್ತೆ ಇರುವವನು ಜ್ಞಾನಯೋಗಿಯಾದರೆ, ಭಾವಜೀವಿಗೆ ಭಕ್ತಿಯೋಗವೇ ಸೂಕ್ತ. ಕರಣ ಇಂದ್ರಿಯಗಳ ಮೇಲೆ ಹತೋಟಿ ಇರುವವನು ಧ್ಯಾನಯೋಗದಲ್ಲಿ ಹೆಚ್ಚು ಆಸಕ್ತನಾದರೆ, ಇದಾವೂ ಇಲ್ಲದವನು ಕಾಯಕಯೋಗ, ದುಡಿಮೆಯ ಮೂಲಕವೇ ಸಂತೃಪ್ತಿಯನ್ನು ಹೊಂದಬಹುದು. ದೀನದಲಿತರ ಸೇವೆ, ವಿದ್ಯಾರ್ಥಿಗಳ ಪೋಷಣೆ ಇಂಥವಕ್ಕೆ ಬೌದ್ಧಿಕ ಪ್ರೌಢಿಮೆಗಿಂತಲೂ ದೈಹಿಕ ಪರಿಶ್ರಮ ಬೇಕು. ಅದರ ಮುಖಾಂತರವೂ ಮನುಷ್ಯ ಪರಿಪೂರ್ಣತ್ವಕ್ಕೆ ಹೋಗಲು ಸಾಧ್ಯ. ಆದರೆ ಈ ತಿಳುವಳಿಕೆಯಿಲ್ಲದೆ ಕೊಂಚವಾದರೂ ವಾಕ್‌ಶಕ್ತಿ, ನೆನಪಿನ ಶಕ್ತಿ ಇಲ್ಲದೆ ಪ್ರವಚನಕಾರನಾಗಬೇಕೆಂದು ಪ್ರಯತ್ನಿಸುವುದು, ಅರ್ಧ ತಾಸಾದರೂ ಕುಳಿತು ಧ್ಯಾನ ಮಾಡಲು ಸಾಧ್ಯವಿಲ್ಲದಷ್ಟು ವಿಕ್ಷಿಪ್ತ ಚಿತ್ತವಿದ್ದವನು, ಎಲ್ಲ ಕೆಲಸ ಕಾರ್ಯಬಿಟ್ಟು ಧ್ಯಾನಾಸಕ್ತನಾಗುವೆನೆಂದು ಕೂಡ್ರುವುದು, ಸಾಧಕನ ಜೀವನವನ್ನು ಪಥಕೆಡಿಸುತ್ತದೆ. ತನ್ನ ಶಕ್ತಿಯನ್ನು ಅದರ ಓಘವನ್ನು, ಸೀಮೆಯನ್ನೂ ಅರಿತು ಅದನ್ನೇ ರೂಢಿಸಿಕೊಳ್ಳುವ ಪ್ರಯತ್ನವನ್ನು ಪ್ರಜ್ಞಾವಂತನು ಮಾಡಬೇಕು. ಅದಲ್ಲದೆ ಕೊಟ್ಟ ಕುದುರೆಯ ಏರಲರಿಯದೆ, ಬಿಟ್ಟು ಬೇರೊಂದು ಕುದುರೆಯನ್ನು ಬೆನ್ನು ಹತ್ತುವವನು ಸಮರ್ಥನಲ್ಲ; ಮಾತ್ರವಲ್ಲ ಅದೂ ಇಲ್ಲದ ಇದೂ ಇಲ್ಲದ ಸ್ಥಿತಿಗೆ ಬರುವನು. 'ಇದ್ದುದು ಕೈಬಿಟ್ಟಿತು, ಕಂಡದ್ದು ಕೈಗೆಟುಕಲಿಲ್ಲ' ಎಂಬ ಪರಿಸ್ಥಿತಿ ಇಂಥವನದಾಗುವುದು. ಎಂಥದೇ ವಿಷಮ ಪ್ರಸಂಗದಲ್ಲಿಯೂ, ಇದ್ದ ಸೌಲಭ್ಯಗಳನ್ನೇ ಇಂಧನವಾಗಿ ಬಳಸಿಕೊಂಡು ಗುರಿ ಮುಟ್ಟುವುದು ವಿವೇಕಿಯ, ವೀರನ ಲಕ್ಷಣ ! ಈ ತಿಳುವಳಿಕೆಯಿಲ್ಲದೆಯೇ ಬಹುಪಾಲು ಜನ ವ್ಯರ್ಥವಾಗಿ ಬಳಲುತ್ತಿದ್ದಾರೆ. ಅವರಿಗೆ ದೇವನ ದರ್ಶನವಾಗಲೀ, ದೈವೀ ಜೀವನದ ಸಂತೃಪ್ತಿಯಾಗಲೀ ದೊರಕದು. ಅತೃಪ್ತಿ ಒಂದು ಸಾಧನವಾಗಿ ಬೇರೊಂದು ಉತ್ತಮಗುರಿ ಸಾಧ್ಯವಾಗಿ ಇರಬೇಕು. ಹಾಗಲ್ಲದೆ ಅತೃಪ್ತಿಯೇ ಒಂದು ಜೀವನದ ಆತ್ಯಂತಿಕ ಮಾನಸಿಕ ಸ್ಥಿತಿಯಾದರೆ ಸಾಧಕನ ಜೀವನ ವ್ಯರ್ಥ. ಹಾಗೆಯೇ ಲೌಕಿಕನದೂ ಕೂಡ, ಬಳಲಿಕೆಯ ವ್ಯರ್ಥದಾರಿ ಅವನದಾಗುವುದು. ★

ದೇವರು ಕಳಿಸುವ ಕಾರ್ಮೋಡಗಳು ನಾಲ್ಕಾರು; ಆದರೆ ನಾವು ಸ್ವತಃ ಸೃಷ್ಟಿಸಿಕೊಳ್ಳುವ ಕಾರ್ಮೋಡಗಳು ಸಾವಿರಾರು. —ರಕ್ಸಿನ್

ಸಮಸ್ಯೆ ಸಮಾಧಾನ!

ಡಿ. ಆರ್. ರಾಮಯ್ಯ, ಆಜಾದ್‌ನಗರ, ಬೆಂಗಳೂರು

★ ಮುಕ್ತಿ ಎಂದರೇನು ? ಮುಕ್ತಿಯ ಸಾಧನಗಳಾವುವು ? ಮತ್ತು ಸಂಸಾರದಲ್ಲಿ ಮುಕ್ತಿ ಸಾಧ್ಯವೆ ? ಸಾಧ್ಯವಾದರೆ ಅನುಸರಿಸಬೇಕಾದ ನಿಯಮಗಳೇನು ?

* 'ಮುಚ್' ಧಾತುವಿನಿಂದ ಹುಟ್ಟಿದ ಶಬ್ದ "ಮುಕ್ತಿ"; ಮುಕ್ತಿ ಎಂದರೆ ಬಿಡುಗಡೆ. ಯಾವುದರಿಂದ ? ಪ್ರಕೃತಿಯಿಂದ ಪುರುಷನ ಬಿಡುಗಡೆ. ಅಂದರೆ ಪ್ರಕೃತಿದತ್ತವಾದ ಕಾಯದಿಂದ ಸತ್‌ಚಿತ್ ಆನಂದ ರೂಪಿಯಾದ ಆತ್ಮನ ಬಿಡುಗಡೆ. ಇದು ಸಾಂಖ್ಯ-ಯೋಗದ ಅಭಿಪ್ರಾಯವಾದರೆ, ಸೇಶ್ವರವಾದಿ ಬಸವ ತತ್ತ್ವದ ಪ್ರಕಾರ ಪ್ರಕೃತಿಯಿಂದ ಆತ್ಮನನ್ನು ಬಿಡುಗಡೆ ಮಾಡಿ, ದೇವನಲ್ಲಿ ನಿಲುಗಡೆ ಮಾಡುವುದು. ಮುಕ್ತಿಗೆ ಸಾಧನಗಳು 5, ಜ್ಞಾನ, ಭಕ್ತಿ, ಕ್ರಿಯೆ, ಧ್ಯಾನ, ಮತ್ತು ಕುಂಡಲಿನಿಯೋಗ. ಮನುಷ್ಯ ತನ್ನ ಅಭಿರುಚಿ ಮತ್ತು ತನ್ನಲ್ಲಿ ಅಂತರ್ಗತವಾಗಿರುವ ಶಕ್ತಿಗೆ ಅನುಸಾರವಾಗಿ ಈ ಯಾವ ಮಾರ್ಗವನ್ನಾದರೂ ಹಿಡಿಯಬಹುದು. ಅಥವಾ ಷಟಸ್ಥಲ ದರ್ಶನ ಹೇಳುವಂತೆ ಎಲ್ಲವನ್ನೂ ಸಮಾವೇಶ ಮಾಡಿಕೊಂಡೂ ಸಾಗಬಹುದು. ಸಂಸಾರದಲ್ಲಿ ಮುಕ್ತಿ ಸಾಧ್ಯವೆ ? ಸಂಸಾರದಿಂದ ಬಿಡುಗಡೆ ಹೊಂದುವುದಕ್ಕೇ ಮುಕ್ತಿ ಎನ್ನುವುದು. ಇಲ್ಲಿ ಸಂಸಾರ ಅಂದರೆ ಹೆಂಡತಿ-ಮಕ್ಕಳಿರುವ ತಾಣ, ನೌಕರಿ, ಜವಾಬ್ದಾರಿ ಎಂದಲ್ಲ ; ನಾನು ನನ್ನಿಂದ ನನಗೆ ನನಗಾಗಿ ಎಂಬ 'ನಾ' ನಿನ ಅಂಟು. ಈ 'ನಾ' ನಿನ ಅಂದರೆ ಅಹಂಕಾರ-ಸ್ವಾರ್ಥಗಳ ಅಂಟನ್ನು ಕಳೆದುಕೊಂಡು ನೌಕರಿ, ಹೆಂಡತಿ ಮಕ್ಕಳ ಮಧ್ಯೆ ಇದ್ದರೂ ತಪ್ಪಾಗದು, ಬಾಧಕವಾಗದು. ಅನುಸರಿಸಬೇಕಾದ ನಿಯಮಗಳೆಂದರೆ ದಿನ ನಿತ್ಯದಲ್ಲಿ ಪೂಜೆ-ಪ್ರಾರ್ಥನೆ-ಧ್ಯಾನ. ನಂತರ ಅಧ್ಯಯನ. ಕರ್ತವ್ಯ ನಿರ್ವಹಣೆ. ಚಿತ್ತಶಾಂತಿಯನ್ನು ಸದಾ ಕಾಪಾಡಿಕೊಳ್ಳುವುದು ಮತ್ತು ಪರಮಾತ್ಮನಲ್ಲಿ ಅನನ್ಯ ಶರಣಾಗತಿ. ಗುರುಮುಖೇನ ದೀಕ್ಷಾ ಸಂಸ್ಕಾರ ಪಡೆದು ಸಾಧನಾ ನಿರತನಾಗುವುದು. ಅಂತರಂಗ ಶುದ್ಧಿ, ಅನ್ಯರಿಗೆ ಅಹಿತ ಬಯಸದಿರುವುದು, ಯಾರಾದರೂ ಅಹಿತ ಬಯಸಿದರೆ ಚಿತ್ತ ಸಮತೆಯಿಂದ ಸ್ವೀಕರಿಸಿ ತೀರ್ಪು ಕೊಡುವ ಹೊಣೆಯನ್ನು ದೇವರಿಗೆ ವಹಿಸುವುದು. ಈ ಎಲ್ಲ ಸಾಧನಗಳಿಂದ ಮನುಷ್ಯ ಜೀವನ್ಮುಕ್ತತ್ವ ಹೊಂದಲು ಸಾಧ್ಯವಿದೆ.

ಪರಮಶಿವ, ದಾವಣಗೆರೆ

★ ಧಾರ್ಮಿಕವಾದ ಕೆಲವು ಸಂದೇಹಗಳಿಗೆ ನೀವು ಉತ್ತರ ಕೊಡುವ ಅಸಾಮಾನ್ಯ ರೀತಿ ಕಂಡು ನಾವು ಬೆರಗಾಗಿದ್ದೇವೆ. ಸಮರ್ಪಕವಾಗಿ ಉತ್ತರಿಸುತ್ತೀರಿ. ಆದರೆ ಕೆಲವು ವಾಚಾಳಿ, ಪೀತ ಪತ್ರಿಕೆಗಳು ಮಾಡುವ ಸಣ್ಣ ಟೀಕೆಗಳಿಗೂ ಉತ್ತರಿಸುವುದಿಲ್ಲ. ಏಕೆ ಅವರನ್ನು ಕಂಡರೆ ಹೆದರಿಕೆಯೆ ?

* ಹೆದರಿಕೆಯಲ್ಲ ಉದಾಸೀನ, ನಿರ್ಲಿಪ್ತತೆ. ಅಕ್ಕಮಹಾದೇವಿ ಹೇಳುವುದನ್ನು ಕೇಳಿಲ್ಲವೆ ? ಹಂದಿಯೂ ಮದಕರಿಯೂ ಒಂದೇ ದಾರಿಯಲ್ಲಿ ಸಂಧಿಸಿದಾಗ, ಹಂದಿ(ಯ ಕೊಳಕಿ)ಗೆ ಬೇಸರಪಟ್ಟು ಆನೆಯು ಪಕ್ಕಕ್ಕೆ ಸರಿದ ಮಾತ್ರಕ್ಕೆ, ಆ ಹಂದಿಯು ಸಿಂಹವಾಗಲಿಲ್ಲ, ಆನೆಯು ಹೆದರಿದಂತಾಗಲಿಲ್ಲ.

ಎ. ವಿಶ್ವನಾಥ, ಚಿಂಚೋಳಿ, ಗುಲ್ಬರ್ಗಾ

★ "ಸತ್ಯ ಶುದ್ಧ ಕಾಯಕ ಮಾಡಿದವನೇ ಶರಣ" ಎಂದು ನೀವು ಪ್ರವಚನದಲ್ಲಿ ತುಂಬಾ ಹೇಳುತ್ತೀರಿ. ಆದರೆ ಸರ್ಕಾರಿ ಶಿಕ್ಷಕನಾಗಿ ಕೆಲಸ ಮಾಡುತ್ತಿರುವ ಓರ್ವರು ಕಾಯಕವನ್ನು ತ್ಯಜಿಸಿ ನಿಮ್ಮ ಸಂಸ್ಥೆಗೆ ಸೇವೆ ಮಾಡಲು ಬಂದರೆ ಆಗ ಅವರ ಕಾಯಕಕ್ಕೆ ಚ್ಯುತಿ ಬಂದಂತೆ ಆಗಲಿಲ್ಲವೆ? ಮಾಡಿದವರು ಮಾಡಿಸಿಕೊಂಡವರು ಉಭಯತರೂ ಕಾಯಕ ತತ್ತ್ವಕ್ಕೆ ಚ್ಯುತಿ ತಂದಂತಾಗಲಿಲ್ಲವೆ?

* ''ಕಾಯಕವನ್ನು ಪ್ರತಿಯೊಬ್ಬರೂ ಮಾಡಲೇಬೇಕು" ಇದು ಬಸವಣ್ಣನ ಕಟ್ಟಳೆ. ಕಾಯಕ ಬಿಟ್ಟು ಸೋಮಾರಿಯಾದರೆ ಅದು ಅಪರಾಧ ; ಒಂದು ಕಾಯಕ ತ್ಯಜಿಸಿ ಅದಕ್ಕಿಂತಲೂ ಉತ್ತಮವಾದ ಇನ್ನೊಂದು ಕಾಯಕ ಕೈಗೊಂಡರೆ ಅದು ಅಪರಾಧವಲ್ಲ ಸೇವೆ, ತ್ಯಾಗ ! ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಅನೇಕರು ತಮ್ಮ ಕಾಯಕ ಬಿಟ್ಟು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಗಳಾದರು. ಹಾಗೆ ಭಾಗಿಗಳಾಗದಿದ್ದರೆ ನೀವಿಂದು ಸ್ವತಂತ್ರರಾಗಿ ಉಸಿರಾಡಿಸಲು ಬರುತ್ತಿತ್ತೇ ? ಹಾಗೆಯೇ ಒಂದು ಕಾಯಕ ತ್ಯಜಿಸಿ, ಅದಕ್ಕಿಂತಲೂ ಉದಾತ್ತವಾದ ಸಮಷ್ಟಿಯುದ್ಧಾರದ ಸೇವೆಯಲ್ಲಿ ತೊಡಗುವುದು ಎಲ್ಲರಿಗೂ ಸಿದ್ಧಿಸುವಂತಹುದಲ್ಲ. ಅಸಾಮಾನ್ಯ ತ್ಯಾಗಪೂರ್ಣ ಕಾಯಕವಿದು.

ಸುಮಂಗಲಾ ಪ್ರಭು ಅಂಗಡಿ, ಮಂಗಳೂರು

★ ನೀರಿನ ಅಭಾವದ ಮೂಲಕ ಸಂಜೆ ಸ್ನಾನ ಮಾಡದೆ ಲಿಂಗಪೂಜೆ ಮಾಡಿದರೆ ತಪ್ಪೇ ?

* ತಪ್ಪೇನಿಲ್ಲ. ಸ್ನಾನ ಮಾಡುವುದು ಆರೋಗ್ಯಕ್ಕಾಗಿ, ಶುಚಿತ್ವಕ್ಕಾಗಿ. ಬೆಳಗಿನ

ಸ್ನಾನವೇ ಎಲ್ಲರಿಗೂ ಸಾಕು. ವಿಶೇಷ ವ್ರತನಿಯಮಗಳಿಗಾಗಿಯೇ ಬದುಕಿರುವ, ವ್ರತತೊಟ್ಟ ಸ್ವಾಮಿ ಸನ್ಯಾಸಿಗಳು ಬೇಕಾದರೆ ಎರಡು ಹೊತ್ತು ಮಾಡಲಿ ಬೇಸಿಗೆ ಕಾಲದಲ್ಲಿ ಮಂಗಳೂರಿನಂತಹ ಪ್ರದೇಶದಲ್ಲಿ ವಾಸಿಸುವವರು, ಬೆವರಿನ ತಾಪ ತಾಳಲಾರದೆ ಸಂಜೆಯ ವೇಳೆಯಲ್ಲೂ ಮಾಡುವುದುಂಟು. ಹಾಗೆ ಮಾಡಿದರೆ ಅಡ್ಡಿಯಿಲ್ಲ. ಸ್ನಾನವು ಒಂದು ಸಾಧನ ಮಾತ್ರ, ಸಿದ್ಧಿಯಲ್ಲ. ಅಶಾಂತಿಯೇ ಮೈಲಿಗೆ ; ಆನಂದವೇ ಮಡಿ. ಪೂಜೆ ಮಾಡಿ ಆನಂದದ ಮಡಿ ಪಡೆದುಕೊಳ್ಳಿ, ಸಾಕು.

* ಶರಣ ಸತಿ - ಲಿಂಗಪತಿ ತತ್ತ್ವ ಒಪ್ಪಿ ಸ್ತ್ರೀ ಪುರುಷ ಉಭಯತರೂ ಲಿಂಗಯ್ಯನಿಗೆ ಸತಿಯರಾದ ಬಳಿಕ ಸನ್ಯಾಸಿನಿಯರು ಕಿವಿ, ಕೈಗೆ ರುದ್ರಾಕ್ಷಿ ಧರಿಸುವಂತೆ ಸನ್ಯಾಸಿಗಳೂ ಏಕೆ ಧರಿಸಬಾರದು ?

★ ಧರಿಸಬಹುದು, ಧರಿಸಬೇಕು. ಶಿವನು ಧರಿಸಿಲ್ಲವೆ ? ಬಸವಣ್ಣನವರು ಧರಿಸುತ್ತಿದ್ದರು. ಅವರ ಒಂದು ವಚನ ಹೀಗಿದೆ. ''ಹಸ್ತಕಡಗ ಕೈಗಧಿಕ ನೋಡಾ ಕೊಡಲಹುದು ಕೊಳ್ಳಲಾಗದು. ಬಾಹುಬಳೆ ತೋಳಿಂಗಧಿಕ ನೋಡಾ ; ಪರವಧುವ ನಪ್ಪಲಾಗದು; ಕರ್ಣಕುಂಡಲ ಕಿವಿಗಧಿಕ ನೋಡಾ, ಶಿವನಿಂದೆಯ ಕೇಳಲಾಗದು; ಕಂಠ ಮಾಲೆ ಕೊರಳಿಂಗಧಿಕ ನೋಡಾ, ಅನ್ಯ ದೈವಕ್ಕೆ ತಲೆಬಾಗಲಾಗದು." ಸಂಕೋಚದಿಂದ ಕೆಲವು ಸನ್ಯಾಸಿಗಳು ಧರಿಸುವುದಿಲ್ಲ ಮಾತ್ರ,

ಇಂಡಿ ರಾಮನಾಥ, 586209

★ ಈ ಮನುಷ್ಯನಿಗೆ ಜ್ಞಾಪಕ ಶಕ್ತಿ ಎಂಬುದೇ ಆದಿಯಿಂದಲೂ ಇರದಿದ್ದರೆ ಆತನ ಗತಿ ಯಾವ ಪರಿಸ್ಥಿತಿಯಲ್ಲಿ ಇರುತ್ತಿತ್ತು ?

* ಉಳಿದೆಲ್ಲ ಪ್ರಾಣಿಗಳಾದ ಕತ್ತೆ, ಕುರಿ, ಹಂದಿ, ನಾಯಿಗಳಂತೆ ! ಸಾಹಿತ್ಯ-ಧರ್ಮ, ನೀತಿ-ನಿಯಮಗಳಿಲ್ಲದೆ ನೈಸರ್ಗಿಕ ಪ್ರವೃತ್ತಿಯ ಬದುಕು ಅವನದಾಗಿ ಊಟ ನಿದ್ರೆಗಳತಾಣ, ಕ್ರೋಧ-ಕಾಮಗಳ ರಣಾಂಗಣ ಆಗುತ್ತಿತ್ತು.

★ ಪರಭಾಷೆಗೆ ಮನಸೋಲುವ ಭಾರತೀಯರು ಸ್ವಂತ ತಮ್ಮ ಹೆತ್ತ ತಾಯಿಗೆ ದ್ರೋಹ ಬಗೆದಂತೆ ಅಲ್ಲವೆ ?

* ಉತ್ತರಭಾರತ-ದಕ್ಷಿಣಭಾರತ ಎಂಬ ಭಾಷಾ ಭೇದದಿಂದಾಗಿ ಪೃಥ್ವಿರಾಜ ಜಯಚಂದ್ರರಂತಹ ವೈಷಮ್ಯದಿಂದ, ಆಂಗ್ಲಭಾಷೆಯ ಘೋರಿ ಮಹಮ್ಮದನಿಗೆ ಆಹ್ವಾನ ನೀಡುತ್ತಿದ್ದಾರೆ. ಒಂದು ಸಂಪರ್ಕಭಾಷೆ ಈ ಸಂಕೀರ್ಣನಾಡಿಗೆ ಬೇಕೇ ಬೇಕು. ಹೀಗಾಗಿ ಇಂಗ್ಲಿಷ್ ಅನಿವಾರ್ಯ. ಆದರಿಷ್ಟೇ, ಹೆತ್ತ ತಾಯಿಯನ್ನು ಕಸದ ಮೂಲೆಯಲ್ಲಿ ಕುಳ್ಳಿರಿಸಿ, ಸ್ನೇಹಿತನ ತಾಯಿಗೆ ಅಗ್ರಪೀಠ ಕೊಡಬಾರದು. ★

ಧನ ಸಹಾಯ

1. ಎ. ವಿ. ಕೃಷ್ಣಸ್ವಾಮಿಯವರು, ವಿಶ್ವೇಶ್ವರಪುರಂ, ಬೆಂಗಳೂರು ಅವರು ಶಾಲೆಯ ಉದ್ಘಾಟನಾ ಸಮಾರಂಭದಂದು 500-00 ರೂಗಳನ್ನು ಸಲ್ಲಿಸಿದ್ದಾರೆ.
2. ಶರಣೆ ಉಮಾದೇವಿ ಡಿ. ಎಂ. ಚಂದ್ರಶೇಖರ್ ಅವರು ಶಾಲಾಕಟ್ಟಡದ ಉದ್ಘಾಟನೆಯಂದು 251-00ರೂಗಳನ್ನು ದಾಸೋಹಗೈದಿದ್ದಾರೆ.
3. ಮೈಸೂರಿನ ತ್ಯಾಗರಾಜ ಸರ್ಕಲ್‌ನ ಶ್ರೀ ಪ್ರಸನ್ನ ವಿಘ್ನೇಶ್ವರ ಭಕ್ತ ಮಂಡಳಿಯವರು 1001-00ರೂ.ಗಳನ್ನು ಸಲ್ಲಿಸಿದ್ದಾರೆ.
4. ಶರಣೆ ಅನ್ನಪೂರ್ಣಾ, ಶಿಕ್ಷಕಿ, ಮೈಸೂರು ತಮ್ಮೊಂದು ಸಂಕಲ್ಪ ಈಡೇರಿದ್ದಕ್ಕಾಗಿ 500-00ರೂ. ದಾಸೋಹ ಮಾಡಿದ್ದಾರೆ.
5. ಭದ್ರಾವತಿಯ ಶ್ರೀ ಷಡಕ್ಷರಪ್ಪನವರ ಶ್ರೀಮತಿಯವರಿಗೆ ಗಂಡುಮಗು (ನಾಲ್ಕು ಹೆಣ್ಣು ಮಕ್ಕಳ ನಂತರ) ಹುಟ್ಟಿದ ಕಾರಣ ಮತ್ತು ಶರಣೆ ಲಕ್ಷ್ಮಿದೇವಿ ಶಿರೋಳರು ಬಸವಣ್ಣನವರ ಅನುಗ್ರಹದಿಂದ ವಿಶೇಷ ಒಳ್ಳಿತನ್ನು ಕಂಡ ಕಾರಣ ಉಭಯತರೂ ತಲಾ 101-00 ರೂಗಳಂತೆ ದಾಸೋಹಗೈದಿದ್ದಾರೆ.

ಶರಣ ಬಿ. ಎಂ. ರುದ್ರಶೆಟ್ಟಿಯವರು ಹತ್ತು ಸಾವಿರ ರೂ.ಗಳ ವಾಗ್ದಾನ ಮಾಡಿದ್ದು, 2,500 ರೂ.ಗಳ ಕಂತಿನಂತೆ ಕಟ್ಟುತ್ತಿದ್ದು ಈಗ 3ನೆಯ ಕಂತನ್ನು ಕಳಿಸಿದ್ದಾರೆ.

ಮಂತ್ರಪುರುಷ, ವಿಶ್ವಗುರು ಬಸವೇಶ್ವರರು ಎಲ್ಲರಿಗೂ ಆಯುರಾರೋಗ್ಯಭಾಗ್ಯ ಸಕಲ ಸಂಪದ ನೀಡಲೆಂದು ಹಾರೈಸುತ್ತೇವೆ.

ಛೇರ್ಮನ್, ವಿ. ಕೆ. ಮಿ.
ಬೆಂಗಳೂರು.

ನಗೆಹನಿ :

ರೋಗಿಯನ್ನು ಪರೀಕ್ಷಿಸಿದ ಬಳಿಕ ಡಾಕ್ಟರರು ಕೇಳಿದರು :

"ನಿಮಗೆ ಶಸ್ತ್ರ ಚಿಕಿತ್ಸೆಬೇಕಾದೀತು ಎಂದು ನಾನು ಹೇಳಿದರೆ, ಆದರ ವೆಚ್ಚ ಸಹಿಸಿಕೊಳ್ಳಬಲ್ಲಿರೇನು ?"

"ನನ್ನ ಹತ್ತಿರ ಹಣ ಇಲ್ಲ ಎಂದಾದರೆ ಶಸ್ತ್ರಚಿಕಿತ್ಸೆ ಆಗತ್ಯವಿಲ್ಲ ಎಂದು ನೀವು ಹೇಳಬಹುದೇ ?"

★

ಆಗಸ್ಟ್-ಸೆಪ್ಟೆಂಬರ್ ತಿಂಗಳಲ್ಲಿ ೧೫೧ ರೂ. ಸಲ್ಲಿಸಿ ಆಜೀವ ಸದಸ್ಯರಾದ ಶರಣರುಗಳು

ಶರಣ/ಶರಣೆಯರುಗಳಾದ,

1.	897	ಶರಣೆ ನಿರ್ಮಲಾ ಜಯದೇವ, ಬೆಂಗಳೂರು–11.
2.	898	ಎಸ್. ಜಿ. ಹೋಳಿಕಟ್ಟಿ, ಬೆಂಗಳೂರು–11.
3.	899	ಸಿ. ಕಲಾವತಿ, ಬೆಂಗಳೂರು–3.
4.	900	ಯು. ಡಿ. ಪುಟ್ಟಸ್ವಾಮಿಗೌಡ, ಬೆಂಗಳೂರು–10.
5.	901	ಟಿ. ಎಂ. ವೀರಶೆಟ್ಟಿ, ಬೆಂಗಳೂರು–21.
6.	902	ಅಗಳಿ ವೀರಣ್ಣ, ಹೊಸಪೇಟೆ.
7.	903	ಕಾಡಾದಿ ವೀರಶೈವ ಧರ್ಮಾದಾಯನಿಧಿ, ಶೊಲ್ಲಾಪುರ.
8.	904	ಹೆಚ್. ಎ. ಶರಣಪ್ಪ, ಬಸವೇಶ್ವರನಗರ, ಬೆಂಗಳೂರು.
9.	905	ಬಿ. ರಾಜಪ್ಪ, ಮಾರುತಿ ಬಡಾವಣೆ, ಬೆಂಗಳೂರು.
10.	906	ಆರ್. ಎನ್. ಬೊಮ್ಮಣ್ಣ, ರಾಯಚೂರು.
11.	907	ಜಿ. ಹೆಚ್. ಶಿವಮಠ, ಮನ್ನಾಎಖ್ಖೇಳಿ.
12.	908	ಪ್ರಸನ್ನ ವಿಘ್ನೇಶ್ವರ ಭಕ್ತಮಂಡಳಿ, ಮೈಸೂರು.
13.	909	ಸುಮಂಗಲಾಪ್ರಭು ಅಂಗಡಿ, ಮಂಗಳೂರು.
14.	910	ಕೆ. ಚಿಕ್ಕಪ್ಪ ಮತ್ತು ಮಕ್ಕಳು, ಚಿಕ್ಕಬಳ್ಳಾಪುರ.
15.	911	ಶ್ರೀಮತಿ ಕೋಮಲಾ ಎಮ್. ಎನ್. ಶಿವಾನಂದ, ಚಿಕ್ಕಬಳ್ಳಾಪುರ.

ಕಲ್ಯಾಣ ಕಿರಣ ಕಂತಿನ ಆಜೀವ ಸದಸ್ಯತ್ವ

ಒಂದೇ ಬಾರಿಗೆ ಪೂರ್ತಿ ಹಣ ಕಟ್ಟಲಿಕ್ಕಾಗದೆ ಆಜೀವ ಸದಸ್ಯರಾಗಬೇಕೆನ್ನುವವರು ಕಂತಿನ ಮೇಲೆ ಕಟ್ಟಬಹುದು. ಮೊದಲ ಕಂತು 26 ರೂಪಾಯಿಗಳು, ನಂತರ ತಿಂಗಳಿಗೆ 10 ರೂ.ಗಳಂತೆ ಕಟ್ಟುತ್ತಾ ಹೋಗಬಹುದು. 151 ಆದ ದಿವಸ ಹಣ ತುಂಬುವುದನ್ನು ನಿಲ್ಲಿಸಬಹುದು. ಆಜೀವ ಸದಸ್ಯರೆಂದು ಪರಿಗಣಿಸಿ ಪತ್ರಿಕೆ ಕಳಿಸಲಾಗುತ್ತದೆ.

—ಸಂ.

ದೃಷ್ಟಾಂತ ಕತೆ

ತ್ರಿನೇತ್ರಿ

ಮಮತೆಯ ಮಕ್ಕಳೇ,

ಯಾವಾಗಲೂ ಮಕ್ಕಳು ವಿಧೇಯರಾಗಿರಬೇಕು ; ಪಾಠಪ್ರವಚನಗಳಲ್ಲಿ ಆಸಕ್ತರಾಗಿರಬೇಕು. ಚಾಡಿ ಕೇಳುವುದು ಮುಖ್ಯವಾಗಿ ಹೇಳುವುದು ಅಭ್ಯಾಸ ಮಾಡಬಾರದು. ಇಲ್ಲದ್ದು ಇದ್ದದ್ದು ಹೇಳಿ ದೊಡ್ಡವರ ನಡುವೆ ಭಿನ್ನಾಭಿಪ್ರಾಯ ತಂದು ಹಾಕಬಾರದು. ಇಂತಹ ಕುತಂತ್ರ ಬುದ್ಧಿಯಿಂದ ಸಂಸಾರಗಳು ಹಾಳಾಗುವವು ; ಪತಿ–ಪತ್ನಿಯರಲ್ಲಿ ವಿರಸ ಹುಟ್ಟುವುದು ; ಸಂಘಸಂಸ್ಥೆಗಳು ಒಡೆದು ಸಿಡಿಯುವುವು. ಪಕ್ಷ–ಪಂಗಡಗಳು ಛಿದ್ರವಿಛಿದ್ರವಾಗುವುವು. ಯಾವಾಗಲೂ ಕಟ್ಟುವುದು ಕಷ್ಟದ ಕೆಲಸ, ಒಡೆಯುವುದು ಸುಲಭವಾದ ಕೆಲಸ. ಅಂಥ ಕುತಂತ್ರ ಬುದ್ಧಿಯ ಹುಡುಗನ ಕಥೆಯೊಂದನ್ನು ಹೇಳುತ್ತೇನೆ ಕೇಳಿ

ಒಂದು ಊರಿನಲ್ಲಿ ಕಿಟ್ಟ ಎಂಬ ಹುಡುಗನಿದ್ದ. ಅವನು ತುಂಬಾ ತುಂಟ. ಸದಾ ಓದದೆ ಬರೆಯದೆ ತುಂಟ ಹುಡುಗರೊಡನೆ ಆಟವಾಡುತ್ತ ಕಾಲಕಳೆಯುತ್ತಿದ್ದ. ಒಂದು ದಿನ ತಾಯಿ ಹಬ್ಬಕ್ಕೆಂದು ರವೆಉಂಡೆ, ಚಕ್ಕುಲಿ ಮಾಡಿದ್ದಳು. ಹೋಗಿ ಕೇಳಿದ. ಆಕೆ ಕೊಡುವಷ್ಟು ಕೊಟ್ಟು 'ಸಾಕಿನ್ನು' ಎಂದಳು "ಇನ್ನಷ್ಟು ಬೇಕು" ಎಂದ. "ಬೇಡ ಆರೋಗ್ಯವು ಕೆಡುತ್ತದೆ ಮತ್ತು ಮಾಡಿಟ್ಟಿದ್ದನ್ನು ಒಂದೇ ದಿನದಲ್ಲಿ ತಿಂದು ಮುಗಿಸಬಾರದು. ದಿನಾಲು ಅಷ್ಟಷ್ಟು ತಿನ್ನುವೆಯಂತೆ" ಎಂದಳು ತಾಯಿ. "ಅಮ್ಮಾ ನೀನು ಕೊಡದಿದ್ದರೆ ನಿನ್ನ ಮೇಲೆ ಅಪ್ಪನಿಗೆ ಚಾಡಿ ಹೇಳ್ತೀನಿ" ಎಂದ. "ನಿನಗೆ ಬೇಕಾದ್ದು ಮಾಡಿಕೋ ಹೋಗು. ನಾನು ಕೊಡಲ್ಲ" ಎಂದಳು ತಾಯಿ. ತುಂಟನೂ, ಧೂರ್ತನೂ, ಹಠಮಾರಿಯೂ ಆದ ಮಗ ಸೂಕ್ತ ಸಮಯಕ್ಕೆ ಹೊಂಚು ಹಾಕುತ್ತಿದ್ದ.

ಒಂದು ದಿನ ತಂದೆ ತನ್ನ ಆಫೀಸಿನ ಕೆಲಸ ಮುಗಿಸಿಕೊಂಡು ಮನೆಗೆ ಬರುವಾಗ. ಇವನು ಬಾಗಿಲು ಬಳಿಗೆ ಹೋಗಿ "ಅಪ್ಪಾ ಅಪ್ಪಾ, ಅಲ್ಲೊಬ್ಬ ಅಪ್ಪ...."ಎಂದು

ಕೋಣೆಯತ್ತ ಕೈ ತೋರಿದ. ತಂದೆಯ ಮನಸ್ಸು ಖಿನ್ನವಾಯಿತು. ಸಣ್ಣ ಹುಡುಗನ ಮುಂದೆ ಮಾತನಾಡುವುದೇಕೆಂದು ಸುಮ್ಮನಾಗಿ ಮೌನವಾಂತ. ಆದರೆ ಅವನ ಹೆಂಡತಿಯ ಬಗ್ಗೆ ಬೇಸರ ಬೆಳೆಯಿತು. ಮಾತನ್ನು ಕಡಿಮೆ ಮಾಡಿದ. ಮೊದಲಿನ ವಿಶ್ವಾಸ ಪ್ರೀತಿ ಕುಂದಿ ಹೋಯಿತು. ಇದೇಕೆ ಹೀಗೆ ಎಂದು ಪತ್ನಿ ಎಷ್ಟು ಕೇಳಿದರೂ ಮುಖ ತಿರುಗಿಸಿ ಓಡಾಡತೊಡಗಿದ. ತನ್ನನ್ನು ವಂಚಿಸಿ ತನ್ನ ಸತಿ ಯಾವುದೋ ಕೆಟ್ಟ ಕೆಲಸಕ್ಕೆ ಇಳಿದಿದ್ದಾಳೆ ಎಂದು ಭಾವಿಸಿದ. ಮನೆಯ ವಾತಾವರಣ ಗಂಭೀರ ವಾಯಿತು. ಹೆಂಡತಿಗೆ ಆಶ್ಚರ್ಯವೆನಿಸಿದರೂ ಭಯಪಟ್ಟು ತನ್ನ ಪಾಡಿಗೆ ತಾನು ಇರ ತೊಡಗಿದಳು.

ಮತ್ತೊಂದು ದಿನ ಮಗ ಬಂದು ಇನ್ನಷ್ಟು ಹೆಚ್ಚು ತಿಂಡಿಗೆ ಒತ್ತಾಯಿಸಿ, "ನೀನು ಕೊಟ್ಟರೆ ಅಪ್ಪ ನಿನ್ನೊತೆ ಮಾತಾಡೋ ಹಾಗೆ ಮಾಡ್ತೀನಿ" ಎಂದ. ಆಗ ಇವಳಿಗೆ ಈ ಕುಟಿಲ ತಂತ್ರ ಮಗನದೇ ಇರಬೇಕು ಎಂಬ ಸುಳುಹುದೋರಿತು. ನೋಡೋಣ ಹೇಗೆ ಮಾಡ್ತಾನೋ ಎಂದುಕೊಂಡು ಕೇಳಿದಷ್ಟು ತಿಂಡಿಕೊಟ್ಟಳು. ಖುಷಿಗೊಂಡ ಮಗ ಸಂಜೆಗಾಗಿ ಕಾಯುತ್ತಿದ್ದ. ಇನ್ನೂ ಗೇಟಿನ ಬಳಿ ತಂದೆ ಇರು ವಾಗಲೇ "ಅಪ್ಪಾ ಅಪ್ಪಾ, ಒಳಗೊಬ್ಬ ಅಪ್ಪ" ಎಂದ. "ಇವತ್ತು ಆ ಧೂರ್ತ ಸಿಕ್ಕಿ ಬೀಳುತ್ತಾನೆ" ಎಂದು ಚುರುಕಾಗಿ ಒಳ ಬಂದ ತಂದೆ. "ಎಲ್ಲಿ ಎಲ್ಲಿ" ? ಎಂದು ಆತುರ ದಿಂದ ಕೇಳಿದ. "ಅಲ್ಲಿ, ಆ ಕೋಣೆಯಲ್ಲಿ" ಅದು ತನ್ನ ಕೋಣೆ. ಅಬ್ಬಾ ! ಎಂಥ ಕೆಟ್ಟ ಧೈರ್ಯದ ಹೆಂಗಸು ತನ್ನ ಪತ್ನಿ ಎಂದುಕೊಂಡ. ಬಾಗಿಲು ದೂಡಿದ. ಒಳಹೊಕ್ಕ. "ಎಲ್ಲೋ....ಯಾರೂ ಕಾಣ್ತಾಯಿಲ್ಲ" ಮಗನನ್ನು ಕೇಳಿದ. "ಬಾ ಇಲ್ಲಿ, ನಿಂತುಕೋ, ಕನ್ನಡಿಯೊಳಗಣ ಪ್ರತಿಬಿಂಬದತ್ತ ತೋರಿ, "ಇವನು ನಮ್ಮ ಅಪ್ಪ. ನೀನೊಂದು ಇದೊಂದು. ಎರಡು ಅಪ್ಪಾ." ತಂದೆ ಸ್ತಂಭೀಭೂತನಾದ. ಹಾಗಾದರೆ ನೀನು ಮೊನ್ನೆ ಹೇಳಿದ್ದು ಇವನನ್ನು ಕುರಿತೆ? " ಹೌದು, ಇದೇ ಅಪ್ಪಾ. "ಮಗನ ಮುದ್ದಾಟ ಮತ್ತು ಪೆದ್ದಾಟಕ್ಕೆ ಏನೂ ತಿಳಿಯದೆ ದಿಗ್ಭ್ರಾಂತನಾದ ತಂದೆ ತನ್ನ ಪತ್ನಿಯ ಬಗೆಗೆ ತಳೆದ ಭಾವನೆಗೆ ಮಮ್ಮಲ ಮರುಗಿದ. ಮತ್ತೆ ಆದರದಿಂದ ಮಾತ ನಾಡಿಸಿದ. ಮುಂಚಿನ ಶಾಂತಿ ಸಮಾಧಾನಗಳು ಮನೆಯಲ್ಲಿ ನಲಿಯತೊಡಗಿದವು.

ತನ್ನ ಸ್ವಾರ್ಥ ಸಾಧನೆಗೆ ಎಂಥ ಕುಟಿಲ ತಂತ್ರವನ್ನು ಮಗ ಹೂಡಿದನೋ ಹಾಗೆ ಈ ಜಗತ್ತಿನಲ್ಲೂ ಇಂಥ ಭೇದನ ತಂತ್ರವನ್ನು ಕೆಲವರು ಹೂಡುವುದುಂಟು. ಇಲ್ಲದ ಕಲ್ಪನೆ ಹುಟ್ಟಿಸಿ ಆತ್ಮೀಯತೆಯಿಂದ ಇರುವವರಲ್ಲಿ ಭಿನ್ನಾಭಿಪ್ರಾಯ ಮೂಡಿಸಿ ಅನ್ಯರು ತೊಂದರೆಗೊಳಗಾದಾಗ ತಾವು ಸಂತೋಷ ಪಡುವರು. ಇಂಥ ಕುಟಿಲತನ ಸರ್ವಥಾ ಒಳ್ಳೆಯದಲ್ಲ. ಆದರಿಂದ ದೊಡ್ಡ ದೊಡ್ಡ ಆಘಾತಗಳಾಗುವುವು ಎಂಬುದನ್ನು ಎಲ್ಲರೂ ಕಲಿಯಬೇಕು.

(ಕೇಳಿದ್ದು)

ಮೂಗಿನ ಅಲರ್ಜಿಗೊಂದು ಪರಿಹಾರ ಜಲನೇತಿ

ಮಾತಾಜಿ

ನನಗೆ ಕೆಲವಾರು ವರ್ಷಗಳಿಂದ ಮೂಗಿನ ಅಲರ್ಜಿ ತುಂಬಾ ಕಾಟ ಕೊಡು ತ್ತಿತ್ತು. ಮುಖ್ಯವಾಗಿ ಧೂಳು, ಒಗ್ಗರಣೆಯ ಘಾಟು, ಕಟ್ಟಿಗೆಯ ಹೊಗೆ, ಊದಿನ ಕಡ್ಡಿಯ, ಧೂಪದ ಹೊಗೆ, ದಾರಿಯಲ್ಲಿ ಹೋಗುವ ಲಾರಿ, ಬಸ್ಸು, ಕಾರುಗಳು ಉಗುಳುವ ಧೂಮ ಇವು ಕಾರಣ. ಆರಾಮುವಾಗಿರುವಾಗಲೇ ಇದ್ದಕ್ಕಿದ್ದಂತೆಯೇ ಸೀನಾಗಲೀ, ಕೆಮ್ಮಾಗಲಿ ಆರಂಭ. ನಗರ ಮಧ್ಯದಲ್ಲಿ ಕಾರಿನಲ್ಲಿ ಕುಳಿತು ಹೋಗುತ್ತಿ ದ್ದರೆ, ಪಕ್ಕದಲ್ಲಿ ಸಾಗುವ ವಾಹನಗಳು ಹೊಗೆಯುಗುಳಿದರೆ ಸಾಕು, ಸತತವಾಗಿ ಸೀನು, ಇಲ್ಲವೇ ಗಂಟಲಲ್ಲಿ ಗೊರಗೊರ. ಅಂಥ ಪ್ರಸಂಗದಲ್ಲಿ ಹೊರಬಂದು ಸ್ವಚ್ಛ ವಾದ ಹವೆ ಉಸಿರಾಡಿದರೆ ಎಷ್ಟೋ ಸಮಾಧಾನ. ಆದರೆ ಸ್ವಚ್ಛವಾದ ಹವೆ ಇಂದು ಸಿಗುವುದೆಲ್ಲಿಂದ ? ಬಸವ ಗಂಗೋತ್ರಿಯಲ್ಲಿದ್ದರೆ ಈ ಅಲರ್ಜಿಯ ಕಾಟ ಅಷ್ಟಿಲ್ಲ. ಆದರೆ ನಗರ ಮಧ್ಯದಲ್ಲಿರುವ, ಅದೂ ಪೂನಾ-ಬೆಂಗಳೂರು ಕಾರ್ಡ್‌ರಸ್ತೆಯಲ್ಲಿರುವ ಬಸವ ಮಂಟಪದಲ್ಲಿದ್ದರೆ ಫಜೀತಿಯನ್ನು ದೇವರೇ ಬಲ್ಲ! ಸೀನಿ, ಕೆಮ್ಮಿ ಎದೆ ನೋವು. ಗಂಟಲು ಉರಿತ.

ನನಗೆ ಈ ಅಲರ್ಜಿ ಹವಾಮಾನ ವ್ಯತ್ಯಾಸದಿಂದಲೂ ಬರುವುದುಂಟು ಕೋಣೆಯ ಕಿಟಕಿಬಾಗಿಲು ಮುಚ್ಚಿ ಸ್ವಚ್ಛ ಹವೆ ಆಡದಿದ್ದಾಗ ದೂಷಿತ ಉಷ್ಣ ಹವೆಯ ಪರಿಣಾಮದಿಂದ ಸೀನು, ಕೆಮ್ಮು ಪ್ರಾರಂಭ. ಆಗ ನಾನು ಹೊರಗೆ ಗಾಳಿಗೆ ನಿಂತರೆ, ತಣ್ಣೀರು ಕುಡಿದರೆ ಶಮನ. ಸೀನು ಬರುತ್ತಿದೆ, ಶೀತವಾಗಿದೆ ಎಂದು ಊಹಿಸಿ ಬಿಸಿಯ ವಸ್ತುವನ್ನು ಕುಡಿದರೆ ಇನ್ನೂ ಬಾಧೆ ಜಾಸ್ತಿ. ಕೆಲವೊಮ್ಮೆ ಇದ್ದಕ್ಕಿ ದ್ದಂತೆಯೇ ತೀವ್ರವಾದ ಚಳಿಗಾಳಿಯನ್ನು ಎದರಿಸಿದರೆ ಶೀತವಾಗಿ ಸೀನು ಆರಂಭ. ಆಗ ಬಿಸಿಯಾದ ದ್ರವವನ್ನು ಕುಡಿದರೆ ಶಮನ.

ಸಾಮಾನ್ಯವಾಗಿ ಇಂಥ ಅಲರ್ಜಿಗೆ ವೈದ್ಯರು ಜೀಟ್, ಹೈಕೋಮಿನ್ ಮುಂತಾದ ಸಿರಪ್‌ಗಳನ್ನು ಸೂಚಿಸುತ್ತಾರೆ. ಅವನ್ನು ಕುಡಿಯುತ್ತಿದ್ದಂತೆಯೇ ಸೀನು ಕೆಮ್ಮಿನ ಬಾಧೆ ತುಸುಕಡಿಮೆಯಾದರೂ ನಿದ್ರೆಯ ಮಂಕು ಆವರಿಸುತ್ತದೆ. ಸುಮ್ಮನೆ ಕಣ್ಣು

ರೆಪ್ಪೆ ಭಾರವಾಗಿ ಮಲಗಬೇಕೆನ್ನಿಸುತ್ತದೆ. ಮೈ ತುಂಬ ಕೆಲಸ ಇಟ್ಟುಕೊಂಡು ಮಲಗುವುದು ಎಂತು ಸಾಧ್ಯ? ಎಂದು ಇಂಥ ಯಾವ ಔಷಧಿಯನ್ನೂ ಕುಡಿಯದೆ ಹಾಗೆಯೇ ಸತತವಾಗಿ ಸೀನುತ್ತ, ಕೆಮ್ಮುತ್ತಾ ಕೆಲಸ ಮಾಡುತ್ತಿದ್ದೆ. ನನ್ನ ಕಷ್ಟ ನೋಡಲಾರದೆ ಎಲ್ಲರೂ ವ್ಯಥೆಪಡುತ್ತಾ ವೈದ್ಯರಿಗೆ ತೋರಿಸಲು ಒತ್ತಾಯಿಸುತ್ತಿದ್ದರು. ಅಲೋಪತಿ ವೈದ್ಯರು ಔಷಧಿ ಕೊಡುವುದನ್ನು ಬಿಟ್ಟು ಇನ್ನೇನೂ ಮಾಡರೆಂದು, ಆ ಔಷಧಿಗಳಿಗೆ ಸೈಡ್ ಇಫೆಕ್ಟ್ಸ್ ಬಹಳವೆಂದು ನಾನು ತೋರಿಸಲು ಮನಸ್ಸು ಮಾಡಲಿಲ್ಲ.

ಇಂಥ ಪ್ರಸಂಗದಲ್ಲಿ ಇದೇ ತಿಂಗಳ 11ನೆಯ ತಾರೀಖು ಚಿಂಚೋಳಿಯ ಸಂಗಪ್ಪಗೌಡರು ಬಂದು, ಜಲನೇತಿ ಮಾಡಲು ಸೂಚಿಸಿದ್ದಲ್ಲದೆ ಮಾಡಲು ಒಂದೂವರೆ ಮೀಟರ್ ಉದ್ದದ ರಬ್ಬರ್ ಕೊಳವೆಯನ್ನೂ ತಂದುಕೊಟ್ಟು ಮಾಡಲು ಆಗ್ರಹಪೂರ್ವಕವಾಗಿ ಒತ್ತಾಯಿಸಿದರು. ಮಾಡಲು ಆರಂಭಿಸಿದ ಮೊದಲ ದಿನದಂದೇ ಸೀನು ಕಡಿಮೆಯಾದವು, ಇಂದು 21-9-81 ಸಂಪೂರ್ಣ ತಹಬಂದಿಗೆ ಬಂದಿದೆ. ಉಸಿರಾಟ ಆರಾಮವಾಗಿದೆ. ದೇಹದ ಉಷ್ಣತೆಯೂ ಕಡಿಮೆಯಾಗಿದೆ. ಇದೇ ರೀತಿ ಇನ್ನಾರಾದರೂ ಕಷ್ಟಪಡುತ್ತಿರುವವರು ಇರಬಹುದು. ಅವರಿಗೆ ಅನುಕೂಲವಾಗಲೆಂದು ಈ ಅಭಿಪ್ರಾಯ ಬರೆದಿರುವೆ. ಈ ಮೊದಲೊಮ್ಮೆ ಅಲರ್ಜಿಯ ಬಗ್ಗೆ ಪ್ರಕಟವಾದ ಡಾ| ಪದಮ್ ಸಿಂಘ್ವಿಯವರ ಲೇಖನ ಕಲ್ಯಾಣ ಕಿರಣದಲ್ಲಿ ಪ್ರಕಟವಾಗಿತ್ತು. ಆದರೆ ಅಲ್ಲಿ ಅವರು ಕಾರಣಗಳನ್ನು ವಿವರಿಸಿದ್ದರು; ಪರಿಣಾಮವನ್ನೇನೂ ಸೂಚಿಸಿರಲಿಲ್ಲ. ಇದು ನಿಸರ್ಗ ಚಿಕಿತ್ಸಾ ವಿಧಾನ. ವಿವರಗಳನ್ನು ಗಮನಿಸಿರಿ.

ಒಂದು ಅರ್ಧ ಅಂಗುಲ ದಪ್ಪ ಅಥವಾ ಇನ್ನೂ ಸಣ್ಣದಾದ ರಬ್ಬರ್ ಅಥವಾ ಪ್ಲಾಸ್ಟಿಕ್ ಕೊಳವೆ ತೆಗೆದುಕೊಳ್ಳಿ. ಉಗುರು ಬೆಚ್ಚಗಿನ (ಸಾಧ್ಯವಾದಷ್ಟೂ ಕಡಿಮೆ ಉಷ್ಣತೆಯ) ನೀರನ್ನು ಒಂದು ತಂಬಿಗೆಯಲ್ಲಿ ತುಂಬಿರಿ. ಕೊಳವೆಯನ್ನು ಚೆನ್ನಾಗಿ ತೊಳೆದು, ಈ ಉಗುರು ಬೆಚ್ಚಗಿನ ನೀರನ್ನು ಪೈಪಿನೊಳಕ್ಕೆ ನಿಧಾನವಾಗಿ ಸುರಿಯಿರಿ. ಅದು ತುಂಬಿ, ಕೊಳವೆಯ ಇನ್ನೊಂದು ತೂತಿನಿಂದ ಆಚೆ ಬರುತ್ತಿದ್ದಂತೆಯೇ ಒಂದು ತುದಿಯನ್ನು ಬೆರಳಿನಿಂದ ಮುಚ್ಚಿರಿ. ಇದು ಸೈಫನ್ ತತ್ತ್ವದ ಆಧಾರದ ಮೇಲೆ ಕೆಲಸ ಮಾಡುತ್ತದೆ. ಇನ್ನೊಂದು ತುದಿಯನ್ನು ತಂಬಿಗೆಯಲ್ಲಿಟ್ಟು ಮತ್ತೊಂದು ತುದಿಯ ಕೈ ಬೆರಳು ತೆಗೆದಾಗ ಓತಪ್ರೋತವಾಗಿ ನೀರು ಹರಿಯತೊಡಗುತ್ತದೆ. ತಂಬಿಗೆಯನ್ನು ನಿಮ್ಮ ತಲೆಗಿಂತಲೂ ಎತ್ತರವಾದ ಸ್ಥಾನದಲ್ಲಿಟ್ಟರೆ ನೀರು ಸತತವಾಗಿ ಬರುತ್ತದೆ. ನೀರು ಹೊರಬರುವ ಕೊಳವೆಯ ತುದಿಯನ್ನು ಒಂದು ಮೂಗಿನ

ಹೊರಳೆಯಲ್ಲಿಟ್ಟು ಇನ್ನೊಂದು ಕಡೆ ಬಾಗಿರಿ; ಒಂದು ಹೊರಳೆಯಲ್ಲಿ ಹೋದ ನೀರು ಇನ್ನೊಂದು ಹೊರಳೆಯಲ್ಲಿ ಸುರಿಯಲಾರಂಭಿಸುತ್ತದೆ. ಆಗ ಬಾಯಿಯಿಂದಲೇ ಉಸಿರಾಡುತ್ತಿರಬೇಕು. ಇದರಿಂದಾಗಿ ಮೂಗಿನಕೊಳೆ, ಗಂಟಲಿನ ಕಫ, ನಾಲಿಗೆಯ ಕೊಳೆ ನೈಸರ್ಗಿಕವಾಗಿ ಹೊರಹೋಗುತ್ತದೆ. ಮತ್ತೆ ಇನ್ನೊಂದು ಹೊರಳೆಯಿಂದಲೂ ಮಾಡಿರಿ. ನಂತರ ಚೆನ್ನಾಗಿ ಮೂಗನ್ನು ಸೀನಿ, ಸ್ವಚ್ಛಮಾಡಿ, ಸ್ನಾನ ಮಾಡಿರಿ.

ಹೊಸದಾಗಿ ಒಂದೆರಡು ದಿನ ನೆತ್ತಿಗೆ (ಸರಿಯಾಗಿ ಬಾಗದಿದ್ದರಿಂದ) ನೀರೇರಿ ತಲೆ ಭಾರವಾದಂತೆನಿಸಿದರೂ, ಬಾಗಿನಿಂತು ನೀರು ಸಲಿಲವಾಗಿ ಹೊರಬರುವ ವಿಧಾನ ತಿಳಿದರೆ ಏನೂ ತ್ರಾಸಾಗದು. ಮೂಗಿನ ಅಲರ್ಜಿ ಇದ್ದವರು ಮಾತ್ರ ಮಾಡಬೇಕೆಂದೇನೂ ಇಲ್ಲ. ಆರೋಗ್ಯವಂತರೂ ಮಾಡಬಹುದು. ಮೊಡವೆ ಗುಳ್ಳೆಗಳ ಹಾವಳಿಯೂ ಇದರಿಂದ ಕಡಿಮೆ ಆಗಬಹುದೆನಿಸುತ್ತದೆ. ಹೀಗೆ ಮೂಗಿನ ಅಲರ್ಜಿ ಇದ್ದವರು ಪ್ರಯೋಗ ಮಾಡಿರಿ. ಅಪಾಯವಂತೂ ಏನೇನೂ ಇಲ್ಲ. ನಿಮ್ಮ ಮೇಲೆ ಆದ ಪರಿಣಾಮಗಳನ್ನೂ ಬರೆದು ತಿಳಿಸಿರಿ.

ನಕ್ಕು – ನಗಿಸು

1. "ಹಾಂ! ನನ್ನ ಕವಿತೆಯನ್ನು ಇಷ್ಟು ಶ್ರದ್ಧೆಯಿಂದ ಕೇಳಿದವರೆಂದರೆ ನೀವು ಒಬ್ಬರೇ ಸರಿ ಧನ್ಯವಾದಗಳು".

ಏನಂದಿರಿ? ಸ್ವಲ್ಪ ಗಟ್ಟಿಯಾಗಿ ಮಾತಾಡಿ. ನನಗೆ ಸ್ವಲ್ಪ ಕಿವುಡು.

2. ಆತ—ಏನ್ರಪಾ, ನಿನ್ನೆ ಎಲ್ರೂ ನಿಮ್ಮನ್ನು ಹೊಗಳೇ ಹೊಗಳಿದರು ಆ ಸಭೆ ಬಿಟ್ಟನಂತ್ರ.

ಈತ-ಯಾಕಂತೆ? ನಿನ್ನೆ ನಾನು ಭಾಷಣ-ಗೀಷಣ ಏನೂ ಮಾಡ್ಲಿಲ್ಲ.

ಆತ-ಅದೇ. ಸಂಧಿ ಸಿಕ್ತು ಅಂದ್ರೆ ತಾಸು ತಾಸು ಮಾತಾಡಿ ತಲೆ ಚಿಟ್ಟು ಹಿಡಿಸುವ ಈತ ಇಂದು ಭಾಷಣ ಮಾಡದೆ ತುಂಬ ಉಪಕಾರ ಮಾಡಿದ ಅಂತ ಹೊಗಳೇ ಹೊಗಳಿದರು.

3. "ಏನಪ್ಪಾ, ಈ ದಾರಿ ಪೋಸ್ಟಾಫೀಸಿಗೆ ಹೋಗುತ್ತೆಯೆ?"
"ಇಲ್ಲಪ್ಪ.... ಬಹಳಾ ದಿನದಿಂದ ಇದು ಇಲ್ಲೇ ಇದೆ".

ಶಿಕ್ಷಣ ಮನಶ್ಶಾಸ್ತ್ರ

ಶ್ರೀ ಸಿ. ಹೆಚ್. ಮರಿದೇವರು, ಎಂ.ಎ.,ಎಂ.ಇಡಿ.

ಕಾಲವ ದೇಶವನಳೆವರು ;
ಆಕಾಶವ ತೂಗುವರು ;
ಅತಿದೂರದ ನಕ್ಷತ್ರಕೆ
ಕ್ಷಣಮಾತ್ರದಿ ಸಾಗುವರು !

—ಕು. ವೆಂ. ಪು.

ಹೌದು ! ಅನ್ವೇಷಣೆಯ ಹಾದಿಯಲ್ಲಿ ಇಂದಿನ ಮಾನವ ಬಹು ಎತ್ತರಕ್ಕೇರಿದ್ದಾನೆ. ಕಾಲದೇಶಗಳನ್ನು ಅಳೆದಿದ್ದಾನೆ. ಬಿತ್ತರದ ಬಾನಿನಲ್ಲಿ ಪಕ್ಷಿಯಂತೆ ಹಾರಿದ್ದಾನೆ. ನೀಹಾರಿಕೆಗಳನ್ನು ಹೊಕ್ಕುಬಂದಿದ್ದಾನೆ. ಅತಿ ದೂರದ ನಕ್ಷತ್ರಕೆ ಕ್ಷಣಮಾತ್ರದಲ್ಲಿಯೇ ಹಾರುತ್ತಾನೆ—ಇವೆಲ್ಲವೂ ಮಾನವನ "ವರ್ತನೆ"ಯ ವಿವಿಧ ಮುಖಗಳು. ಇಷ್ಟೆಲ್ಲ ಮಾನವನ "ವರ್ತನೆ"ಗೆ ಕಾರಣೀಭೂತವಾದದ್ದು ಅವನ ಮನಸ್ಸು ! ಅಂದಮೇಲೆ ಅಂತಹ 'ಮನಸ್ಸಿ'ನ ಅಧ್ಯಯನ ಮಾಡುವ ಶಾಸ್ತ್ರವೇ "ಮನಶ್ಶಾಸ್ತ್ರ". ಮಾನವನ ವರ್ತನೆಯನ್ನು ಅರ್ಥಾತ್ ಅವನ ಮನಸ್ಸಿನ ವರ್ತನೆಯನ್ನು ಕುರಿತ ಶಾಸ್ತ್ರವೇ ಮನಶ್ಶಾಸ್ತ್ರ. ಮನಸ್ಸಿನ ವ್ಯಾಪಾರಗಳನ್ನು ಕುರಿತು ವ್ಯವಸ್ಥಿತ ರೀತಿಯಲ್ಲಿ ಚಿಂತನಗೈಯ್ಯುವ ಒಂದು ವಿಜ್ಞಾನವೇ ಮನಶ್ಶಾಸ್ತ್ರ.

ಜಿಪುಣತನಕ್ಕೆ ಅತ್ಯಂತ ಹೆಸರುವಾಸಿಯಾದವರಲ್ಲಿ ಪ್ರಕೃತಿಯೂ ಒಬ್ಬಳು ! ಇವಳು ತನ್ನ ರಹಸ್ಯಗಳನ್ನು ಅಷ್ಟು ಸುಲಭವಾಗಿ ಎಲ್ಲರಿಗೂ ಬಿಟ್ಟುಕೊಡುವುದಿಲ್ಲ. ಒಂದು ವೇಳೆ ಅವಳು ತನ್ನ ರಹಸ್ಯಗಳನ್ನು ಅಷ್ಟೊಂದು ಅಗ್ಗವಾಗಿ ಬಿಟ್ಟುಕೊಟ್ಟಿದ್ದಲ್ಲಿ ಎಲ್ಲರೂ ವಿಜ್ಞಾನಿಗಳೇ ಆಗಿಬಿಡುತ್ತಿದ್ದರು ! ಅವಳನ್ನು ಕಾಡಿ ಬೇಡಿ ತಪಸ್ಸುಗೈದವರಿಗೆ ಮಾತ್ರ ಅರ್ಥಾತ್ ಸೃಜನಾತ್ಮಕವಾಗಿ ಚಿಂತನಗೈದವರಿಗೆ ಮಾತ್ರ ಅವಳು ತನ್ನ ರಹಸ್ಯಗಳನ್ನು ಬಿಟ್ಟುಕೊಟ್ಟು ಅವರಿಗೆ ವಿಜ್ಞಾನಿಗಳೆಂಬ ಕಿರೀಟಧಾರಣೆ ಮಾಡಿಸುತ್ತಾಳೆ ! ಮನಶ್ಶಾಸ್ತ್ರದ ಗತಿಗಮನವನ್ನು ವೀಕ್ಷಿಸಿದರೂ ಈ ಮಾತು ಸತ್ಯ. ಮಾನವನ ಪ್ರಕೃತಿ ಅಥವಾ ಮನಸ್ಸು—ಪ್ರಕೃತಿಯ ಅನಂತ ಸ್ವರೂಪದ ಒಂದು ಅಂಗ. ಈ 'ಮನಸ್ಸಿ'ನ ಪ್ರಕೃತಿ—ಪ್ರಕೃತಿಗಿಂತಲೂ ನಿಗೂಢ

ವಾದದ್ದು. ಇಂಥ ನಿಗೂಢವಾದ 'ಮನಸ್ಸಿ'ನ ಅಥವಾ 'ಆತ್ಮದ' ಬಗೆಗಿನ ಅನ್ವೇಷಣೆಯನ್ನು ಮಾಡಲು ಮಾನವ ಎಂದಿನಿಂದ ತೊಡಗಿದನೋ ಅಂದಿನಿಂದ ಮನಶ್ಶಾಸ್ತ್ರದ ಅಧ್ಯಯನ ಪ್ರಾರಂಭವಾಯಿತೆನ್ನಬಹುದು. ಮನಸ್ಸಿನ ವರ್ತನೆಯ ರಹಸ್ಯವನ್ನರಿಯಲು ಜಗತ್ತಿನ ಎಲ್ಲ ಮನೋವಿಜ್ಞಾನಿಗಳೂ ಅಹರ್ನಿಶಿ ಶ್ರಮಿಸಿದ್ದಾರೆ, ಶ್ರಮಿಸುತ್ತಿದ್ದಾರೆ ಮತ್ತು ಶ್ರಮಿಸುತ್ತಿರುತ್ತಾರೆ ! ಹೀಗೆ ಮನಶ್ಶಾಸ್ತ್ರದ ಉಗಮವಾದಂದಿನಿಂದ ಇಂದಿನವರೆಗೆ ಆಗಿರುವ ಎಲ್ಲ ಮನೋವ್ಯಾಪಾರಗಳನ್ನು ಮತ್ತು ಆ ರೀತಿಯ ಮನೋವ್ಯಾಪಾರಗಳಿಗೆ ಉಂಟಾದ ಕಾರಣಗಳನ್ನೂ ಪರಂಪರೆ ಮತ್ತು ಪರಿಸ್ಥಿತಿಗಳ ಪ್ರಭಾವ ಮುದ್ರೆಗಳನ್ನೂ ಒಂದು ವ್ಯವಸ್ಥಿತ ರೀತಿಯಲ್ಲಿ ಅಧ್ಯಯನ ಮಾಡಿಕೊಂಡು ಬಂದಿರುವುದೇ ಮನಶ್ಶಾಸ್ತ್ರದ ಮುನ್ನಡೆಯನ್ನು ಬಿತ್ತರಿಸುವಂತಹುದಾಗಿದೆ.

ಮನಶ್ಶಾಸ್ತ್ರ—ಮನಸ್ಸಿನ ವರ್ತನೆಗಳನ್ನು ಮತ್ತು ಆ ರೀತಿಯ ವರ್ತನೆಗಳಿಗೆ ಕಾರ್ಯ ಕಾರಣ ಸಂಬಂಧಗಳನ್ನು ಕುರಿತದ್ದಾದ್ದರಿಂದ ಶಿಕ್ಷಣರಂಗಕ್ಕೆ ಅದು ಬಹಳ ಉಪಯುಕ್ತವಾಯ್ತು. ತತ್ಫಲವಾಗಿ ಮನಶ್ಶಾಸ್ತ್ರ ಶಿಕ್ಷಣರಂಗವನ್ನು ಪ್ರವೇಶಿಸಿ ಶಿಕ್ಷಣ ಮನಶ್ಶಾಸ್ತ್ರವೆಂಬ ಹೆಸರಿನಿಂದ ಇಂದು ಪ್ರಸಿದ್ಧಿಪಡೆದಿದೆ. ಶಿಕ್ಷಣರಂಗವನ್ನೆಂತೋ ಅಂತೆಯೇ ಉಳಿದ ರಂಗಗಳನ್ನೂ ಮನಶ್ಶಾಸ್ತ್ರ ಆವರಿಸಿಕೊಂಡಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಜೀವನದ ಎಲ್ಲ ರಂಗಗಳನ್ನೂ ಮನಶ್ಶಾಸ್ತ್ರ ಒಂದಲ್ಲ ಒಂದು ರೀತಿಯಲ್ಲಿ ಆವರಿಸಿರುತ್ತದೆ. ಶಿಕ್ಷಣರಂಗವನ್ನು ಪ್ರವೇಶಿಸಿದ ಮನಶ್ಶಾಸ್ತ್ರ ಅದು ಪ್ರವೇಶಿಸಿದಂದಿನಿಂದ ಇಂದಿನವರೆಗೆ ನಾನಾರೀತಿಯಲ್ಲಿ ಮುನ್ನಡೆಯನ್ನು ಸಾಧಿಸಿದೆ. ಈ ರೀತಿ ಶಿಕ್ಷಣರಂಗದಲ್ಲಿ ಮನಶ್ಶಾಸ್ತ್ರ ಸಾಧಿಸಿದ ಮುನ್ನಡೆಯ ಚಿತ್ರವನ್ನೇ "ಮುನ್ನಡೆದ ಶಿಕ್ಷಣ ಮನಶ್ಶಾಸ್ತ್ರ" ಬಿತ್ತರಿಸುವಂತಹುದಾಗಿದೆ. ಅದನ್ನೇ "ಮುನ್ನಡೆದ ಶಿಕ್ಷಣ ಮನಶ್ಶಾಸ್ತ್ರ"—Advanced Educational Psychology —ಎಂದು ಕರೆದಿರುವುದು.

೨. ಮನಶ್ಶಾಸ್ತ್ರದ ಸ್ವಭಾವ

"First Psychology lost its soul, then it lost its mind, then it lost its consciousness, it still has beheviour of a kind" —Wood Worth

" ಮನಶ್ಶಾಸ್ತ್ರವು ಮೊದಲು ಅದರ ಆತ್ಮವನ್ನು ಕಳೆದುಕೊಂಡಿತು, ನಂತರ ಅದು ತನ್ನ ಮನಸ್ಸನ್ನು ಕಳೆದುಕೊಂಡಿತು, ಅನಂತರ ಅದು ತನ್ನ ಪ್ರಜ್ಞೆಯನ್ನೂ ಕಳೆದುಕೊಂಡಿತು ; ಆದಾಗ್ಯೂ ಅದು ಒಂದು ವಿಧವಾದ ವರ್ತನೆಯನ್ನುಳ್ಳದ್ದಾಗಿದೆ". —ವುಡ್‌ವರ್ತ್

ಮೇಲಿನ ವುಡ್‌ವರ್ತ್‌ನ ಅಭಿಪ್ರಾಯ ಶಿಕ್ಷಣ ಮನಶ್ಶಾಸ್ತ್ರದ ಸ್ವಭಾವವನ್ನು ತಿಳಿಸುತ್ತದಲ್ಲದೆ, ಅದು ಶಿಕ್ಷಣ ಮನಶ್ಶಾಸ್ತ್ರದ ಮುನ್ನಡೆಗೆ ಹಾಕಿದ ಮೊದಲ ಮೈಲಿಗಲ್ಲೆನ್ನಲು ಯಾವ ಅಡ್ಡಿಯೂ ಇಲ್ಲವೆಂದು ತೋರುತ್ತದೆ.

ವ್ಯವಹಾರವಾದಿಗಳ ದೃಷ್ಟಿಯಲ್ಲಿ ಈ ಜಗತ್ತಿನಲ್ಲಿ ಶಾಶ್ವತ ಸತ್ಯವೆಂಬುದು ಯಾವುದೂ ಇಲ್ಲ. ಎಲ್ಲವೂ ಬದಲಾವಣೆಯ ನಿಯಮಕ್ಕೆ ಒಳಪಡುವಂಥದಾಗಿದ್ದು ಕಾಲವಾಹಿನಿಯೊಂದಿಗೆ ಹೊಸ ಹೊಸ ಸ್ವರೂಪಗಳನ್ನು ಪಡೆಯುತ್ತಾ ಹೋಗುತ್ತದೆ ಎನ್ನುವುದಕ್ಕೆ ಶಿಕ್ಷಣ ಮನಶ್ಶಾಸ್ತ್ರದ ಮುನ್ನಡೆಯೇ ಒಂದು ಜೀವಂತ ಜ್ವಲಂತ ಸಾಕ್ಷಿ. ಬಹುಶಃ ಈ ಮಾತು ಎಲ್ಲ ಶಾಸ್ತ್ರಗಳಿಗೂ ಅನ್ವಯಿಸುತ್ತದೆನಿಸುತ್ತದೆ. ಅಂದಮೇಲೆ ಮನಶ್ಶಾಸ್ತ್ರ ಇದಕ್ಕೆ ಹೊರತಲ್ಲವೆಂಬುದು ನಿರ್ವಿವಾದ.

ಮನಶ್ಶಾಸ್ತ್ರದ ಅಧ್ಯಯನವನ್ನು ಜ್ಞಾನದ ಒಂದು ಪ್ರತ್ಯೇಕ ಶಾಖೆಯನ್ನಾಗಿ ಬೇರ್ಪಡಿಸಿ ಅದನ್ನು ಒಂದು ವಿಶಿಷ್ಟ ಅಧ್ಯಯನ ವಿಷಯವನ್ನಾಗಿ ಮಾಡಿ ಈಗಾಗಲೇ ಎರಡು ಸಾವಿರ ವರ್ಷಗಳೆ ಕಳೆದುಹೋಗಿವೆ. ಅರಿಸ್ಟಾಟಲನ ಕಾಲಕ್ಕೆ ಮನಶ್ಶಾಸ್ತ್ರವನ್ನು ಕುರಿತು ಅಧ್ಯಯನ ನಡೆಯುತ್ತಿದ್ದಿತು. ಅದಾಗ್ಯೂ ಅದನ್ನು ತೀವ್ರವಾಗಿ ಪರಿಗಣಿಸಿ ಅದರ ಉದ್ದಗಲ ಮತ್ತು ಆಳಗಳೇನೆಂಬುದನ್ನು ಅಧ್ಯಯನ ನಡೆಸಿದ್ದು ಕೇವಲ ಕೆಲವೇ ಮಂದಿ. ಅದೂ ಕೂಡ ಇತ್ತೀಚೆಗೆ.

ಮೊದಲು ಮನಶ್ಶಾಸ್ತ್ರವನ್ನು ತತ್ವಶಾಸ್ತ್ರದೊಂದಿಗೇ ಅಧ್ಯಯನ ಮಾಡಲಾಗುತ್ತಿದ್ದಿತು. ಕಾಲಕಳೆದಂತೆ ಸಂಕೀರ್ಣವಾದ ಮಾನವಸ್ವಭಾವವನ್ನೆ ಅರ್ಥಾತ್ ಅವನ ವರ್ತನೆಯನ್ನೇ ಕುರಿತು ಅಧ್ಯಯನ ನಡೆಸುವ ಒಂದು ಆಸಕ್ತಿ ತಲೆದೋರಿತು. ಎಂದು ಜನಮನದಲ್ಲಿ ಅರ್ಥಾತ್ ಆಲೋಚನಾತಜ್ಞರ ಮನೋಮಯಕೋಶದಲ್ಲಿ ಈ ಒಂದು ಹೊಸಬೆಳಕು ಆವಿರ್ಭವಿಸಿತೋ ಅಂದು ತತ್ವಶಾಸ್ತ್ರದಿಂದ ಮನಶ್ಶಾಸ್ತ್ರ ಬೇರ್ಪಟ್ಟಿತು. ಹೀಗೆ ಬೇರ್ಪಟ್ಟ ಮನಶ್ಶಾಸ್ತ್ರ ತಾನೇ ಒಂದು ಜ್ಞಾನಶಾಖೆಯಾಗಿ ಬೆಳೆಯತೊಡಗಿತು. ಮೊದಮೊದಲು ಅದೊಂದು ಊಹಾತ್ಮಕ ವಿಷಯವಾಗಿ ಬೆಳೆದುನಿಂತಿತು. ಅಷ್ಟಕ್ಕೆ ನಿಲ್ಲದೆ ಅದು ವೈಜ್ಞಾನಿಕ ವಿಶ್ಲೇಷಣೆಗೆ ತೊಡಗಿ ಪ್ರಾಯೋಗಿಕ ವಿಜ್ಞಾನದ ಹಂತಕ್ಕೇರಲು ಪ್ರಾರಂಭಿಸಿದೆ. ಅದು ಇಂದು ಮಾನವ ಜೀವಿಯ ಬೌದ್ಧಿಕ ವಿಧಾನ, ಪ್ರವೃತ್ತಿ, ಆಕಾಂಕ್ಷೆ ಮತ್ತು ರಸಭಾವಗಳನ್ನು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಿ ನೋಡಲು ಹವಣಿಸಹತ್ತಿದೆ. ಬಲ್ಲವರಾರು! ಇಂದಲ್ಲ ನಾಳೆ ಮನಶ್ಶಾಸ್ತ್ರ ಉಳಿದ ಸ್ವಾಭಾವಿಕ ವಿಜ್ಞಾನಗಳಾದ ಭೌತಶಾಸ್ತ್ರ ರಸಾಯನಶಾಸ್ತ್ರಗಳಂತೆ, ತಾನೂ ಆ ವಿಜ್ಞಾನ ಶಾಸ್ತ್ರಗಳಿಗಿಂತ ಯಾವುದರಲ್ಲೂ ಕೀಳಲ್ಲವೆಂಬುದನ್ನು ತೋರಿಸಿಕೊಡುವ ಕಾಲ ಬಂದರೂ ಬರಬಹುದು !!

ಮನಶ್ಶಾಸ್ತ್ರವು ಅಧ್ಯಯನದ ಒಂದು ವಿಶಿಷ್ಟ ಶಾಖೆಯಾಗಿ ಬೆಳೆದಂದಿನಿಂದ ಅದರ ಸ್ವಭಾವವು ನಾನಾ ರೀತಿಯಲ್ಲಿ ಬೇರೆ ಬೇರೆ ಮನಶಾಸ್ತ್ರಜ್ಞರಿಂದ ವಿವರಿಸಲ್ಪಟ್ಟಿದೆ. ಮೊದಲೆ ತಿಳಿಸಿದ ವುಡ್‌ವರ್ತ್‌ನ ಅಭಿಪ್ರಾಯ ಆ ಎಲ್ಲ ವಿವರಣೆಗಳನ್ನು ಕ್ರೋಢೀಕರಿಸಿ ಹೇಳಿದಂತಾಗಿದೆ.

೩. 'ಮನಶ್ಶಾಸ್ತ್ರ' ಎಂಬ ಪದದ ಶಬ್ದೋತ್ಪತ್ತಿ ಮತ್ತು ಅರ್ಥವಿವರಣೆ :

"Pyschology" ಎಂಬ ಶಬ್ದ ಗ್ರೀಕ್ ಪದದ 'ಸೈಖೆ' (Psyche) ಮತ್ತು 'ಲೋಗೋಸ್' (Logos) ಎಂಬ ಎರಡು ಶಬ್ದಗಳಿಂದ ಬಂದಿದೆ.

"Psyche" ಎಂದರೆ "ಆತ್ಮ" ಎಂದೂ "Logos" ಎಂದರೆ "ಅದನ್ನು ಕುರಿತ ವಿಜ್ಞಾನ" ಎಂದೂ ಅರ್ಥವಿದೆ— Psyche means ''Soul', 'Logos' means 'talk about or science of' ಎಂಬುದು ಆಂಗ್ಲ ಭಾಷಾವಿವರಣೆ

''Logos, meaning —a great many tiresome things among them being accordingly '' a mode of treatment of any subject of thought''

'Psychology'—ಎಂಬ ಶಬ್ದವು ಗ್ರೀಕ್ ಪದದ "Psyche" ಎಂಬ ಶಬ್ದದಿಂದ ಬಂದುದಾಗಿದೆ. 'Psyche' ಎಂದರೆ Soul ಎಂದರ್ಥ. ಹಿಂದಿನ ಕಾಲದಲ್ಲಿನ ನಂಬಿಕೆ ಏನೆಂದರೆ ಮಾನವನ ಎಲ್ಲಾ ರೀತಿಯ ಬಾಹ್ಯಾಂತರಿಕ ಚಟುವಟಿಕೆಗಳಿಗೂ ಈ 'ಆತ್ಮ'ನೇ ಕಾರಣವೆಂದು ನಂಬಲಾಗಿದ್ದಿತು. ಈ ರೀತಿಯ "ಆತ್ಮನ" ಅಧ್ಯಯನವೇ "ಸೈಕಾಲಜಿ" ಎಂದು ಕರೆಯಲಾಗಿದ್ದಿತು. ಕಾಲಕಳೆದಂತೆ "Psyche" ಎಂಬ ಶಬ್ದಕ್ಕೆ "ಮೈಂಡ್" (mind) ಎಂಬ ಅರ್ಥಬಂತು. ಮನಶ್ಶಾಸ್ತ್ರಕ್ಕೆ ಸಂಬಂಧಿಸಿದ ಆಧುನಿಕ ಸಾಹಿತ್ಯದಲ್ಲಿ "ಸೈಖೆ" ಎಂಬ ಶಬ್ದಕ್ಕೆ ಶ್ರೀಸಾಮಾನ್ಯನೂ ಅರ್ಥೈಸುವುದೇನಂದರೆ 'Mind' ಎಂಬುದಾಗಿ.

ಮೇಲಿನ ಶಬ್ದೋತ್ಪತ್ತಿ ಮತ್ತು ಅವುಗಳ ಅರ್ಥವನ್ನು ಅನುಸರಿಸಿ ಬಂದ ವಿವಿಧ ವ್ಯಾಖ್ಯಾನಗಳು :

1) ಮನಶ್ಶಾಸ್ತ್ರವು "ಆತ್ಮ" (Soul) ವನ್ನು ಕುರಿತ ವಿಜ್ಞಾನ—

ಮೊದಲು ಮನಶ್ಶಾಸ್ತ್ರವನ್ನು "ಆತ್ಮ" ವನ್ನು ಕುರಿತ ವಿಜ್ಞಾನವೆಂದು ಪರಿಗಣಿಸಲಾಯ್ತು. ಇದಕ್ಕೆ ಕಾರಣ ಮೇಲೆ ತಿಳಿಸಿದಂತೆ ಮನಶ್ಶಾಸ್ತ್ರ ಎಂಬ ಶಬ್ದವು ಎರಡು ಗ್ರೀಕ್ ಶಬ್ದಗಳಿಂದ ಉತ್ಪತ್ತಿಯಾಗಿರುವುದು. ಅಂದರೆ Psyche

ಮತ್ತು Logos ಎಂಬುವೇ ಆ ಎರಡು ಶಬ್ದಗಳಾಗಿದ್ದು "ಸೈಖಿ" ಎಂದರೆ "ಆತ್ಮ" ಎಂತಲೂ "ಲೋಗೋಸ್" ಎಂದರೆ "ಅದನ್ನು ಕುರಿತು ಮಾತನಾಡು" ಅಥವಾ "ಅದನ್ನು ಕುರಿತ ವಿಜ್ಞಾನ" ಎಂದು ಅರ್ಥೈಸುವುದೆ ಆಗಿದೆ. ಆದ್ದರಿಂದ ಮನಶ್ಶಾಸ್ತ್ರವು ಆತ್ಮವನ್ನು ಕುರಿತ ವಿಜ್ಞಾನವೆಂದು ಅರ್ಥವಾಗುತ್ತದೆ. ಆದರೆ "ಆತ್ಮ" ಇನ್ನೂ ವೈಜ್ಞಾನಿಕ ವಿಶ್ಲೇಷಣೆಗೆ ಸಿಲುಕದಿರುವ ವಸ್ತು. "ಆತ್ಮ" ಪರಮಾತ್ಮನಿಗೆ ಸಮಾನವಾದದ್ದು. ಪರಮಾತ್ಮನು ಇನ್ನೂ ವೈಜ್ಞಾನಿಕ ವಿಶ್ಲೇಷಣೆಗೆ ಹೇಗೆ ಸಿಕ್ಕಿಲ್ಲವೋ ಹಾಗೆಯೇ ಈ 'ಆತ್ಮ'ನೂ ಸಹ ವೈಜ್ಞಾನಿಕ ವಿಶ್ಲೇಷಣೆಯ ಚೌಕಟ್ಟಿನಲ್ಲಿ ಬಾರದವನಾಗಿದ್ದಾನೆ. ವೈಜ್ಞಾನಿಕ ಶಕ್ತಿಯನ್ನು ಮೀರಿನಿಂತ ದಿವ್ಯ ಶಕ್ತಿಯೇ 'ಆತ್ಮ'! ಅದನ್ನು ಅವಿನಾಶಿಯೆಂದೂ ಸಹ ಕರೆದಿದ್ದಾರೆ. ಅದು ಏನೇ ಇರಲಿ 'ಆತ್ಮ'ದ ಮೂಲ ಮತ್ತು ಸ್ವಭಾವವನ್ನು ತಿಳಿಯುವುದು ಸಾಧ್ಯವಿಲ್ಲ. ಆದಕಾರಣ ಮನಶ್ಶಾಸ್ತ್ರ ಈ ವಿವರಣೆಯನ್ನು ಅಂದರೆ ಮನಶ್ಶಾಸ್ತ್ರವು 'ಆತ್ಮ'ವನ್ನು ಕುರಿತ ವಿಜ್ಞಾನ ಎಂಬ ವಿವರಣೆಯನ್ನು ಕೈಬಿಡಲಾಯ್ತು. ಆದ್ದರಿಂದ Psychology first lost its soul !

2) ಮನಶ್ಶಾಸ್ತ್ರ "ಮೈಂಡ್" (mind)ಅನ್ನು ಕುರಿತ ವಿಜ್ಞಾನ ?

ಮನಶ್ಶಾಸ್ತ್ರ ಆತ್ಮವನ್ನು ಕುರಿತು ಅಧ್ಯಯನಮಾಡುವ ಶಕ್ತಿಯನ್ನು ಕಳೆದುಕೊಂಡ ಮೇಲೆ ಅದು ಬುದ್ಧಿ ಅಥವಾ ಮನಸ್ಸಿನ (Mind) ಕಡೆ ತನ್ನ ಗಮನವನ್ನು ಹರಿಸಿತು. ಮನಶ್ಶಾಸ್ತ್ರ ಎಂದಿನಿಂದ ಮನಸ್ಸನ್ನು (Mind) ಅಥವಾ ಬುದ್ಧಿಯನ್ನು ಅಧ್ಯಯನ ಮಾಡತೊಡಗಿತೋ ಅಂದಿನಿಂದ ಇದು ಬುದ್ಧಿಯನ್ನು ಅಭ್ಯಸಿಸುವ ವಿಜ್ಞಾನ, ಎನಿಸಿಕೊಂಡಿತು. ಆದರೆ ಈ ವಿವರಣೆಯೂ ಕೂಡ ಅನೇಕ ರೀತಿಯ ತೊಡಕಿಗೆ ಎಡೆಮಾಡಿಕೊಟ್ಟಿತು. ಕಾರಣವೇನೆಂದರೆ ಮಾನಸಿಕ ಚಟುವಟಿಕೆಗಳನ್ನು ಕುರಿತು ಅಧ್ಯಯನ ಮಾಡುವುದು 'ಆತ್ಮ'ವನ್ನು ಕುರಿತು ಅಧ್ಯಯನ ಮಾಡುವಷ್ಟೇ ತೊಡಕಿನದು. ಏಕೆಂದರೆ ಮನಸ್ಸು ಚಂಚಲ ಸ್ವಭಾವದ್ದು. 'ಮರನನೇರಿದ ಮರ್ಕಟನಂತಿಹುದಯ್ಯ ಎನ್ನ ಮನ' ಎಂಬ ಶರಣರ ಮಾತಿನಿಂದ ಮನಸ್ಸಿನ ಅಥವಾ ಬುದ್ಧಿಯ ಚಂಚಲತೆ ಏನೆಂಬುದನ್ನು ಗುರುತಿಸಬಹುದಾಗಿದೆ. ಅಲ್ಲದೆ ಅದು ವ್ಯಕ್ತಿ ವ್ಯಕ್ತಿಗೂ ಭಿನ್ನವಾದದ್ದು. ಆದ್ದರಿಂದ ಇಂತಹ ಭಿನ್ನತೆಯಿಂದ ಕೂಡಿದ ಚಂಚಲಸ್ವಭಾವದ ಮನಸ್ಸಿನ ಅಥವಾ ಬುದ್ಧಿಯ ಚಟುವಟಿಕೆಗಳ ಸತ್ಯತೆಯನ್ನರಿಯಲು ಮನಶ್ಶಾಸ್ತ್ರ ವಿಫಲವಾಯ್ತು. ಆದ್ದರಿಂದ ಈ ಹೇಳಿಕೆಯೂ ಕೂಡ ಅಂದರೆ Pyschology is the science of mind ಎಂಬುದೂ ಕೂಡ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು. Thereby Psychology lost its mind !

3 ಮನಶ್ಶಾಸ್ತ್ರವು "ಪ್ರಜ್ಞೆ"(consciousness) ಯನ್ನು ಕುರಿತ ವಿಜ್ಞಾನ:

ನಂತರದಲ್ಲಿ ಮನಶ್ಶಾಸ್ತ್ರವು "ಪ್ರಜ್ಞೆ"ಯನ್ನು ಕುರಿತು ಅಧ್ಯಯನಮಾಡುವ ವಿಜ್ಞಾನವೆಂದು ಪರಿಗಣಿಸಲ್ಪಟ್ಟಿತು. ಆದರೆ ಮನಶ್ಶಾಸ್ತ್ರವು ಈ "ಪ್ರಜ್ಞೆ" (consciousness) ಎಂಬುದೇನು ? ಎಂಬುದನ್ನು ಖಚಿತವಾಗಿ ವಿವರಿಸಿ ಅದರ ಸ್ವರೂಪ ಇಂತಿಷ್ಟೇ ಸರಿ ಎಂದು ಅಧ್ಯಯನಮಾಡಲಾರದ್ದಾಯಿತು. ಅಷ್ಟೇ ಅಲ್ಲದೆ ಪ್ರಜ್ಞೆಯಲ್ಲಿ ಜಾಗೃತಪ್ರಜ್ಞೆ ಅಥವಾ ಎಚ್ಚೆತ್ತಪ್ರಜ್ಞೆ ಮತ್ತು ಅಜಾಗೃತಪ್ರಜ್ಞೆ ಅಥವಾ ಮೈಮರೆತಪ್ರಜ್ಞೆಗಳೆಂಬುವುಗಳಿದ್ದು ಅವುಗಳ ವರ್ತನೆಯನ್ನು ಮನಶ್ಶಾಸ್ತ್ರ ಗುರುತಿಸಲಾರದ್ದಾದ್ದರಿಂದ ಮನಶ್ಶಾಸ್ತ್ರವು ಕೇವಲ ಪ್ರಜ್ಞೆಯನ್ನಷ್ಟೇ ಅಧ್ಯಯನ ಮಾಡುವಂಥದ್ದಲ್ಲ-ಎಂಬರಿವುಂಟಾಯಿತು. ಜಾಗೃದಾವಸ್ಥೆ ಮತ್ತು ಅಜಾಗೃದಾವಸ್ಥೆಯಲ್ಲಿಯೂ ಸಹ ಮಾನವ ವರ್ತನೆಯನ್ನು 'ಪ್ರಜ್ಞೆ'ಯ ಮೂಲಕ ಮನಶ್ಶಾಸ್ತ್ರ ಅಧ್ಯಯನಮಾಡಲಾರದ್ದಾದ್ದರಿಂದ ಅದು ಪ್ರಜ್ಞೆಯನ್ನು ಕುರಿತ ವಿಜ್ಞಾನವೆಂಬ ಮಾತೂ ಸಹ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು— So it lost its consciousness also !

4 ಮನಶ್ಶಾಸ್ತ್ರವು "ವರ್ತನೆ"(behaviour) ಯನ್ನು ಕುರಿತ ವಿಜ್ಞಾನ :

ಮನಶ್ಶಾಸ್ತ್ರದ ಇತ್ತೀಚಿನ ಕಲ್ಪನೆ ಏನೆಂದರೆ ಮನಶ್ಶಾಸ್ತ್ರವು "ವರ್ತನೆ" ಯನ್ನು ಕುರಿತ ಶಾಸ್ತ್ರವೆಂದು ಪರಿಗಣಿಸಲಾಗಿದೆ. 'ವರ್ತನೆ' ಜಾಗೃತಪ್ರಜ್ಞೆಯಿಂದ ಕೂಡಿದ್ದಾಗಿರಬಹುದು ಅಥವಾ ಅಜಾಗೃತಾವಸ್ಥೆಯಿಂದ ಕೂಡಿದ್ದಾಗಿರಬಹುದು. ಬೇರೆ ಬೇರೆ ಸನ್ನಿವೇಶಗಳಲ್ಲಿ ಜೀವಿಯ ಒಟ್ಟು ವರ್ತನೆಯ ಪ್ರತಿಕ್ರಿಯೆಯನ್ನು ವೈಜ್ಞಾನಿಕವಾಗಿ ಅಧ್ಯಯನಮಾಡುವುದೇ ಮನಶ್ಶಾಸ್ತ್ರವೆನಿಸುತ್ತದೆ. ಈ ಅರ್ಥದಲ್ಲಿ "ಮನಶ್ಶಾಸ್ತ್ರವು ಬೌದ್ಧಿಕ ಮತ್ತು ಭೌತಿಕವಾಗಿ ಸಾಮಾನ್ಯ ಮತ್ತು ಅಸಾಮಾನ್ಯಸ್ಥಿತಿಯಲ್ಲಿ ಮಗು ಮತ್ತು ಮನುಷ್ಯ ಇವರುಗಳ ವರ್ತನೆಯನ್ನು ಅಧ್ಯಯನಮಾಡುವಂತಹುದಾಗಿದೆ"—ಇದು ಗ್ಯಾರೆಟ್ ಎಂಬ ಮನಶ್ಶಾಸ್ತ್ರಜ್ಞನ ಅಭಿಪ್ರಾಯ.

ಅಂದಮೇಲೆ ಮನಶ್ಶಾಸ್ತ್ರವು ಮಾನವನ ವರ್ತನಶಾಸ್ತ್ರದ ಅಧ್ಯಯನ. ಮನುಷ್ಯನ ವರ್ತನೆಯೇ ಅದರ ಅಧ್ಯಯನದ ವಸ್ತುವಿಷಯ ಎಂದಾಯ್ತು. ಜನರು ಏನು ಮಾಡುತ್ತಾರೆ? ಹೇಗೆ ಮಾಡುತ್ತಾರೆ? ಏಕೆ ಮಾಡುತ್ತಾರೆ? ಎಂಬಿತ್ಯಾದಿ ವರ್ತನೆಗಳನ್ನು ಕುರಿತು ಅಧ್ಯಯನಮಾಡುವಂತಹುದೇ ಆಗಿದೆ. ಮ್ಯಾಕ್ ಡ್ಯೂಗಲ್‌ನ ಪ್ರಕಾರ "ಮನಶ್ಶಾಸ್ತ್ರವು ಖಚಿತವಾದ ವರ್ತನೆಯ ಅಥವಾ ನಿಶ್ಚಿತವಾದ ನಡವಳಿಕೆಯ ವಿಜ್ಞಾನ:— Psychology is the positive

science of behaviour. ಇದು ಜೀವಿಯನ್ನು ಸಮಗ್ರವಾಗಿ ನೋಡಿ ಅವರ ವರ್ತನೆಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಮತ್ತು ಹತೋಟಿಗೊಳಪಡಿಸಲು ಸಹಾಯಮಾಡುವುದೇ ಈ ವಿಜ್ಞಾನದ ಗುರಿಯಾಗಿದೆ. ಈ ವಿವರಣೆಯು ಇತರೆ ತರ್ಕಬದ್ಧವಾದ ವಿವಾದಗಳಿಂದ ಮತ್ತು ಇತರೆ ವಿವರಗಳೆಲ್ಲವುಗಳಿಂದ ಮುಕ್ತವಾದುದಾಗಿದೆ. ಈ ರೀತಿ ಮನಶ್ಶಾಸ್ತ್ರದ ವಿವರಣೆಯಲ್ಲಾದ ಬದಲಾವಣೆಗಳನ್ನು ಈ ಮೊದಲೇ ತಿಳಿಸಿರುವ ವುಡ್‌ವರ್ತ್‌ನ ಅಭಿಪ್ರಾಯವು ಚೆನ್ನಾಗಿ ನಿರ್ದೇಶಿಸಲ್ಪಟ್ಟಿದೆ.

4 ಮನಶ್ಶಾಸ್ತ್ರದ ವಿವಿಧ ಶಾಖೆಗಳು :

ಮನಶ್ಶಾಸ್ತ್ರ ಇಂದು ತನ್ನದೇ ಆದ ಒಂದು ವಿಶಿಷ್ಟ ಶಾಖೆಯಾಗಿ ಬೆಳೆದು ನಿಂತು, ಇಂದು ಅದು ತನ್ನದೇ ಆದ ಅನೇಕ ಶಾಖೋಪಶಾಖೆಗಳನ್ನು ಒಳಗೊಂಡುದಾಗಿದೆ. ಅವುಗಳೆಂದರೆ :

1. ರೂಢಿಬದ್ಧವಾದ ಮತ್ತು ನಿಯಮಬದ್ಧವಾದ ಮನಶ್ಶಾಸ್ತ್ರ. (General and Normal Psychology 2. ಉತ್ಕಟ ಅಥವಾ ಅತಿರೇಕ ಮನಶ್ಶಾಸ್ತ್ರ Abnormal psychology 3. ಮಕ್ಕಳ ಮನಶ್ಶಾಸ್ತ್ರ Child psychology 4. ಮಾನವ ಮನಶ್ಶಾಸ್ತ್ರ Human psychology 5. ವಯಸ್ಕರ ಮನಶ್ಶಾಸ್ತ್ರ Adult psychology 6. ವೈಯಕ್ತಿಕ ಮನಶ್ಶಾಸ್ತ್ರ Individual psychology 7. ಸಾಮಾಜಿಕ ಮನಶ್ಶಾಸ್ತ್ರ Social psychology 8. ಕೈಗಾರಿಕಾ ಮನಶ್ಶಾಸ್ತ್ರ Industrial psychology 9. ಶೈಕ್ಷಣಿಕ ಮನಶ್ಶಾಸ್ತ್ರ Educational psychology 10. ಹೋಲಿಕೆಯ ಮನಶ್ಶಾಸ್ತ್ರ Para psychology 11. ಪ್ರಾಯೋಗಿಕ ಮನಶ್ಶಾಸ್ತ್ರ Experimental psychology

—ಮೇಲಿನ ಮನಶ್ಶಾಸ್ತ್ರದ ಪ್ರಮುಖ ಶಾಖೆಗಳೇ ಅಲ್ಲದೆ ಇನ್ನೂ ಕೆಲವು ಶಾಖೆಗಳಿವೆ. ಅವು ಆಯಾ ಸನ್ನಿವೇಶದಿಂದಾವಿರ್ಭೂತವಾದವುಗಳಾಗಿವೆ. ಅವುಗಳೆಂದರೆ :

1. ಭೌತಿಕ ಮತ್ತು ಶಾರೀರಿಕ ಮನಶ್ಶಾಸ್ತ್ರ (Physiological psychology) 2. ಅನುವಂಶೀಯ ಅಥವಾ ತಳಿಶಾಸ್ತ್ರದ ಮನಶ್ಶಾಸ್ತ್ರ (Genetic psychology) 3. ವಿಕಸನ ಮನಶ್ಶಾಸ್ತ್ರ (Developmental psychology)

—ಮೇಲೆ ತಿಳಿಸಿದ ಮನಶ್ಶಾಸ್ತ್ರದ ಶಾಖೋಪಶಾಖೆಗಳನ್ನು ನೋಡಿದಾಗ ಮನಶ್ಶಾಸ್ತ್ರ ಇಂದು ಜೀವನದ ಪ್ರತಿಯೊಂದು ರಂಗದಲ್ಲೂ ತನ್ನ ಮಹತ್ತರ ಪಾತ್ರವನ್ನು ವಹಿಸುತ್ತಿರುವುದರ ಅರಿವಾಗದಿರದು. ಜೀವನದ ಉಳಿದ ರಂಗಗಳಿಗೆಂತೋ ಅಂತೆಯೇ ಅದು ಶಿಕ್ಷಣರಂಗದಲ್ಲೂ ತನ್ನ ಅದ್ವಿತೀಯ ಅಗಣಿತ ಪಾತ್ರವನ್ನು ನಿರ್ವಹಿಸುತ್ತಿರುವುದು ಆಶ್ಚರ್ಯವೇನಲ್ಲ. ಶಿಕ್ಷಣಕ್ಷೇತ್ರದಲ್ಲಿ ಎದ್ದಿರುವ ನೂರಾರು ಸಮಸ್ಯೆಗಳಿಗೆ ಶಿಕ್ಷಣ ಮನಶ್ಶಾಸ್ತ್ರವು ಸಂಪೂರ್ಣ ಪರಿಹಾರವನ್ನಲ್ಲದಿದ್ದರೂ ಅನೇಕ ರೀತಿಯ ಪರಿಹಾರಗಳನ್ನು ಒದಗಿಸಲು ಸಮರ್ಥಶಾಲಿಯಾಗಿರುವುದು ನಿರ್ವಿವಾದ ವಿಚಾರವಾಗಿದೆ. ಆದ್ದರಿಂದ ಶಿಕ್ಷಣ ಮನಶ್ಶಾಸ್ತ್ರದ ಅಧ್ಯಯನ ಉಳಿದ ಮನಶ್ಶಾಸ್ತ್ರಗಳ ಅಧ್ಯಯನಕ್ಕಿಂತಲೂ ಅತಿಮುಖ್ಯ. ಏಕೆಂದರೆ ಪ್ರತಿಯೊಬ್ಬ ವ್ಯಕ್ತಿಯೂ ಒಂದಲ್ಲ ಒಂದು ರೀತಿಯ ಶಿಕ್ಷಣವನ್ನು ಪಡೆಯುತ್ತಾನೆ. ಹೀಗೆ ವ್ಯಕ್ತಿ ತಾನು ಪಡೆಯುವ ಶಿಕ್ಷಣದ ಅವಧಿಯಲ್ಲಿ ಅವನ ವರ್ತನೆಗಳನ್ನು ಅಧ್ಯಯನಮಾಡಿ ಆ ಎಲ್ಲ ವರ್ತನೆಗಳಿಗೆ ಒಂದು ಮೂರ್ತಸ್ವರೂಪವನ್ನು ಕೊಡುವುದೇ ಶಿಕ್ಷಣ ಮನಶ್ಶಾಸ್ತ್ರದ ಕರ್ತವ್ಯವೆನಿಸುತ್ತದೆ.

5. ಶಿಕ್ಷಣ ಮನಶ್ಶಾಸ್ತ್ರದ ವ್ಯಾಪ್ತಿ :

ಮನಶ್ಶಾಸ್ತ್ರದ ಅತ್ಯಂತ ಪ್ರಮುಖ ಶಾಖೆಗಳಲ್ಲಿ ಶಿಕ್ಷಣ ಮನಶ್ಶಾಸ್ತ್ರವು ಒಂದು ಶಿಕ್ಷಣಕ್ಷೇತ್ರ ಇಂದು ಬಹುರೂಪಿಯಾಗಿ ಬೆಳೆದಿದೆ. ಈ ರೀತಿ ವಿರಾಡ್ರೂಪಿಯಾಗಿ ಬೆಳೆದಿರುವ ಶಿಕ್ಷಣ ಕ್ಷೇತ್ರದಲ್ಲಿ ಎದ್ದಿರುವ ಪ್ರಶ್ನೆಗಳು ನೂರಾರು. ಅದರಲ್ಲಿ ಶಿಕ್ಷಣವನ್ನು ಯಾವ ರೀತಿ ಕೊಡಬೇಕು ? ಏಕೆ ಕೊಡಬೇಕು ? ಯಾರಿಂದ ಕೊಡಿಸಬೇಕು ? ಎಂಥಾ ಸನ್ನಿವೇಶದಲ್ಲಿ ಕೊಡಬೇಕು ? ಎಂಬಿತ್ಯಾದಿ ಪ್ರಶ್ನೆಗಳಿಗೆ ಮನೋವೈಜ್ಞಾನಿಕವಾಗಿ ಸೂಕ್ಷ್ಮಾತಿಸೂಕ್ಷ್ಮ ಅಂಶಗಳೆಲ್ಲವನ್ನೂ ಗಣನೆಗೆ ತೆಗೆದುಕೊಂಡು ಎದ್ದ ಸಮಸ್ಯೆಗಳನ್ನು ಬಿಡಿಸಬೇಕಾಗಿದೆ.

ಇಂದು ಶಿಕ್ಷಣತಜ್ಞರೆಲ್ಲರೂ ಶ್ರೆಷ್ಟ ಶಿಕ್ಷಣವೇತ್ತನಾದ ಪೆಸ್ಟಾಲಜಿಯ ಹೇಳಿಕೆಯನ್ನು ಮಾನ್ಯಮಾಡಿದ್ದಾರೆ. ಪೆಸ್ಟಾಲಜಿಯ ಹೇಳಿಕೆ ಎಂದರೆ "Psychologise the whole education –ಶಿಕ್ಷಣವೆಲ್ಲವನ್ನೂ ಮನಶ್ಶಾಸ್ತ್ರೀಯವನ್ನಾಗಿಸು !" ಎಂಬುದು. ಆದ್ದರಿಂದ ಇಂದು ಶಿಕ್ಷಣವನ್ನು ಮನಶಾಸ್ತ್ರೀಯವಾಗಿಸಲು ಅಥವಾ ಮನಶ್ಶಾಸ್ತ್ರೀಯವಾದ ಶಿಕ್ಷಣವನ್ನೀಯಲು ಜಗತ್ತಿನಾದ್ಯಂತ ಏನೆಲ್ಲ ಪ್ರಯತ್ನಗಳು ನಡೆಯುತ್ತಿವೆ. ಆದಕಾರಣ ಶಿಕ್ಷಣ, ಮನಶ್ಶಾಸ್ತ್ರದ ಭದ್ರಬುನಾದಿಯನ್ನು ಪಡೆಯಲು ಉದ್ಯುಕ್ತವಾದುದಾಗಿದೆ. ಬದಲಾಗುತ್ತಿರುವ ಸನ್ನಿವೇಶದಲ್ಲಿ ವ್ಯಕ್ತಿಯ ಕಲಿಕೆಯ ವರ್ತನೆಯನ್ನು ವಿಶಿಷ್ಟವಾದ ಮತ್ತು ಪ್ರತ್ಯೇಕವಾದ ವೈಜ್ಞಾನಿಕ ವಿಶ್ಲೇಷಣೆಗೆ

ಒಳಪಡಿಸಲು ಇಂದು ಶಿಕ್ಷಣ ಮನಶ್ಯಾಸ್ತ್ರ ಸಿದ್ಧವಾದುದಾಗಿದೆ. ನೂತನವಾದ ಶೈಕ್ಷಣಿಕ ಸನ್ನಿವೇಶದಲ್ಲಿ ನೂತನವಾದ ವರ್ತನ ವಿಧಾನಗಳನ್ನು ಮನಶ್ಯಾಸ್ತ್ರವು ಕಂಡುಕೊಳ್ಳದೆ ಇರುವ ಒಂದು ದಿವಸವನ್ನು ಕಳೆಯುವಂತಿಲ್ಲ !!

ಶಿಕ್ಷಣ ಮನಶ್ಯಾಸ್ತ್ರದ ವ್ಯಾಪ್ತಿ ಅಗಣಿತವಾದದ್ದು. ಶಿಕ್ಷಣ ಜೀವನರಂಗವನ್ನು ಹೇಗೆ ಪ್ರವೇಶಿಸಿದೆಯೋ ಹಾಗೆ ಮನಶ್ಯಾಸ್ತ್ರವೂ ಸಹ ಜೀವನದ ಎಲ್ಲ ರಂಗಗಳನ್ನು ಪ್ರವೇಶಿಸಿದೆ. ಅವೆರಡೂ ಒಂದೇ ನಾಣ್ಯದ ಎರಡು ಮುಖಗಳು. ಅವು ಒಂದನ್ನುಳಿದೊಂದು ಇರುವಂತಿಲ್ಲ. "ಶಿಕ್ಷಣ ಮನಶ್ಯಾಸ್ತ್ರ"—ಎಂಬುದರ ಅರ್ಥವನ್ನು ಸರಿಯಾಗಿ ಅರ್ಥೈಸಿಕೊಳ್ಳಬೇಕಾದರೆ ನಾವು ಮೊದಲು "ಮನಶ್ಯಾಸ್ತ್ರ ಮತ್ತು 'ಶಿಕ್ಷಣ' ಎಂಬ ಪದಗಳ ಅರ್ಥವನ್ನು ಚೆನ್ನಾಗಿ ಗ್ರಹಿಸಬೇಕು.

ನಮಗೆ ಗೊತ್ತಿರುವ ಹಾಗೆ "ಮನಶ್ಯಾಸ್ತ್ರ"ವೆಂದರೆ "ವರ್ತನಶಾಸ್ತ್ರ–ಎಂದು. ಅಂದರೆ ಜೀವಿಯ ವರ್ತನೆಯನ್ನು ವೈಜ್ಞಾನಿಕವಾಗಿ ಅಧ್ಯಯನಮಾಡುವ ಒಂದು ಶಾಸ್ತ್ರಕ್ಕೆ 'ವರ್ತನಶಾಸ್ತ್ರ'ವೆನ್ನಬಹುದಾಗಿದೆ. ಒಟ್ಟಾರೆ ಜೀವಿಯ ವರ್ತನೆಯನ್ನು ಅರ್ಥಮಾಡಿಕೊಳ್ಳಲು ಮತ್ತು ನಿಯಂತ್ರಣಗೊಳಿಸಲು ಮನೋವಿಜ್ಞಾನ ಅಥವಾ ಮನಶ್ಯಾಸ್ತ್ರ ಸಹಾಯಮಾಡುವಂಥಾದ್ದಾಗಿದೆ. ಶಿಕ್ಷಣವೆಂದರೆ ಅದರ ಸಾಮಾನ್ಯ ಅರ್ಥದಲ್ಲಿ "ವರ್ತನೆಯ ಪರಿವರ್ತನೆ"ಯೇ ಆಗಿದೆ. ಅಂದರೆ ಮೃಗೀಯ ವರ್ತನೆಯಿಂದ ಸದಸದ್ವರ್ತನೆಯ ಕಡೆಗೆ ಕೊಂಡೊಯ್ಯುವುದೇ ಆಗಿದೆ. ಹಿಂದೆ 'ಜ್ಞಾನ' ಎಂದರೆ 'ಶಿಕ್ಷಣ' ; 'ಶಿಕ್ಷಣ' ಎಂದರೆ 'ಜ್ಞಾನ' ಎನ್ನುವಂತಿದ್ದಿತು. ಜ್ಞಾನಕ್ಕೂ ಶಿಕ್ಷಣಕ್ಕೂ ಸಾಮ್ಯವನ್ನು ಕಲ್ಪಿಸಲಾಗಿದ್ದಿತು. ತುಂಡುತುಂಡಾದ ಕೆಲವು ವಿಷಯಿಕ ಅಂಶಗಳನ್ನು ಮಗುವಿನ ತಲೆಯಲ್ಲಿ ತುಂಬುವುದೇ ಶಿಕ್ಷಣವೆಂದೂ ಅದೇ ಜ್ಞಾನವೆಂದೂ ಪರಿಗಣಿಸಲಾಗಿದ್ದಿತು. ಆದರೆ ಇಂದು ಶಿಕ್ಷಣವೆಂದರೆ ಅದಷ್ಟು ಮಾತ್ರವಲ್ಲ. ಅದು ಅದಕ್ಕಿಂತಲೂ ಹೆಚ್ಚಿನದು. ವ್ಯಕ್ತಿ ತಾನು ಗಳಿಸುವ ಜ್ಞಾನ ಆದರಿಂದ ಅವನಲ್ಲುಂಟಾದ ಮಾರ್ಪಾಡು, ಸದಸದ್ವರ್ತನೆ, ವ್ಯಕ್ತಿಯ ವ್ಯಕ್ತಿತ್ವದ ಸಮಗ್ರ ಬೆಳವಣಿಗೆ. ವಿವೇಚನೆ—ಇತ್ಯಾದಿಗಳೆಲ್ಲವನ್ನೂ ಒಳಗೊಂಡುದಾಗಿದ್ದು ಅದರ ಜತೆಗೆ ಇದರ ಇನ್ನೊಂದು ಮುಖವಾದ "ಸಾಮಾಜಿಕ ವಿಧಾನ–Phase of social process "ವನ್ನು ಒದಗಿಸಿಕೊಟ್ಟು ತನ್ಮೂಲಕ ವ್ಯಕ್ತಿಯನ್ನು ಸಮಾಜದ ಕಣ್ಣಿನಲ್ಲಿ ಸುಜ್ಞಾನಿಯಾದ ಮನುಷ್ಯನೆನಿಸಿಕೊಳ್ಳುವಂತೆ ಮಾಡತಕ್ಕದ್ದೂ, ಶಿಕ್ಷಣ ಎನಿಸುವಂತಹುದಾಗಿದೆ. ಈ ರೀತಿ ವ್ಯಕ್ತಿಯನ್ನು 'ಸುಶಿಕ್ಷಿತ'ನನ್ನಾಗಿ ಮಾಡಲು ಪ್ರತಿಯೊಂದು ಸನ್ನಿವೇಶದಲ್ಲೂ ಅವನ ವರ್ತನೆಯನ್ನು

ಅಧ್ಯಯನಮಾಡಿ ಅದನ್ನು ಸದಸದ್ವರ್ತನೆಯ ಕಡೆಗೆ ಕೊಂಡೊಯ್ಯುವಂತೆ ಮಾಡಲು ನೆರವಾಗುವುದೇ ಶಿಕ್ಷಣ ಮನಶ್ಯಾಸ್ತ್ರವೆನಿಸುತ್ತದೆ.

6. ಶಿಕ್ಷಣ ಮನಶ್ಯಾಸ್ತ್ರ ಎಂದರೇನು ?

ಶಿಕ್ಷಣ ಮನಶ್ಯಾಸ್ತ್ರದ ವ್ಯಾಪ್ತಿಯನ್ನು ಕುರಿತು ಚರ್ಚಿಸುತ್ತ, ಅದು ಶಿಕ್ಷಣದ ಎಲ್ಲ ರಂಗವನ್ನು ಪ್ರವೇಶಿಸಿದೆ—ಮತ್ತು ಶಿಕ್ಷಣವು ಜೀವನದ ಎಲ್ಲ ರಂಗವನ್ನೂ ಪ್ರವೇಶಿಸಿದ್ದು, ತನ್ನೊಂದಿಗೆ ಮನಶ್ಯಾಸ್ತ್ರವೂ ಸಹಜೀವನದ ಎಲ್ಲ ರಂಗವನ್ನೂ ಪ್ರವೇಶಿಸುವಂತೆ ಮಾಡಿದೆ. ಅಂದಮೇಲೆ ಇಂತಹ ಶಿಕ್ಷಣವು ಮನಶ್ಯಾಸ್ತ್ರದ ಸ್ವರೂಪವನ್ನು ಚೆನ್ನಾಗಿ ಅರ್ಥೈಸಿಕೊಳ್ಳಬೇಕು. ಹಾಗೆ ಅದನ್ನು ಅರ್ಥೈಸಿಕೊಳ್ಳಬೇಕಾದರೆ "ಶಿಕ್ಷಣ ಮನಶ್ಯಾಸ್ತ್ರ" ಎಂದರೇನು ? ಎಂಬುದನ್ನು ತಿಳಿಯಬೇಕು.

ಮನೋವೈಜ್ಞಾನಿಕ ತಳಹದಿಯ ಮೇಲೆ ಶಿಕ್ಷಣ ನೀಡಬೇಕೆಂಬ ಕಲ್ಪನೆ ಆಧುನಿಕ ಜಗತ್ತಿನ ಶಿಕ್ಷಣತಜ್ಞರೆಲ್ಲರ ಅಭಿಷ್ಟವಾಗಿದೆ. ಈ ಅಭಿಷ್ಟ ಮತ್ತು ಅಭೀಪ್ಸೆಗಳನ್ನು ಪೂರೈಸಿಕೊಳ್ಳಲಿಕ್ಕಾಗಿ ಮನೋವಿಜ್ಞಾನವನ್ನೂ ಶಿಕ್ಷಣ ರಂಗದಲ್ಲಿ ಅನ್ವಯಿಸಿಕೊಳ್ಳಲಾಗುತ್ತಿದೆ. ಎಂದಿನಿಂದ ಶಿಕ್ಷಣ ತನ್ನ ಕ್ಷೇತ್ರದಲ್ಲಿ ಮನಶ್ಯಾಸ್ತ್ರವನ್ನು ಬಳಸಿಕೊಳ್ಳಲು ಅಥವಾ ಉಪಯೋಗಿಸಿಕೊಳ್ಳಲು ಪ್ರಾರಂಭಿಸಿತೋ ಅಂದಿನಿಂದ ಅದಕ್ಕೆ "ಮನಶ್ಯಾಸ್ತ್ರಾನ್ವಯಿಕ ಶಿಕ್ಷಣ ಮತ್ತು ಶಿಕ್ಷಣಾನ್ವಯಿಕ ಮನಶ್ಯಾಸ್ತ್ರ"ವೆಂಬ ಹೆಸರು ಬಂತು. ಒಂದೇ ಮಾತಿನಲ್ಲಿ ಹೇಳುವುದಾದರೆ "ಶಿಕ್ಷಣಾನ್ವಯಿಕ ಮನಶ್ಯಾಸ್ತ್ರವೇ ಶಿಕ್ಷಣ ಮನಶ್ಯಾಸ್ತ್ರ"ವೆನಿಸುತ್ತದೆ.

"ಯಾವುದೇ ಒಬ್ಬ ಶಿಕ್ಷಣಶಾಸ್ತ್ರಜ್ಞನನ್ನು ತೆಗೆದುಕೊಂಡರೆ ಅವನು ಅನ್ವಯಿಕ ಮನಶ್ಯಾಸ್ತ್ರಜ್ಞನೇ ಆಗಿರುತ್ತಾನೆ. ಅವನಿಗೆ ಮಾನವನ ವರ್ತನೆಯ ಮೂಲಭೂತ ನಿಯಮಗಳಾವುವು ಎಂಬುದರಲ್ಲಿ ಅಭಿರುಚಿ ಆಸಕ್ತಿಗಳಿರುತ್ತವೆ. ಆದರೆ ಆ ನಿಯಮಗಳನ್ನು ಶಿಕ್ಷಣಕ್ಕೆ ಹೇಗೆ ಅನ್ವಯಿಸಿಕೊಳ್ಳಬೇಕು ಅಥವಾ ಹೇಗೆ ಬಳಸಿಕೊಳ್ಳಬೇಕೆನ್ನುವುದರ ಕಡೆಗೆ ಅವನ ಆಸಕ್ತಿ ಮತ್ತು ಅಭಿರುಚಿಗಳಿರುತ್ತವೆ"—

"Educational Psychology is a subject to be studied, an area or field of knowledge, a set of applications of laws and principles from a field of knowledge to a social process, a set of tools and techniques and a field for research ...

"ಶಿಕ್ಷಣ ಮನಶ್ಶಾಸ್ತ್ರವೂ ಒಂದು ವಿಷಯವಾಗಿದ್ದು ಅದು ಅಭ್ಯಸಿಸಬೇಕಾಗಿರುವುದು ಜ್ಞಾನದ ಒಂದು ಕ್ಷೇತ್ರ; ಈ ಜ್ಞಾನಕ್ಷೇತ್ರದಿಂದ ಕೆಲವು ನಿಯಮಗಳನ್ನು ಮತ್ತು ತತ್ವಗಳನ್ನು ಸಾಮಾಜಿಕ ವಿಧಾನಗಳಿಗೆ ಅನ್ವಯಿಸಿಕೊಳ್ಳುವುದೂ ಕೆಲವು ಉಪಕರಣಗಳನ್ನು ಮತ್ತು ಯಂತ್ರಕೌಶಲ್ಯತೆಯನ್ನು ಅಭ್ಯಸಿಸುವುದು ಹಾಗೂ ಸಂಶೋಧನ ಕ್ಷೇತ್ರದಲ್ಲಿ ಕಾರ್ಯವೆಸಗುವುದೂ ಆಗಿದೆ."

ಮೊದಲೇ ತಿಳಿಸಿದಂತೆ ಮನಶ್ಶಾಸ್ತ್ರದ ಅತ್ಯಂತ ಸರಳವಾದ ಅರ್ಥವೆಂದರೆ "ವರ್ತನಶಾಸ್ತ್ರ"— ಅಂದರೆ ವರ್ತನೆಯನ್ನು ಕುರಿತು ಅಭ್ಯಸಿಸುವುದೇ ಆಗಿದೆ. ಅಂತಿಮವಾಗಿ ಮನಶ್ಶಾಸ್ತ್ರಜ್ಞನು ಮಾನವನ ವರ್ತನೆಗೆ ಸಂಬಂಧಿಸಿದ ನಿಯಮಗಳನ್ನು ರಚಿಸುವುದರಲ್ಲಿ ಅಭಿರುಚಿಯುಳ್ಳವನಾಗಿರುತ್ತಾನೆ. ಅವನ ನಂಬಿಕೆಯ ಮೇರೆಗೆ ಎಲ್ಲ ಜೀವಂತ ಪ್ರಾಣಿಗಳೂ ಕೆಲವು ನಿಯಮಗಳಿಗನುಸಾರವಾಗಿ ವರ್ತಿಸುತ್ತವೆ. ತತ್ಫಲವಾಗಿ ಅವನು ಕೆಲವು ಪ್ರಾಣಿಗಳ ವರ್ತನೆಯನ್ನು ಅಭ್ಯಸಿಸುತ್ತಾನೆ. ಕಾರಣವೇನೆಂದರೆ ಅವನು ಅವುಗಳ ವರ್ತನೆಯನ್ನು ಸುಲಭವಾಗಿ ತನ್ನ ಹತೋಟಿಗೊಳಪಡಿಸಬಹುದಾಗಿರುವುದೇ ಆಗಿದೆ. ಅಥವಾ ಕೊಟ್ಟ ಸನ್ನಿವೇಶದಲ್ಲಿ ಅವುಗಳ ವರ್ತನೆಯನ್ನು ಅಧ್ಯಯನಗೈಯ್ಯುವಂಥಾದ್ದಾಗಿದೆ. ಈ ರೀತಿ ಪ್ರಾಣಿಗಳ ವರ್ತನೆಯ ಬಗ್ಗೆ ಇವನು ತನ್ನ ಅಂಕಿಅಂಶಗಳನ್ನು ಸಂಗ್ರಹಿಸುತ್ತಾನೆ. ಈ ಅಂಕಿಅಂಶಗಳ ನಿಯಂತ್ರಿತ ಸನ್ನಿವೇಶಗಳಿಂದಾವಿರ್ಭೂತವಾದವುಗಳಾಗಿದ್ದು ತನ್ಮೂಲಕ ಒಂದು ಸಾಮಾನ್ಯ ಸಿದ್ಧಾಂತವನ್ನು ನಿರೂಪಿಸಲು ಸಹಾಯಕ.

"ಶಿಕ್ಷಣ ಮನಶ್ಶಾಸ್ತ್ರ" ಎಂಬ ಶಬ್ದ 'ಶಿಕ್ಷಣ' ಮತ್ತು 'ಮನಶ್ಶಾಸ್ತ್ರ' ಎಂಬೆರಡು ಶಬ್ದಗಳಿಂದ ಕೂಡಿದುದಾಗಿದೆ ಆದರಿಂದ ಅದು ಎರಡು ಶಾಸ್ತ್ರಗಳನ್ನು ನಿರ್ದೇಶಿಸುತ್ತದೆ. ಅಂದರೆ ೧) ಶಿಕ್ಷಣಶಾಸ್ತ್ರ ೨) ಮನಶ್ಶಾಸ್ತ್ರ. ಅಂದ ಮೇಲೆ ಇದು ಎರಡು ವಿಚಾರಧಾರೆಗಳ ಸಮ್ಮಿಲನದಿಂದಾದದ್ದು. ಶಿಕ್ಷಣದ ಗುರಿ ಎಂದರೆ ವ್ಯಕ್ತಿಯನ್ನು ಪರಿಪೂರ್ಣತೆಯೆಡೆಗೆ ಕೊಂಡೊಯ್ಯುವಂತಹುದು ಮತ್ತು ಸುಸಂಸ್ಕೃತ ಸಮಾಜವನ್ನು ನಿರ್ಮಿಸುವುದು. ಶಿಕ್ಷಣವು ಕಲಿಯುವಿಕೆಯನ್ನು ಕುರಿತದ್ದು. ಕಲಿಯುವ 'ವ್ಯಕ್ತಿ', 'ವಿಧಾನ' ಮತ್ತು ಕಲಿಯಲು ಬೇಕಾಗುವ ಸನ್ನಿವೇಶಗಳು, ಶಿಕ್ಷಣಶಾಸ್ತ್ರದ ಆಧಾರಸ್ತಂಭಗಳು—ಈ ಎಲ್ಲವುಗಳನ್ನು ಶೋಧಿಸಿ, ವಿಶ್ಲೇಷಿಸಿ ವಿವರಿಸುವ ಕೆಲಸ ಮನಶ್ಶಾಸ್ತ್ರದ್ದು. ಎಂದಿನಿಂದ ಶಿಕ್ಷಣಕ್ಷೇತ್ರದಲ್ಲಿ ಕಲಿಯುವಲ್ಲಿ, ಆಲಿಸುವಲ್ಲಿ ಮನೋವೈಜ್ಞಾನಿಕ ನಿಯಮಗಳು ಅನ್ವಯಿಸಲ್ಪಟ್ಟವೋ ಅಂದೇ ಶಿಕ್ಷಣ ಮನಶ್ಶಾಸ್ತ್ರ ಉದಯವಾಯಿತು. ತತ್ಫಲವಾಗಿಯೇ ಇವೆರಡಕ್ಕೂ ಬಿಡಿಸಲಾರದ ನಂಟು. ಮನಶ್ಶಾಸ್ತ್ರದ ಸೂತ್ರಗಳನ್ನು ವೈಜ್ಞಾನಿಕ

ವಾಗಿ ಶಿಕ್ಷಣರಂಗಕ್ಕೆ ಅಳವಡಿಸಿಕೊಳ್ಳುವುದರ ಮೂಲಕ ಕಲಿಯುವ ವ್ಯಕ್ತಿಗೂ, ಕಲಿಸುವ ಅಧ್ಯಾಪಕನಿಗೂ ತಮ್ಮ ಕಾರ್ಯನಿರ್ವಹಣೆಯಲ್ಲಿ ಸಹಾಯಕವಾಗುವುದೇ ಶೈಕ್ಷಣಿಕ ಮನಶ್ಶಾಸ್ತ್ರದ ಮೂಲ ಉದ್ದೇಶ. ಆದ್ದರಿಂದಲೇ ಶೈಕ್ಷಣಿಕ ಮನಶ್ಶಾಸ್ತ್ರವನ್ನು ಪ್ರಾಯೋಗಿಕ ವಿಜ್ಞಾನ—Applied Science— ಎಂದು ಕರೆದಿರುವುದು.

ಶೈಕ್ಷಣಿಕ ಮನೋವಿಜ್ಞಾನ ಎರಡು ಧೃವಗಳ ಮಧ್ಯೆ ನಿಲ್ಲುತ್ತದೆ. ಆ ಎರಡು ಧೃವಗಳೆಂದರೆ ಒಂದು ಕಲಿಯುವಿಕೆ, ಇನ್ನೊಂದು ಬೋಧಿಸುವಿಕೆ. ಕಲಿಯುವಿಕೆ ಪರಿಣಾಮಕಾರಿಯಾಗಿ ಸಾಗಬೇಕಾದರೆ ಬೋಧಿಸುವಿಕೆ ಮನೋವೈಜ್ಞಾನಿಕ ತತ್ವಗಳಿಗನುಗುಣವಾಗಿ ಸಾಗಬೇಕು. ಮನಶ್ಶಾಸ್ತ್ರವನ್ನು ಆದರ ಸಾಮಾನ್ಯಾರ್ಥದಲ್ಲಿ "ವರ್ತನ"ಶಾಸ್ತ್ರವೆಂದು ಕರೆದೆವು. ಅದು, ಏನು ? ಏಕೆ ? ಮತ್ತು ಹೇಗೆ ? ಎಂಬ ಮೂರು ಮೂಲ ಪ್ರಶ್ನೆಗಳಿಗೆ ತೃಪ್ತಿಕರವಾದ ಉತ್ತರವನ್ನು ಕಂಡುಕೊಳ್ಳಲು ಶ್ರಮಿಸುತ್ತದೆ. ಕಲಿಯುವಿಕೆ ಮತ್ತು ಬೋಧಿಸುವಿಕೆಯಲ್ಲಿ ಈ ಮೇಲಿನ ಮೂರು ಪ್ರಶ್ನೆಗಳೂ ಪ್ರಮುಖ ಸ್ಥಾನ ಪಡೆಯುತ್ತವೆ. ಬೋಧಿಸುವವ—ಏನನ್ನು ಬೋಧಿಸಬೇಕು ? ಏಕೆ ಬೋಧಿಸಬೇಕು ? ಹೇಗೆ ಬೋಧಿಸಬೇಕು ? ಎಂಬುದನ್ನು ವಿಶ್ಲೇಷಣೆಗೈದು ಶಿಕ್ಷಣ ನೀಡಬೇಕು. ಅಂತೆಯೇ ಕಲಿಯುವವನೂ ಏನು ಕಲಿಯಬೇಕು ? ಏಕೆ ಕಲಿಯಬೇಕು ? ಮತ್ತು ಹೇಗೆ ಕಲಿಯಬೇಕು ? ಎಂಬುದನ್ನು ಗಮನದಲ್ಲಿಟ್ಟು ಕಲಿಯಬೇಕು, ಈ ರೀತಿಯ ಕಲಿಯುವಿಕೆಯು ಮನಶ್ಶಾಸ್ತ್ರದ ರೀತಿಯದೆನಿಸುತ್ತದೆ. ಈ ರೀತಿಯ ಕಲಿಕೆ ತರಗತಿಗೆ ಮಾತ್ರ ಸೀಮಿತವಲ್ಲ, ಬಾಹ್ಯ ಪ್ರಪಂಚಕ್ಕೂ ಅನ್ವಯ. ವ್ಯಕ್ತಿಯ ಕಲಿಕೆ ವೈಜ್ಞಾನಿಕವಾಗಿರಬೇಕೆಂಬ ನಂಬಿಕೆಯೇ ಶೈಕ್ಷಣಿಕ ಮನೋವಿಜ್ಞಾನಕ್ಕೆ ಪ್ರೇರಕಶಕ್ತಿ. ಶಿಕ್ಷಣ ಮನಶ್ಶಾಸ್ತ್ರಕ್ಕೆ ಇಂಬುದೊರೆತದ್ದು ಈ ೨೦ನೆಯ ಶತಮಾನದಲ್ಲಿ. ಹೀಗೆಂದ ಮಾತ್ರಕ್ಕೆ ಹಿಂದೆ ಇರಲಿಲ್ಲವೆಂದಲ್ಲ. ಹಿಂದೆಯೂ ಇತ್ತು. ಅರಿಸ್ಟಾಟಲನ ಕಾಲಕ್ಕೆ ಕಲಿಕೆಯಲ್ಲಿ ಸಾದೃಶ್ಯ (Similarity), ವೈದೃಶ್ಯ (Contrast) ಮತ್ತು ಸಾಮೀಪ್ಯ (Contiguity) ನಿಯಮವನ್ನು ತಿಳಿಸಿದ್ದ. ಇದು ಪೆಸ್ಟಾಲಜಿಯಿಂದ ಅನುಷ್ಠಾನಕ್ಕೆ ತರಲ್ಪಟ್ಟಿತು. ಮಕ್ಕಳ ಯೋಗ್ಯತೆಗೆ ಮತ್ತು ಅವರ ಶಕ್ತಿಸಾಮರ್ಥ್ಯಕ್ಕೆ ತಕ್ಕಂತಹ ಶಿಕ್ಷಣ ಪದ್ಧತಿಯನ್ನು ಅವನು ಅನುಷ್ಠಾನಕ್ಕೆ ತಂದ. ಇದರಿಂದ ಮಕ್ಕಳಲ್ಲಿ ಕಲಿಕೆಯು ಸಾಧಿತವಾಗಲು ಶಿಕ್ಷಕನು ಏನು ಕ್ರಮ ಕೈಗೊಳ್ಳಬೇಕೆಂಬುದು ಸ್ಪಷ್ಟವಾಯ್ತು. ನಂತರ ಹರ್ಬಾರ್ಟನ ಪಂಚಸೋಪಾನಗಳು ಅಸ್ತಿತ್ವಕ್ಕೆ ಬಂದವು. ಅವೂ ಸಹ ಮನಶ್ಶಾಸ್ತ್ರಾಧಾರಿತ ಕಲಿಯುವಿಕೆಯ ನಿಯಮಗಳನ್ನೇ ಪ್ರತಿಪಾದಿಸಿದುವು. ಬೋಧನಾಕ್ರಮದ

3

ನಿರೂಪಣೆಯಾಯ್ತು. ನಂತರ ಶಿಕ್ಷಣಕ್ಷೇತ್ರದಲ್ಲಿ ಮನೋವೈಜ್ಞಾನಿಕ ಕ್ರಾಂತಿಯನ್ನೆಬ್ಬಿಸಿದ ಥಾರ್ನ್‌ಡೈಕ್‌ನ ಆಗಮನವಾಯ್ತು. ಈ ವೇಳೆಗೆ "ಶೈಕ್ಷಣಿಕ ಮನಶ್ಶಾಸ್ತ್ರ"ವೆಂಬ ಗ್ರಂಥ ಹೊರಬಿತ್ತು. ಆದರಿಂದ ಶಿಕ್ಷಣ ಮನಶ್ಶಾಸ್ತ್ರ ಸ್ವತಂತ್ರವಾದ ಅಸ್ತಿತ್ವವನ್ನು ಪಡೆಯಿತು. ಶಿಕ್ಷಣ ಕ್ಷೇತ್ರದಲ್ಲಿ ರಸಋಷಿಯ ಸ್ಥಾನವನ್ನು ಗಳಿಸಿದ ಜಾರ್ಡ್ಜ್ಯುಯಿ, ವಿಲಿಯಂ ಜೇಮ್ಸ್, ಪಾವ್ಲಾವ್, ಟಾಲ್‌ಮನ್, ಗೆಸ್ಟಾಲ್ಟ್ ಇತ್ಯಾದಿ ಇತ್ಯಾದಿ ಮನಶ್ಶಾಸ್ತ್ರಜ್ಞರ ಆಗಮನದಿಂದ ಶಿಕ್ಷಣಮನಶ್ಶಾಸ್ತ್ರ ನವನವೋನ್ವೇಷಣಶಾಲಿನಿಯಾಗಿ ಬೆಳೆಯತೊಡಗಿತು. ಕಲಿಯುವ ವಿಷಯಕ್ಕಿಂತ ಕಲಿಯುವ ವ್ಯಕ್ತಿ ಕೇಂದ್ರಸ್ಥಾನವನ್ನು ಪಡೆದ.

7. ಶಿಕ್ಷಣಕ್ಕೂ—ಮನಶ್ಶಾಸ್ತ್ರಕ್ಕೂ ಇರುವ ಸಂಬಂಧ.

"ಶಿಕ್ಷಣ ಮನಶ್ಶಾಸ್ತ್ರ" ಎಂದರೇನು ? ಎಂಬುದನ್ನು ಅರ್ಥೈಸಿಕೊಂಡ ಮೇಲೆ ಶಿಕ್ಷಣಕ್ಕೂ ಮನಶ್ಶಾಸ್ತ್ರಕ್ಕೂ ಇರುವ ಸಂಬಂಧ ಏನೆಂಬುದರ ಅರಿವಾಗದಿರದು.

ಶಿಕ್ಷಣ ಮನಶ್ಶಾಸ್ತ್ರ—ಮನಶ್ಶಾಸ್ತ್ರದ ಒಂದು ಭಾಗ. ಕಲಿಕೆ ಅದರ ಕಾರ್ಯ. ಕಲಿಕೆಯ ಸಿದ್ಧಾಂತಗಳನ್ನು, ತತ್ವಗಳನ್ನು ನಿರ್ಧರಿಸುವುದೇ ಶಿಕ್ಷಣ ಮನಶ್ಶಾಸ್ತ್ರದ ಬಹು ಮುಖ್ಯ ಕರ್ತವ್ಯ—ಇದು ತರಗತಿಗೆ ಮಾತ್ರ ಸೀಮಿತವಲ್ಲ. ವಾತಾವರಣದ. ಕಲಿಕೆಗೂ ಸಂಬಂಧಿಸಿದ್ದು. ಕಲಿಕೆ ಮಕ್ಕಳಿಗೆ ಮಾತ್ರ ಸೀಮಿತವಲ್ಲ. ಅದು ಅಧ್ಯಯನದ ಸನ್ನಿವೇಶವನ್ನು ಸಹ ಕುರಿತದ್ದು. ಇದು ಶುದ್ಧ ವಿಜ್ಞಾನವಲ್ಲ. ಇದು ವಿಜ್ಞಾನದ ಪದ್ಧತಿಗಳನ್ನೆಲ್ಲಾ ಅನುಸರಿಸುತ್ತದೆ. ಆದ ಕಾರಣ ಇದು ಶಾಸ್ತ್ರ ಎನಿಸಿಕೊಂಡಿದೆ.

ಶಿಕ್ಷಣಮನಶ್ಶಾಸ್ತ್ರ ಬೇರೆ ಬೇರೆ ವಿಜ್ಞಾನಗಳಿಂದ ಸಹಾಯ ಪಡೆದುಕೊಂಡಿದೆ. ಜೀವಶಾಸ್ತ್ರ, ಶರೀರಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಇತ್ಯಾದಿ ಶಾಸ್ತ್ರಗಳಿಂದಲೂ ಇದು ತನ್ನ ಸಾಮಗ್ರಿಯನ್ನು ಗಳಿಸಿಕೊಂಡುದಾಗಿದೆ. ಇದಕ್ಕೆ ಸಂಖ್ಯಾಶಾಸ್ತ್ರದ ನೆರವೂ ಆಗತ್ಯ. ಆದ್ದರಿಂದ ಇದರ ಕ್ಷೇತ್ರ ಬಹಳ ವಿಶಾಲವಾದದ್ದು. ಮಕ್ಕಳ ಬೆಳವಣಿಗೆಯ ವಿವಿಧ ಹಂತಗಳ ನಿರ್ಧಾರ ಕಲಿಕೆಯ ಸಾಮಾನ್ಯವಿಧಾನ, ವ್ಯಕ್ತಿ ಸಮಾಜದೊಂದಿಗಿರುವ ಹೊಂದಾಣಿಕೆ ಹಾಗೂ ಸಮಗ್ರ ವ್ಯಕ್ತಿತ್ವದ ಅಧ್ಯಯನ ಇತ್ಯಾದಿ ಇದರ ಮೂಲ ವಸ್ತುಗಳೆನಿಸಿವೆ.

ಮನಶ್ಶಾಸ್ತ್ರಕ್ಕೆ ಶಿಕ್ಷಣದಲ್ಲಿ ಸ್ಥಾನವಿಲ್ಲದ ಕಾಲವೂ ಸಹ ಒಂದಿತ್ತು. ಉಪಾಧ್ಯಾಯನಿಗೆ ಮಕ್ಕಳ ಮನಶ್ಶಾಸ್ತ್ರವೆಂಬುದೊಂದಿದೆ ಎಂಬುದೇ ಗೊತ್ತಿರಲಿಲ್ಲ.

ಪಠ್ಯಕ್ರಮ ಮನಶ್ಶಾಸ್ತ್ರೀಯವಾದುದಾಗಿರಲಿಲ್ಲ. ಉಪಾಧ್ಯಾಯನೇ ಕೇಂದ್ರ ವ್ಯಕ್ತಿಯಾಗಿದ್ದ. ಎಲ್ಲಮಕ್ಕಳೂ ಒಂದೇ ರೀತಿ ಕಲಿಯುತ್ತಾರೆಂಬ ಭಾವನೆಯಿತ್ತು. ಶಿಕ್ಷಣದ ಬಹು ಮುಖ್ಯ ಗುರಿ ಪರೀಕ್ಷೆಯಾಗಿತ್ತು. ಇದೆಲ್ಲ ಶಿಕ್ಷಣದ ಹಳೆಯ ಕಥೆ. ಆದರೆ ಇಂದು ಈ ಹಳೆಯ ಕಥೆಯೆಲ್ಲ ಮಾಯವಾಗಿ ಹೊಸಕಥೆ ಪ್ರಾರಂಭವಾಗಿದೆ.

ಮನಶ್ಶಾಸ್ತ್ರವು ಶಿಕ್ಷಣಕ್ಷೇತ್ರಕ್ಕೆ ಆಗಮಿಸಿದಂದಿನಿಂದ ಶಿಕ್ಷಣಕ್ಷೇತ್ರದಲ್ಲಿ ಹೊಸ ಮನ್ವಂತರ ಪ್ರಾರಂಭವಾಯ್ತು. ಮನಶ್ಶಾಸ್ತ್ರದ ಆಗಮನದಿಂದ ಹಿಂದಿನಸ್ಥಿತಿ ಶಿಥಿಲವಾಗತೊಡಗಿತು. ನೂತನ ಪ್ರಯೋಗಗಳ ಆವಿಷ್ಕಾರದಿಂದ ನೂತನ ದೃಷ್ಟಿ ಬೆಳೆಯತೊಡಗಿತು.

"ಹಳೆಮತದ ಕೊಳೆಯೆಲ್ಲ, ಹೊಸಮತಿಯ
ಹೊಳೆಯಲ್ಲಿ ಕೊಚ್ಚಿಹೋಗಲಿ, ಬರಲಿ
ವಿಜ್ಞಾನ ಬುದ್ಧಿ"—ಎಂಬ ಮಹಾಕವಿ ಕುವೆಂಪು ಅವರ ಅಮರ

ವಾಣಿಯಂತೆ ಶಿಕ್ಷಣಕ್ಷೇತ್ರವನ್ನಾವರಿಸಿದ್ದ ಹಳೆಯ ಅಭಿಪ್ರಾಯಗಳ ಕೊಳೆಯೆಲ್ಲವೂ ಮನೋವೈಜ್ಞಾನಿಕ ದೃಷ್ಟಿಯ ಹೊಸಮತಿಯ ಹೊಳೆಯಲ್ಲಿ ಕೊಚ್ಚಿಹೋಗಿ, ವಿಜ್ಞಾನ ಬುದ್ಧಿಯಂಕುರಿಸಿ ಮನಶ್ಶಾಸ್ತ್ರಾಧಾರಿತ ಶಿಕ್ಷಣ ಅಸ್ತಿತ್ವಕ್ಕೆ ಬಂತು. ಶಿಕ್ಷಣಕ್ರಾಂತಿಗೆ ಮನಶ್ಶಾಸ್ತ್ರ ನಾಂದಿಯನ್ನು ಹಾಡಿದಮೇಲೆ, ಮಗುವಿನ ವಾತಾವರಣದ ಅಧ್ಯಯನ, ಮಗುವನ್ನು ಸಮಾಜೀಕರಿಸುವ ಹೊಣೆಗಾರಿಕೆ, ವ್ಯಕ್ತಿಭಿನ್ನತೆಯನ್ನನುಸರಿಸಿ ಶಿಕ್ಷಣ ನೀಡುವ ಗುರುತರ ಜವಾಬ್ದಾರಿ, ವೈವಿಧ್ಯಮಯ ಕ್ಷೇತ್ರಕ್ಕೆ ಮನಶ್ಶಾಸ್ತ್ರದ ಆಗಮನವಾದಂದಿನಿಂದ ಅದ್ದೂರಿಯಾಗಿ ಬೆಳೆಯತೊಡಗಿದವು.

8. ಶಿಕ್ಷಣತಜ್ಞರು ಬೆಂಬಲಿಸಿದ ಮನಶ್ಶಾಸ್ತ್ರಾಧಾರಿತ ಶಿಕ್ಷಣ :

ಪ್ಲೇಟೋ : ಮನಶ್ಶಾಸ್ತ್ರಾಧಾರಿತ ಶಿಕ್ಷಣದ ಕಲ್ಪನೆ ಬಹಳ ಹಿಂದಿನದು. ಪ್ಲೇಟೋವಿನ ಕಾಲದಷ್ಟು ಹಳೆಯದು. ಮನುಷ್ಯನ ಸ್ವಭಾವವನ್ನು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಿ ಶಿಕ್ಷಣದ ಗುರಿಗಳನ್ನು ನಿರ್ಧರಿಸಬೇಕೆಂಬುದು ಪ್ಲೇಟೋವಿನ ಅಭಿಮತ. ಅವನ ಪ್ರಕಾರ ಮಕ್ಕಳ ಸ್ವಭಾವವನ್ನರಿತು ವಿಷಯಗಳನ್ನು ಬೋಧಿಸಬೇಕು.

ರೂಸೋ : "ಮಕ್ಕಳ ಅವಲೋಕನ ಕಲೆಯಮೇಲೆ ಆಲೋಚನಾತಜ್ಞನಾದ ಒಬ್ಬ ವ್ಯಕ್ತಿ ಒಂದು ಪುಸ್ತಕ ಬರೆಯಬಹುದೆಂದು ನಾನು ಅಪೇಕ್ಷಿಸುತ್ತೇನೆ. ಶಾಲೆ ಮತ್ತು ಪೋಷಕರು ಇನ್ನೂ ಅದರ ಬಗ್ಗೆ ಏನ್ನನ್ನೂ ತಿಳಿದುಕೊಂಡಿಲ್ಲ—

wish a thoughtful man could write a book on the art of observation of children. This art is very useful for us. School and parents still do not know anything about it.

ಹರ್ಬಾರ್ಟ್ : ಇವನ ಪ್ರಕಾರ "ಶಿಕ್ಷಣದ ಎಲ್ಲ ತತ್ವ- ಸಿದ್ಧಾಂತಗಳಿಗೂ ಮನಶ್ಶಾಸ್ತ್ರವೇ ತಳಹದಿಯಾಗಬೇಕು" ಎಂಬುದು.

ಫ್ರೊಬೆಲ್ : ಉಪಾಧ್ಯಾಯನಾದವನಿಗೆ ಮಾನವನ ಸಹಜ ಪ್ರವೃತ್ತಿಯ ಸಾಕಷ್ಟು ಜ್ಞಾನವಿರಬೇಕು. ಈ ಸಹಜ ಪ್ರವೃತ್ತಿಗಳನ್ನು ಉದ್ದೀಪನಗೊಳಿಸುವ ಪ್ರಯತ್ನದಿಂದ ಮಕ್ಕಳಿಗೆ ಶಿಕ್ಷಣವು ಅತ್ಯಂತ ಅಭಿರುಚಿಯುಳ್ಳದ್ದೆನಿಸುತ್ತದೆ. ಇವನ ನಂಬಿಕೆ ಏನೆಂದರೆ "ಜೀವನದ ಪ್ರತಿಯೊಂದು ಹಂತವೂ ಭವಿಷ್ಯವನ್ನು ನಿರ್ಧರಿಸುವುದಿಲ್ಲ. ಒಬ್ಬನ ಗುರಿ ಅಲ್ಲಿಗೇ ನಿಲ್ಲುವಂತಹುದಲ್ಲ. ಒಂದು ವಯಸ್ಸನ್ನು ಮುಟ್ಟಿದ ತಕ್ಷಣ ಒಂದು ಮಗು ಮಗುವಾಗುವುದಿಲ್ಲ. ಒಬ್ಬಯುವಕ ಯುವಕನಾಗುವುದಿಲ್ಲ ; ಒಬ್ಬ ಮುದುಕ ಮುದುಕನಾಗುವುದಿಲ್ಲ. ಆದರೆ ಆಯಾ ಹಂತಕ್ಕೆ ತಕ್ಕಂತಹ ವೃತ್ತಿಯ ಅನುಭವವೇ ಒಬ್ಬನನ್ನು ಮಗುವನ್ನಾಗಿ, ಯುವಕನನ್ನಾಗಿ ಮುದುಕನನ್ನಾಗಿ ಮಾಡುತ್ತದೆ".

ಮೇಲಿನ ಶಿಕ್ಷಣತಜ್ಞರ ಅಭಿಪ್ರಾಯಗಳನ್ನು ಚಿಂತನಮಂತನಗೈದು ನೋಡಿದರೆ ಶಿಕ್ಷಣಕ್ಕೂ ಮನಶ್ಶಾಸ್ತ್ರಕ್ಕೂ ಎಷ್ಟು ನಿಕಟಸಂಬಂಧವಿದೆ ಎಂಬುದರ ಅರಿವಾಗದಿರದು. ಶಿಕ್ಷಣಕ್ಷೇತ್ರವು ತನ್ನ ಮುನ್ನಡೆಯನ್ನು ಸಾಧಿಸಿದ್ದು ಮುನ್ನಡೆದ ಶಿಕ್ಷಣ ಮನಶ್ಶಾಸ್ತ್ರದ ಸಹಾಯದಿಂದ ಎಂಬುದು ನಿರ್ವಿವಾದ. ಪ್ರಗತಿಯ ಮುಂಚೂಣಿಯಲ್ಲಿ ನಿಲ್ಲುವ ಪ್ರತಿಯೊಬ್ಬ ಶಿಕ್ಷಕನಿಗೂ ಮುನ್ನಡೆದ ಶಿಕ್ಷಣ ಮನಶ್ಶಾಸ್ತ್ರದ ಪರಿಪೂರ್ಣ ಜ್ಞಾನವಿರಬೇಕು. ಹಾಗಿದ್ದಲ್ಲಿ ಅವನು ಶ್ರೇಷ್ಠ ಮಟ್ಟದ ಶಿಕ್ಷಕನಾಗಬಲ್ಲ.

(ಮುನ್ನಡೆದ ಶಿಕ್ಷಣ ಮನಶ್ಶಾಸ್ತ್ರದಿಂದ ಆಯ್ದುದು)

—★—

7. "ಡಾಕ್ಟ್ರೇ, ಆತ್ಮಹತ್ಯೆ ಮಾಡಿಕೊಳ್ಳಬೇಕೆಂಬ ವಿಚಾರ ನನಗೆ ಆಗಾಗ್ಗೆ ಬರುತ್ತದೆ. ಏನು ಮಾಡಲಿ ?"

"ಆ ಕೆಲಸವನ್ನು ನನಗೆ ಒಪ್ಪಿಸಿ ಬಿಡಿ."

ಸೆಪ್ಟಂಬರ್ ತಿಂಗಳಿನಲ್ಲಿ ವಿಶೇಷ ಕಾರ್ಯಕ್ರಮಗಳು

—ಸೋದರಿ ಮಲ್ಲಮ್ಮ

ಗಣೇಶೋತ್ಸವದ ಕಾರ್ಯಕ್ರಮಗಳಿಗೆ ಎಲ್ಲೆಲ್ಲಿಂದಲೋ ಆಮಂತ್ರಣ. ಒಂದೊಂದು ದಿನದ ಕಾರ್ಯಕ್ರಮಗಳಿಗೆ ಪೂಜ್ಯ ಮಾತಾಜಿ ಅಷ್ಟಾಗಿ ಮನಸ್ಸು ಮಾಡರು. ಏಕೆಂದರೆ ಹೋಗಿಬರುವ ಪ್ರಯಾಣದ ಪ್ರಯಾಸದ ಜೊತೆಗೆ ಒಂದೇ ದಿನದಲ್ಲಿ ಹೆಚ್ಚಿನ ಧರ್ಮಬೋಧೆ ಮಾಡಲಾಗದು ಎಂದು. ಆದರೂ ಆಗ್ರಹಪೂರ್ವಕವಾದ ಆತ್ಮೀಯ ಕರೆಗೆ ಒಲಿದು ಕೆಲವಾರು ಕಾರ್ಯಕ್ರಮಗಳನ್ನು ಅವರು ನೀಡಿದರು.

ಮೈಸೂರಿನಲ್ಲಿ 14, 15 ಮತ್ತು 16 ರಂದು.

ತ್ಯಾಗರಾಜ ಸರ್ಕಲ್‌ನಲ್ಲಿರುವ ಶ್ರೀ ಪ್ರಸನ್ನ ಗಣಪತಿ ಮಂಡಳಿಯವರ ಆಶ್ರಯದಲ್ಲಿ ನಡೆಯುತ್ತಿರುವ ಕಾರ್ಯಕ್ರಮದಲ್ಲಿ ಮೂರು ದಿವಸಕಾಲ ಭಾಗಿಗಳಾದರು. ಮೈಸೂರಿನ ಜನಪ್ರಿಯ ಶಾಸಕ ಗಂಗಾಧರನ್‌ರವರ ವಿಶೇಷ ಆಮಂತ್ರಣದ ಮೇರೆಗೆ ದಯಮಾಡಿಸಿ ಪ್ರವಚನ ಮಾಡಿದರು. 16–9–81ರಂದು ಪೂಜ್ಯಶ್ರೀ ಜಗದ್ಗುರು ಸುತ್ತೂರು ಸ್ವಾಮೀಜಿಯವರ ಘನ ಅಧ್ಯಕ್ಷತೆಯಲ್ಲಿ ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿ ತಾಯಿಯವರನ್ನು ಸನ್ಮಾನಿಸಲಾಯಿತು. ಶಾಸಕ ಗಂಗಾಧರನ್ ಮತ್ತು ಪೂಜ್ಯಶ್ರೀ ಸದ್ಗುರು ಮಾತೆ ಗಂಗಾದೇವಿಯವರು ಪೂಜ್ಯ ಮಾತಾಜಿಯವರ ಪರಿಚಯ ಮಾಡಿಕೊಟ್ಟರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಿಲ್ಲಾಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಶರಣ ರೇವಣ್ಣಸಿದ್ಧಯ್ಯನವರು ಪ್ರವಚನದ ಬಗ್ಗೆ ಪ್ರಶಂಸೆಯ ಮಾತನಾಡಿದರು. ಪೂಜ್ಯಶ್ರೀ ಜಗದ್ಗುರು ಶಿವರಾತ್ರಿ ರಾಜೇಂದ್ರಮಹಾಸ್ವಾಮಿಗಳು ತುಂಬಿದ ಹೃದಯದ ಹಾರೈಕೆಯೊಡನೆ ಪೂಜ್ಯ ಮಾತಾಜಿಯವರ ಸಾಧನೆಯನ್ನು ಕೊಂಡಾಡಿದರು. "ಇಂಥ ಸಣ್ಣ ವಯಸ್ಸಿಗೆ ಇಷ್ಟೊಂದು ಜ್ಞಾನ, ಕೀರ್ತಿ ಸಂಪಾದನೆ ಮಾಡಿರುವುದನ್ನು ನೋಡಿದರೆ ಇವರು ದೈವೀಶಕ್ತಿಯ ಪ್ರತೀಕವಲ್ಲದೆ ಬೇರಲ್ಲ. ಅನೇಕ ಜನ್ಮಗಳಿಂದ ಸಂಚಯಿಸಿಕೊಂಡು ಬಂದ ಪುಣ್ಯ-ತಪಸ್ಸುಗಳ ಪ್ರತಿಫಲವಿದು. ಕೆಲವರಿಗೆ ವಾಕ್ ಪ್ರತಿಭೆಯುಂಟು, ಆದರೆ ಸಾಹಿತ್ಯಶಕ್ತಿಯಿರದು. ಕೆಲವರಿಗೆ ಬರವಣಿಗೆಯುಂಟು. ವಾಕ್ ಪ್ರತಿಭೆ ಇರದು. ಮಾತೆಯವರಲ್ಲಿ ಎರಡೂ ಸಂಗಮಗೊಂಡಿವೆ.

ಅವರು ಮಾತನಾಡುತ್ತಿದ್ದರೆ ವಿದ್ಯಾದೇವತೆ ನಾಲಿಗೆಯಲ್ಲಿ ನರ್ತಿಸುವಂತೆ ತೋರುತ್ತದೆ. ಅವರ ಸಾಧನೆ ಕಂಡು ನಮಗಂತೂ ತುಂಬು ಅಭಿಮಾನ.

ಅವರು ಸಂಪ್ರದಾಯ ಬದ್ಧ ಸಮಾಜವನ್ನೆದುರಿಸಿ, ಸ್ವಯಂ ಪ್ರತಿಭೆಯಿಂದ ಮೇಲೇರಿ ಬಂದವರು. ಧರ್ಮ ಪ್ರಚಾರದ ಕಾರ್ಯವನ್ನು ಮಠಾಧೀಶರು ಮಾಡಬೇಕಾದುದು ಕರ್ತವ್ಯ, ಆದರೆ ಮಾಡಿರಲಿಲ್ಲ. ಆದರೆ ಪೂಜ್ಯ ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು ಅವರ ಶಿಷ್ಯರಾದ ಮಾತೆಯವರು ಕ್ರಾಂತಿಪುರುಷರಾಗಿ ಸಂಚರಿಸಿ ಧರ್ಮಪ್ರಚಾರಗೈದು ಅಪಾರ ಜನಜಾಗೃತಿ ಮಾಡಿದ್ದಾರೆ. ತಾವಷ್ಟೇ ಮಾಡಿದರೆ ಸಾಲದೆಂಬಂತೆ ಇಂಥ ಅನೇಕ (ಪೂಜ್ಯ ಮಾತೆ ಗಂಗಾದೇವಿಯವರನ್ನು ತೋರಿ ಹೇಳಿದರು) ಪ್ರಚಾರಕರನ್ನು ತಯಾರು ಮಾಡಿ ಸಮಾಜಕ್ಕೆ ಕೊಟ್ಟಿದ್ದಾರೆ. ಯಾವ ಹಿಂದಿನ ಮಠಪೀಠ ಆಸ್ತಿಯಿಲ್ಲದೆ ಇವರು ವಿಶ್ವಕಲ್ಯಾಣ ಮಿಶನ್ ಬೆಳೆಸಿರುವುದನ್ನು ನೋಡಿದರೆ ಅಗಾಧವೆನಿಸದಿರದು. ಇಂಥ ಮಾತೆಯವರನ್ನು ಇಂದು ಸನ್ಮಾನಿಸುತ್ತಿರುವುದು ತುಂಬಾ ಔಚಿತ್ಯಪೂರ್ಣವಾಗಿದೆ. ಅವರು ಬಸವಣ್ಣನವರನ್ನು ಅನನ್ಯವಾಗಿ ನಂಬಿ, ಸರ್ವಾಂಗದಲ್ಲೂ ತುಂಬಿಕೊಂಡಿದ್ದಾರೆ. ಅವರ ಸೇವೆಯನ್ನು ಸಮರ್ಪಣಭಾವದಿಂದ ಮಾಡುತ್ತಿದ್ದಾರೆ. ಪರಮಾತ್ಮನು ಲೋಕಕಲ್ಯಾಣಾರ್ಥವಾಗಿಯೇ ಇವರನ್ನು ಹುಟ್ಟಿಸಿರಬೇಕು ಎನ್ನಿಸುತ್ತದೆ. ಇಂಥ ಮಾತೆಯವರಿಗೆ ಅವನು ಆಯುರಾರೋಗ್ಯವನ್ನು, ಅಖಂಡಾಶೀರ್ವಾದವನ್ನು ಅನುಗ್ರಹಿಸಲೆಂದು ಆಶೀರ್ವದಿಸಿ ಈ ಶಾಲನ್ನು ಕೊಡುತ್ತಿದ್ದೇನೆ" ಎಂದು ಶಾಲನ್ನು ಹೊದ್ದಿಸಿದರು. ಅವರ ಒಂದೊಂದು ಮಾತಿನಲ್ಲೂ ವಾತ್ಸಲ್ಯ, ಅಭಿಮಾನ, ಮೆಚ್ಚುಗೆ, ಆನಂದ, ಹರಕೆ ಮೇಳೈಸಿದ್ದವು. ವಿಘ್ನೇಶ್ವರ ಮಂಡಳಿಯವರು ಪೂಜ್ಯ ಮಾತೆಯವರಿಗೆ ಪೂಜ್ಯ ಸ್ವಾಮಿಯವರಿಂದ ಶಾಲನ್ನು ಹೊದ್ದಿಸಿದುದೇ ಅಲ್ಲದೆ ಅವರ ಕಾರ್ಯಕ್ಕೆ 1001 ರೂಗಳ ಕಾಣಿಕೆ ಸಮರ್ಪಿಸಿದರು.

20–9–81 ಚಿಕ್ಕಬಳ್ಳಾಪುರ

ಪೂಜ್ಯ ಮಾತಾಜಿ ಚಿಕ್ಕಬಳ್ಳಾಪುರದಲ್ಲಿ ದಿ. 20–9–81 ರಂದು ಸಂಜೆ 4 ಗಂಟೆಗೆ ಶ್ರೀ ಮಲ್ಲಿಕಾರ್ಜುನ ಚಿನ್ನಪ್ಪ ಚಾರಿಟೀಸ್ ಟ್ರಸ್ಟ್‌ನ ಆಶ್ರಯದಲ್ಲಿ ನಿರ್ಮಾಣವಾಗಲಿರುವ ಕಲ್ಯಾಣ ಮಂದಿರ ಮತ್ತು ಪ್ರಾರ್ಥನಾ ಮಂದಿರಕ್ಕೆ ಶಂಕುಸ್ಥಾಪನೆ ಮಾಡಿದರು. ಟ್ರಸ್ಟಿನ ಅಧ್ಯಕ್ಷ ಬಸವರಾಜರು ಪೂರ್ಣಕುಂಭದೊಡನೆ ಮಾಲಾರ್ಪಣೆ ಮಾಡಿ ಸ್ವಾಗತಿಸಿದರು. ಸಭಾಧ್ಯಕ್ಷತೆಯನ್ನು ಅಸಿಸ್ಟೆಂಟ್ ಕಮೀಷನರ್ ಜಿ. ಕೊಂಗುವಾಡರವರು ವಹಿಸಿದ್ದರು. ಮುಖ್ಯ ಅತಿಥಿಗಳಾದ ವೈದ್ಯಾಧಿಕಾರಿ ಎಂ.ಎನ್. ಶಿವಾನಂದರವರು, ಮುಖ್ಯ ಭಾಷಣಕಾರರಾಗಿ ಡಾ॥ ಕೋಮಲಾರವರು ಆಗಮಿಸಿ

ದ್ದರು. ಪೂಜ್ಯ ಮಾತಾಜಿಯವರ ಧರ್ಮಪ್ರಚಾರ ಕಾರ್ಯ ಮರುಭೂಮಿಯಲ್ಲಿನ ಓಯಸಿಸ್‌ನಂತೆ, ಸಂಕೀರ್ಣ ಮತ್ತು ಒತ್ತಡದ ಸಮಾಜದ ಮಧ್ಯೆ ನೊಂದವರಿಗೆ ತಂಪೆರೆವ ಸಂಜೀವಿನಿ. ಇದರಿಂದ ಉದ್ಧಾರವಾಗುವವರು ಅಸಂಖ್ಯಾತರು ಎಂದು ಹೃದಯ ತುಂಬಿ ಮಾತನಾಡಿದರು. ಪೂಜ್ಯ ಮಾತೆಯವರ ಪ್ರವಚನ ಸುಧೆ ಹರಿದ ನಂತರ ಜನರು ದರ್ಶನ ಪಡೆದುಕೊಂಡರು.

22–9–81 ಶಿರಾ

ಶಿರಾದ ವಿಘ್ನೇಶ್ವರ ಭಕ್ತ ಮಂಡಳಿಯವರು 22-9-81 ರಂದು ಪೂಜ್ಯ ಮಾತೆಯವರನ್ನು ಬರಮಾಡಿಕೊಂಡರು. ವಾದ್ಯ ಸಮೇತ ಸ್ವಾಗತಿಸಿ ವೇದಿಕೆಗೆ ಬರಮಾಡಿಕೊಂಡು ಗೌರವಿಸಿದರು. ನಗರದ ಸುತ್ತಮುತ್ತಲಿನ ಹಳ್ಳಿಗಳಿಂದ, ಪಕ್ಕದ ತಾಲ್ಲೂಕುಗಳಿಂದಲೂ ಆಗಮಿಸಿ ಕಿಕ್ಕಿರಿದು ನೆರೆದಿದ್ದ ಜನ ಎರಡೂವರೆ ಗಂಟೆಗಳ ಕಾಲ ಪೂಜ್ಯರು ಮಾಡಿದ ಪ್ರವಚನವನ್ನು ಏಕಾಗ್ರಚಿತ್ತದಿಂದ, ಮಂತ್ರಮುಗ್ಧರಾಗಿ ಆಲಿಸಿದರು. ಪುಂಗಿಯ ನಾದಕ್ಕೆ ಮನಸೋತ ಹಾವಿನಂತೆ, ಕೊಳಲಿನ ಗಾನಕ್ಕೆ ಮೈಮರೆತ ಹರಿಣಿಯಂತೆ ಜನರು ಶಾಂತರಾಗಿ ಆಲಿಸುವ ದೃಶ್ಯ ರೋಮಾಂಚಕಾರಿಯಾಗಿತ್ತು.

ಬೇಕಾಗಿದ್ದಾರೆ

ಶ್ರೀ ಬಸವ ಭಾರತಿ ಪ್ರೌಢಶಾಲೆ ಮತ್ತು ಉನ್ನತ ಪ್ರೈಮರಿಗೆ ಹಗಲು ವೇಳೆಯಲ್ಲಿ ಪಠ್ಯಕ್ರಮದಂತೆ ಕಲಿಸಲಿಕ್ಕೆ ಮಾತ್ರವಲ್ಲದೆ ಸಂಜೆಯ ವೇಳೆಯೂ ವಿಶೇಷ ತರಬೇತಿ ವ್ಯವಸ್ಥೆ ಇರುವುದರಿಂದ ಶಿಕ್ಷಕರುಗಳು ಬೇಕಾಗಿದ್ದಾರೆ. ಆಸಕ್ತರಾದವರು ಅರ್ಜಿ ಸಲ್ಲಿಸಿರಿ.

1. ಪಿ. ಸಿ. ಎಮ್. ವಿಷಯಗಳೊಡನೆ ಬಿ.ಎಸ್‌ಸಿ. ಬಿ.ಎಡ್. ಆದವರು (ಇಬ್ಬರು).
2. ಸಿ. ಬಿ. ಜಡ್ ವಿಷಯಗಳೊಡನೆ ಬಿ. ಎಸ್‌ಸಿ. ಬಿ. ಎಡ್. ಆದವರು (ಇಬ್ಬರು).
3. ಇಂಗ್ಲಿಷ್ ಮೇಜರ್ ವಿಷಯದೊಡನೆ ಬಿ.ಎಡ್. ಆದವರು (ಒಬ್ಬರು).
4. ಪದವೀಧರರಾಗಿ ತರಬೇತಿ ಹೊಂದಿದ್ದರೂ ಉನ್ನತ ಪ್ರೈಮರಿಯಲ್ಲಿ ಆಂಗ್ಲ ಮಾಧ್ಯಮದಲ್ಲಿ ಕಲಿಸಬಲ್ಲ ಶಿಕ್ಷಕರು (ಇಂಗ್ಲಿಷ್ ಮೇಜರ್‌ಗೆ ಆದ್ಯತೆ).
5. ಇಂಗ್ಲಿಷ್ ಮೀಡಿಯಂ ಟಿ. ಸಿ. ಹೆಚ್. ಶಿಕ್ಷಕರು.

ವಿಳಾಸ:

ವಿಶ್ವಕಲ್ಯಾಣ ಮಿಷನ್ ವಿದ್ಯಾಸಂಸ್ಥೆ,
ಬಸವ ಮಂಟಪ, 24, 2ನೇ ಬ್ಲಾಕು, ಕಾರ್ಡ್‌ರೋಡು,
ರಾಜಾಜಿನಗರ, ಬೆಂಗಳೂರು–10. ದೂರವಾಣಿ: 82335.

ಬಾಳ ಬುತ್ತಿ

ಶಿಷ್ಯನಾಗಲುಬಹುದು, ಗುರುವು ಆಗಲುಬಾರದು

ಒಮ್ಮೆ ರಾಮಕೃಷ್ಣ ಪರಮ ಹಂಸರು ತಮ್ಮೊಂದು ಅನುಭವವನ್ನು ಹೇಳಿದರಂತೆ. ಓರ್ವ ಜಿಜ್ಞಾಸು, ಮುಗ್ಧ ಸ್ವಭಾವದವನು ಅವರ ಬಳಿಗೆ ಬಂದ. ಬಂದವನೇ ಆತುರಾತುರವಾಗಿ ದೀಕ್ಷೆಕೊಡಲು ಕೇಳಿಕೊಂಡ. ಸನ್ಯಾಸ ಸ್ವೀಕರಿಸುವುದೆಂದರೆ ಬಾಳೆಹಣ್ಣು-ಬೋಂಡಾ ನುಂಗಿದಂತೆ ಎಂದು ಕೆಲವರು ಭಾವಿಸಿರಲಿಕ್ಕೂ ಸಾಕು. ಹಿಂದಿನ ಕಾಲದಲ್ಲಿ ಅನನ್ಯ ಶ್ರದ್ಧೆಯಿಂದ, ತಾಳ್ಮೆಯಿಂದ ಗುರುವು ಕೃಪಾಕಟಾಕ್ಷ ಬೀರಿ ಎಂದು ದೀಕ್ಷೆ ನೀಡುವನೋ ಎಂದು ಕಾಯುತ್ತ ಕುಳಿತಿರುತ್ತಿದ್ದರು. ಈಗೇನೂ ಹಾಗಲ್ಲ, ಗುರುವು ನಿಧಾನಿಸಿದರೆ ಅಂಗಡಿಯಲ್ಲಿ ಸಿಕ್ಕುವ ಕಾವಿಯ ಬಣ್ಣವನ್ನು ಕೊಂಡು ಎದ್ದಿ ತೊಟ್ಟುಕೊಳ್ಳುವವರಿಗೇನೂ ಕೊರತೆಯಿಲ್ಲ.

ಇಂಥ ಆತುರದ ಶಿಷ್ಯನೊಬ್ಬ ಕೇಳಿದ ; "ಗುರುಗಳೇ ನನಗೆ ದೀಕ್ಷೆ ನೀಡಿ, ನನ್ನ ಶಿಷ್ಯತ್ವ ಸ್ವೀಕರಿಸಿ" ರಾಮಕೃಷ್ಣ ಪರಮ ಹಂಸರು ಅವನ ಆತುರ ಗಮನಿಸಿ ನುಡಿದರು. 'ಅಯ್ಯಾ ಶಿಷ್ಯನಾಗುವುದೆಂದರೆ ಸಾಮಾನ್ಯವಲ್ಲ. ಗುರುಗಳ ಸೇವೆ ಮಾಡಬೇಕು. ಬಟ್ಟೆತೊಳೆಯಬೇಕು ; ಪೂಜೆಗೆ ಅಣಿ ಮಾಡಬೇಕು. ಚೆನ್ನಾಗಿ ಓದಬೇಕು" ಇದನ್ನು ಕೇಳಿಸಿಕೊಂಡ ಶಿಷ್ಯ ಕೇಳಿದ, "ಹಾಗಾದರೆ ಗುರುಗಳ ಕೆಲಸವೇನು ?" "ಪ್ರವಚನ ಹೇಳುವುದು, ಭಕ್ತರಿಗೆ ದರ್ಶನ ಕೊಡುವುದು, ಆಶೀರ್ವದಿಸುವುದು. ಭಕ್ತರು ಭಕ್ತಿಯಿಂದ ತಂದುಕೊಟ್ಟ ಪ್ರಸಾದ ಸ್ವೀಕರಿಸುವುದು" ಪರಮ ಹಂಸರು ಹೇಳಿದರು. ಆಗಂತುಕ ಕ್ಷಣಕಾಲ ಚಿಂತಿಸಿ, 'ಹಾಗಾದರೆ ನನಗೆ ಗುರುಗಳಾಗುವ ದೀಕ್ಷೆಯನ್ನೇ ಕೊಟ್ಟುಬಿಡಿ' ಎಂದ. ಪರಮಹಂಸರು ಬಿದ್ದು ಬಿದ್ದು ನಕ್ಕರು.

ಅನೇಕರು ತಿಳಿದಿರುವುದು ಹೀಗೆಯೇ, 'ಗುರು ಪದವಿ ಬಹಳ ಸುಲಭ; ಕಾಷಾಯ ವಸ್ತ್ರ ಧರಿಸಿದ ಮಾತ್ರದಿಂದ ಅದು ಬಂದು ಬಿಡುತ್ತದೆ' ಎಂದು ಆ ವಸ್ತ್ರ ಬಹಳಷ್ಟು ಜವಾಬ್ದಾರಿಯನ್ನು, ತನ್ನ ಬದುಕನ್ನು ಜವಾಬ್ದಾರಿಯಿಂದ ಜತನದಿಂದ ಗುರಿಮುಟ್ಟಿಸಿಕೊಳ್ಳುವೆನೆಂಬ ಛಲವನ್ನು ಮನಗಾಣಿಸುವಂತಿರುತ್ತದೆ. ಶಿಷ್ಯನಾಗಿ ಇರುವುದು ಸುಲಭದ ಕೆಲಸ; ಏಕೆಂದರೆ ಜವಾಬ್ದಾರಿ ಅವನ ಗುರುವಿನ ಮೇಲೆ ಇರುತ್ತದೆ. ಗಿಡಕ್ಕೆ

ಬಿಸಿಲು ಬಿದ್ದರೂ ಕೆಳಗೆ ಕುಳಿತವರು ನೆರಳಲ್ಲಿ ಇರುವಂತೆ ಇನ್ನೊಬ್ಬರ ಆಶ್ರಯದಲ್ಲಿದ್ದಾಗ ಹೊಣೆಗಾರಿಕೆ ಕಡಿಮೆ. ತಾನೇ ಗುರುವಾದಾಗ ಹೊಣೆಗಾರಿಕೆ ಹೆಚ್ಚು. ಭಕ್ತರು ತಪ್ಪಿದಾಗ, ಶಿಷ್ಯರು ಎಡವಿದಾಗ ಬುದ್ಧಿ ಹೇಳುವ ಜವಾಬ್ದಾರಿ ಬೇರೆ ಹೊರಬೇಕು. ಅದರಿಂದ ಕಷ್ಟವೇ ಜಾಸ್ತಿ. 'ಸಾಧಕರಾದವರು ಹೀಗಿರಬೇಕು, ಹಾಗಿರಬೇಕು. ಇನ್ನಿತರ ತರುಣ ತರುಣಿಯರೊಡನೆ ಚೆಲ್ಲಾಟವಾಡಬಾರದು. ತಾವು ಯಾವ ಗುರಿಯನ್ನು ಇಟ್ಟುಕೊಂಡು ವೈರಾಗ್ಯದ ನೌಕೆಯನ್ನು ಏರಿದ್ದರೋ ಅದನ್ನು ಮರೆಯದೆ ದಡ ಕಾಣಿಸಬೇಕು. ಮನಸ್ಸನ್ನು ನಿಯಂತ್ರಿಸಬೇಕು" ಎಂದು ಗುರುವಿನ ಜವಾಬ್ದಾರಿ ಹೊತ್ತು ಬುದ್ಧಿವಾದ ಹೇಳಿದ್ದೇ ಆದರೆ, ಬುದ್ಧಿವಾದ ಪಡೆದುಕೊಂಡವರು ಶತ್ರುಗಳೇ ಆಗುವರೇ ವಿನಾ ತಮ್ಮ ಹಿತಕ್ಕಾಗಿ ಹೇಳಿದ್ದೆಂದು ತಿದ್ದಿಕೊಂಡು ನಡೆಯುವುದಿಲ್ಲ. ಇನ್ನು ಬುದ್ಧಿವಾದ ಹೇಳದೆ ಉದಾಸೀನ ಮಾಡಿದರೆ ಸಂಭವಿಸಬಹುದಾದ ಪ್ರಸಂಗಗಳನ್ನು ಕಣ್ಣಾರೆ ನೋಡಿ, ಮನಸಾರೆ ದುಃಖಿಸುವ ತಾಪತ್ರಯ ಒದಗಬಹುದು. ಕೆಲವರಂತೂ ಬಿಸಿ ತುಪ್ಪದಂತಹ ಜನ. ಬಿಸಿ ತುಪ್ಪವೆಂದು ಉಗುಳಿದರೆ ವ್ಯರ್ಥವಾಗುವುದೆಂಬ ಸಂಕಟ, ತಿಂದರೆ ನಾಲಿಗೆ ಸುಡುವುದು. ಹೊರಹಾಕಿದರೆ ಅವರ ಬದುಕು ದುಃಖಮಯವಾಗುವುದೆಂಬ ಮರುಕ, ಇರಿಸಿಕೊಂಡರೆ ಸಹಿಸಿಕೊಳ್ಳಬೇಕಾದ ಸಂಕಟ. ಇದೆಲ್ಲ ನೋಡುವಾಗ ಜವಾಬ್ದಾರಿ ಹೊರಬಲ್ಲ ಗುರುವಾಗುವುದಕ್ಕಿಂತಲೂ, ಇನ್ನೊಬ್ಬರ ಆಶ್ರಯದಲ್ಲಿ ಶಿಷ್ಯರಾಗಿರುವುದೇ ಕ್ಷೇಮ ಎನ್ನಿಸದಿರದು.

ಒಡೆಯರುಳ್ಳಾಳಿಂಗೆ ಕೇಡಿಲ್ಲ ಕಾಣಿಭೋ !

1149 ನೆಯ ಬಸವಣ್ಣನವರ ವಚನದ ಮೊದಲ ಸಾಲಿದು. ಇದ್ದಕ್ಕಿದಂತೆಯೇ ಕಣ್ಮುಂದೆ ಕಟ್ಟಿತು. ಏನಿದರ ಅರ್ಥ ಎಂದು ತಲೆ ಚಿಂತಿಸತೊಡಗಿತು. ಪ್ರತಿಯೊಬ್ಬನಿಗೆ ಒಬ್ಬ ಒಡೆಯಬೇಕು. ಒಡೆಯನ ರಕ್ಷಣೆ, ಆಶ್ರಯಬೇಕು. ಇಲ್ಲವಾದರೆ ಆಳು, ನಿರಾಶ್ರಿತನೂ ನಿಸ್ಸಹಾಯಕನೂ ಆಗುವನು. ಆಶ್ರಯಿಸಿದ ಸ್ಥಾನದ ಮೇಲೆ ದುರ್ಬಲನೂ ಸಬಲನೂ ಆಗುವನು.

ಒಮ್ಮೆ ವೈಕುಂಠಾಧಿಪತಿ ವಿಷ್ಣುವು ಕೈಲಾಸಧಿಪತಿ ಶಿವನ ಬಳಿಗೆ ಒಂದು ನಿರೂಪವನ್ನು ಕಳಿಸಬೇಕಾಗಿತ್ತು. (ಪೌರಾಣಿಕ ಕಥೆಗಳಲ್ಲಾಗಲೀ, ವೈಕುಂಠ–ಕೈಲಾಸ ಲೋಕಗಳ ಇರುವಿಕೆಯಲ್ಲಿ ನಮ್ಮ ನಂಬಿಕೆ ಇಲ್ಲ. ಸಾಂಕೇತಿಕವಾಗಿ ಕಥೆಯನ್ನು ಮಾತ್ರ ಬಳಸಿಕೊಳ್ಳುತ್ತಿದ್ದೇನೆ) ಆಗ ತನ್ನ ವಾಹನವಾದ ಗರುಡನನ್ನು ಸಂದೇಶ ತಲುಪಿಸಲು ವಿಷ್ಣುವು ಕಳಿಸಿದ. ಗರುಡ ಬಂದಾಗ ಶಿವನು ಧ್ಯಾನಮುದ್ರೆಯಲ್ಲಿದ್ದ. ಅವನ ಕೊರಳು ಮೈ ಬಳಸಿ ಮಲಗಿದ್ದ ಹಾವು ಗರುಡನನ್ನು ಕಾಣುತ್ತಲೇ ಬುಸ್ ಎಂದು ಹೆಡೆ ಬಿಚ್ಚಿ, ಹೂಂಕರಿಸಿತು. ಗರುಡನು ಸಹನೆ ತಂದುಕೊಂಡು

ನುಡಿಯಿತಂತೆ, "ಎಲೈ ಸರ್ಪವೇ ನನ್ನ ಮುಂದೆ ನೀನೆಷ್ಟರವನು? ನಿನ್ನ ಬಲ ಎಷ್ಟರದು? ಆದರೆ ನಾನೀಗ ನಿಸ್ಸಹಾಯಕ. ಕಾರಣವೆಂದರೆ ನೀನು ಆಶ್ರಯಿಸಿರುವ ಸ್ಥಾನ ಅಷ್ಟು ಮಹತ್ವಪೂರ್ಣವಾದುದು, ಶಕ್ತಿಯುತವಾದುದು. ಅಲ್ಲಿಂದ ಕೆಳಗಿಳಿ ನಿನ್ನ ಅಹಂ ಅನ್ನು ನೋಡಿಕೊಳ್ಳುತ್ತೇನೆ."

ಒಂದು ಶಕ್ತಿಯುತವಾದ ಸ್ಥಾನವನ್ನು ಆಶ್ರಯಿಸಿಕೊಂಡಿರುವಾಗ ಶತ್ರುಗಳು ಒಳಗೇ ಅಸಹನೆಯಿಂದ ಕುದಿದರೂ ಹೊರಗೆ ತೋರ್ಪಡಿಸಲಾರದೆ ಇರುವರು. ಆದರೆ ಆ ಸ್ಥಾನದಿಂದ ಚ್ಯುತರಾಗಿ ಹೊರಬರುತ್ತಿದ್ದಂತೆಯೇ ಹೊರಬಂದವರನ್ನು ಹೆದರಿಸಿಕೊಳ್ಳಲಾರಂಭಿಸುವರು. ಅದಕ್ಕೆಂದೇ ಒಡೆಯನೊಬ್ಬಬೇಕೆಂದು ಬಸವಣ್ಣನವರು ಹೇಳುವರು. ಓರ್ವ ಸ್ತ್ರೀಯು ಇನ್ನೂ ಅವಿವಾಹಿತೆಯಾಗಿದ್ದಾಗ ಅನೇಕ ಸಹಪಾಠಿಗಳು, ತರುಣರು ತಮಾಷೆ ಮಾಡುವರು, ಸಲುಗೆ ತೋರುವರು. ಆಕೆ ವಿವಾಹಿತೆಯಾಗಿ ತಾಳಿಯನ್ನು ಧರಿಸಿ ಮಂಗಲಸೂತ್ರ ಕಟ್ಟಿಕೊಳ್ಳುತ್ತಲೇ ದೃಷ್ಟಿಯೇ ಬದಲಾಗಿ ಗಂಭೀರವಾಗಿ ವರ್ತಿಸುವರು. 'ಆಕೆಗೊಬ್ಬ ಒಡೆಯನಿದ್ದಾನೆ' ಎಂಬ ಪ್ರಜ್ಞೆಯೇ ಈ ಪರಿವರ್ತನೆಗೆ ಕಾರಣ. ಓರ್ವ ವ್ಯಕ್ತಿ ಅವನು ಎಂಥವನೇ ಇರಲಿ. ವಿದೇಶಗಳಿಗೆ ರಾಯಭಾರಿಯಾಗಿ ಹೋಗಿರುತ್ತಾನೆಂದು ಇಟ್ಟುಕೊಳ್ಳೋಣ. ಇಲ್ಲಿಂದ ಆಜ್ಞಾಪಿಸಿ ರಾಷ್ಟ್ರವು ಕಳಿಸಿದಾಗ ಅಲ್ಲಿ ಎಂಥದೇ ಸಂಕಷ್ಟ ತೊಂದರೆ ಬಂದರೂ ಈ ಒಡೆಯರಾಷ್ಟ್ರವು ರಕ್ಷಿಸುತ್ತದೆ; ಅವನಿಗೆ ಅಪಮಾನವಾದರೆ ಪ್ರತಿಭಟಿಸುತ್ತದೆ. ಹೀಗೆ ಒಡೆತನದ ಆಶ್ರಯ ಇದ್ದಾಗ ಆನೆಯ ಬಲ. ಇದೇ ರೀತಿ ಶಿಷ್ಯನಿಗೆ ಗುರುವಿನ ಆಶ್ರಯ. ಭಕ್ತನಿಗೆ ದೇವನ ಆಶ್ರಯವೂ ಮುಖ್ಯ. ಮೃತ್ಯುಂಜಯನ ಆಶ್ರಯದಲ್ಲಿದ್ದ ಮಾರ್ಕಂಡೇಯನಿಗೆ ಮೃತ್ಯು ಏನೂ ಮಾಡಲಾರದೇ ಹೋಯಿತು. ಬಹಳ ದೊಡ್ಡ ಉದಾಹರಣೆ ಬೇಡ. ನಾಯಿಗಳ ಒಂದು ಉದಾಹರಣೆ ನೋಡೋಣ. ಕೊರಳ ಪಟ್ಟಿಯಿದ್ದ ನಾಯಿಯನ್ನು ಕಾರ್ಪೊರೇಷನ್‌ನವರು ಹಿಡಿಯುವುದಿಲ್ಲ. ಬೀದಿಯ ನಾಯಿಯನ್ನು ಹಿಡಿಯುತ್ತಾರೆ. ಅದಕ್ಕೆ ಒಡೆಯರು, ವಾರಸುದಾರರು ಇಲ್ಲವೆಂದು.... ಮಾನವನ ಪಾಡಾದರೂ ಅಷ್ಟೇ! ದೇವನ ಆಶ್ರಯ ತಪ್ಪಿದ ಭಕ್ತ, ಗುರುವಿನ ಆಶ್ರಯ ತಪ್ಪಿದ ಶಿಷ್ಯ, ಪತಿಯ ಆಶ್ರಯ ತಪ್ಪಿದ ಸತಿ, ಒಡೆಯನ ಆಶ್ರಯ ತಪ್ಪಿದ ಸೇವಕ ಅನೇಕ ಸಂಕಷ್ಟಗಳಿಗೆ ಸಿಕ್ಕುತ್ತಾರೆ, ನಿಸ್ಸಹಾಯಕರಾಗುತ್ತಾರೆ. ಸಾಮಾನ್ಯರಿಂದಲೂ ತಿರಸ್ಕಾರಕ್ಕೆ ಒಳಗಾಗುತ್ತಾರೆ. ಅದೇ ಒಡೆಯರುಳ್ಳಾಳು ಸದಾ ರಕ್ಷಣೆಯಲ್ಲಿರುತ್ತಾನೆ.*

ಬಸವಣ್ಣನವರ ಬಗ್ಗೆ ತಪ್ಪು ಕಲ್ಪನೆ

(ಶ್ರೀ ಆರ್ಕೆ; ಮಣಿಪಾಲ ಅವರಿಗೆ ಉತ್ತರ)

ಮಾತಾಜಿ

ಬೆಂಗಳೂರು ವಿಶ್ವವಿದ್ಯಾಲಯದವರ ಪ್ರೌಢ ಪತ್ರಿಕೆ ಸಾಧನೆ. ಅದರ ಸಂಪುಟ 10, ಸಂಚಿಕೆ 1, ಪುಟ 19 ರಲ್ಲಿ, ಶ್ರೀಯುತ ಆರ್ಕೆ, ಮಣಿಪಾಲ ಎಂಬ ಲೇಖಕರು ತಮ್ಮೊಂದು ಲೇಖನದಲ್ಲಿ ಕೆಲವೊಂದು ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಬಸವಣ್ಣನವರ ಸುಧಾರಣೆಗಳಲ್ಲಿ ಲೋಪವನ್ನು ಕಂಡಿದ್ದಾರೆ. ಇಂದು ಅವರಂತೆಯೇ ವಿಚಾರ ಮಾಡುವ ಅನೇಕರು, ಈ ಸಮಾಜದಲ್ಲಿ ಬುದ್ಧಿ ಜೀವಿಗಳೆಂದು ಕರೆದುಕೊಳ್ಳುವ ಅಥವಾ ಕರೆಸಿಕೊಳ್ಳುವಂಥವರ ತಂಡದಲ್ಲಿರಬಹುದು, ಅದಕ್ಕಾಗಿ ಉತ್ತರಪೂರ್ವಕವಾಗಿ ಈ ಲೇಖನವನ್ನು ಬರೆಯುತ್ತಿದ್ದೇನೆ.

1. "ವೈದಿಕ ಧರ್ಮವನ್ನು ಖಂಡಿಸಿದರೂ ಹೊಸಮತವನ್ನು ಬಸವಣ್ಣ ಹುಟ್ಟುಹಾಕಿದ" ಎಂದಿದ್ದಾರೆ ಲೇಖಕರು.

ಬಸವಣ್ಣನವರು ಸಮತಾವಾದೀ ಕ್ರಾಂತಿಯನ್ನು ಮಾಡಲೆಳೆಸಿದರು. ಆ ಕ್ರಾಂತಿಗೆ ಬೆನ್ನೆಲುಬು ಚಿತ್ಪ್ರಧಾನವಾದ (Idealism) ವೇ ವಿನಾ ಭೌತಿಕವಾದ (materialism) ವಲ್ಲ. ವರ್ಣವಾದ, ವರ್ಗವಾದವನ್ನು ತೊಡೆದು ಹಾಕಲು ಅವರು ಪ್ರಯತ್ನಿಸಿದರಾದರೂ ಆ ಸಮಾನತೆ ನಾಸ್ತಿಕವಾದ, ನಿರೀಶ್ವರವಾದದ ಮೇಲೆ ರೂಪುಗೊಳ್ಳದೆ ಸೇಶ್ವರವಾದದ ಮೇಲೆ ರೂಪುಗೊಂಡುದಾಗಿತ್ತು. ವೈದಿಕ ಧರ್ಮದಲ್ಲಿದ್ದ ಬಹುದೇವೋಪಾಸನೆ, ವರ್ಣವಾದಗಳ ವಿರುದ್ಧ ಬಂಡೆದ್ದ ಬುದ್ಧ, ಮಹಾವೀರರು ನಿರೀಶ್ವರವಾದದ ಸೂತ್ರ ಬಳಸಿಕೊಂಡರು. ಬಸವಣ್ಣನವರು ದೇವರ ಬಗೆಗಿದ್ದ ಅಜ್ಞಾನ, ಮೂಢವಿಚಾರ ಖಂಡಿಸಿ ಸರಿಯಾದ ಕಲ್ಪನೆಯ ತಳಹದಿಯ ಮೇಲೆ ವೈಚಾರಿಕ ಸಿದ್ಧಾಂತವನ್ನು ಮಂಡಿಸಿದರು. ಸೇಶ್ವರವಾದಿ ವೈದಿಕ ಧರ್ಮದಿಂದ ಹೊರಬಂದು ಅವರು ಇನ್ನೊಂದು ನಿರೀಶ್ವರವಾದಿ ವಿಚಾರಧಾರೆಯನ್ನು ರೂಪಿಸಲು ಯತ್ನಿಸದೆ ಸೇಶ್ವರವಾದಿ ವೈಚಾರಿಕ ಸಂವಿಧಾನ ಕೊಟ್ಟರು. ಬಹುದೇವೋಪಾಸನೆ (Polytheism) ಯಿಂದ ಏಕದೇವೋಪಾಸನೆಗೆ ಪರಿವರ್ತನೆಗೊಂಡರು. ಜಾತಿ, ವರ್ಣ, ವರ್ಗಗಳಿಗೆ ಮನ್ನಣೆ ನೀಡದ ಸಮತಾವಾದಿ ಧರ್ಮವೊಂದನ್ನು ರೂಪಿಸುವುದೇ

ಅವರ ಉದ್ದೇಶವಾಗಿತ್ತು; ಧರ್ಮವನ್ನೇ ಅವರು "ಕಲ್ಯಾಣರಾಜ್ಯ" (Welfare state) ಸ್ಥಾಪನೆಗೆ ಪ್ರಮುಖ ಸಾಧನವನ್ನಾಗಿ ಮಾಡಿದರು. ಆದ್ದರಿಂದ ಅವರೊಂದು ಹೊಸಧರ್ಮವನ್ನು ಹುಟ್ಟು ಹಾಕಿದುದು ತಪ್ಪೇನಲ್ಲ, ಅದೊಂದು ವಿಶೇಷವಾದ ಕೊಡುಗೆ. ಮುರುಕು ಮನೆಯ ಛಾವಣಿಯ ಕೆಳಗೆ ಮಳೆಗಾಳಿಗೆ ಸಿಕ್ಕಿ ತೋಯಿಸಿಕೊಂಡು, ನಡುಗುತ್ತಾ ನಿಂತವರನ್ನು ಆ ಮನೆ ಸರಿಯಿಲ್ಲವೆಂದು ಆಚೆ ಕರೆತಂದು ಬಯಲಿಗೆ ನಿಲ್ಲಿಸಲಿಲ್ಲ. ಮುರುಕು ಮನೆಯಿಂದ ಹೊರತಂದು ಇನ್ನೊಂದು ಸುವ್ಯವಸ್ಥಿತವಾದ ಆರ್. ಸಿ. ಸಿ. ಕಟ್ಟಡದೊಳಗೆ ಆಶ್ರಯನೀಡಿದರು. ಮೂಢನಂಬಿಕೆಯ ವಿರೋಧಿಯಾದ ವೈಚಾರಿಕ ಸಿದ್ಧಾಂತವನ್ನು ರೂಪಿಸಿದರು. ಇದು ಅಂದಿನ ಅವಶ್ಯಕತೆಯೂ ಹೌದು.

ಒಂದು ವೇಳೆ ಯಾರಾದರೂ ಅಂತಹ ಸಮತಾವಾದಿ ಕ್ರಾಂತಿಕಾರಿ ಸಿದ್ಧಾಂತವನ್ನು ಒಂದು ಜಾತಿಯನ್ನಾಗಿ ವಿಕೃತಗೊಳಿಸಿದರೆ ತಪ್ಪು ಅನುಯಾಯಿಗಳದೇ ವಿನಾ ಕೊಟ್ಟವರದಲ್ಲ. ಅದ್ವೈತವು ಶಂಕರಾಚಾರ್ಯರ ವಿಚಾರಧಾರೆ. ಆ ಬಗೆಯ ಸೈದ್ಧಾಂತಿಕ ದೃಷ್ಟಿಕೋನ ಉಳ್ಳವರೆಲ್ಲ ಒಂದು ದೃಷ್ಟಿಯಿಂದ ಅವರ ಶಿಷ್ಯರೇ! ಅಂಥ ವಿಚಾರಧಾರೆಯವರು ಪಾಶ್ಚಿಮಾತ್ಯರಲ್ಲಿಯೂ ಇರಬಹುದು; ಪೌರ್ವಾತ್ಯರಲ್ಲೂ ಇರಬಹುದು. ಶಂಕರಾದ್ವೈತಿಗಳಾದ ಅನೇಕ ಶೈವಬ್ರಾಹ್ಮಣರೇ ಅದ್ವೈತ ಸಿದ್ಧಾಂತವನ್ನು ಇಂದು ಮಾನ್ಯ ಮಾಡದೆ ರಾಮಾನುಜರ ವಿಶಿಷ್ಟಾದ್ವೈತದತ್ತ ಆಕರ್ಷಿತರಾಗಿರಬಹುದು. ಯಾವುದಾದರೊಂದು ವಿಚಾರಧಾರೆಯನ್ನು ನಂಬುವುದಕ್ಕೂ, ಜಾತಿಗೂ ಸಂಬಂಧವನ್ನು ಕಲ್ಪಿಸುವುದು ನಮ್ಮ ದೇಶದಲ್ಲಿ ಬೆಳೆದು ಬಂದಿರುವ ಅಜ್ಞಾನಯುಕ್ತ ಸಂಪ್ರದಾಯ. ಹಾಗೆಯೇ ಬಸವಣ್ಣನವರ ವಿಚಾರಧಾರೆಯಲ್ಲಿ ನಂಬಿಕೆ ಇಟ್ಟವರನ್ನು ನಿಜ ಅನುಯಾಯಿಗಳೆಂದು ಭಾವಿಸುವ ಸತ್ಸಂಪ್ರದಾಯ ಬೆಳೆದು ಬರದೆ ಒಂದು ವಿಶಿಷ್ಟ ಜಾತಿಯವರನ್ನು ಧರ್ಮದ ಅನುಯಾಯಿಗಳೆಂದು ಭಾವಿಸುವ ತಪ್ಪು ಜನರದೇ ವಿನಾ ಬಸವಣ್ಣನವರು ಕೊಟ್ಟ ವಿಚಾರಧಾರೆಯದಲ್ಲ.

2. "ಬ್ರಾಹ್ಮಣರ ದಬ್ಬಾಳಿಕೆ ವಿರುದ್ಧ ಬಂಡೆದ್ದ ಬಸವಣ್ಣ ಜನಿವಾರ ಕಿತ್ತರೂ ಶಿವದಾರ ಹಾಕಿಕೊಂಡ".

ಇದು ಶ್ರೀ ಆರ್ಕೆ, ಮಣಿಪಾಲ ಅವರ ಇನ್ನೊಂದು ಟೀಕೆ. ಶಿವದಾರದ ಹಿನ್ನೆಲೆ ಅಥವಾ ಅರ್ಥವನ್ನಾಗಲೀ ಅವರು ತಿಳಿದಂತೆ ಕಾಣದು. ಜನ್ನಿವಾರ-ಶಿವದಾರ ಎರಡೂ ದಾರಗಳೇ ಆದರೂ ಅರ್ಥದಲ್ಲಿ ಅಜಗಜಾಂತರ ವ್ಯತ್ಯಾಸಗಳಿವೆ. ಕೊರಳಲ್ಲಿ ಕಾಣುವ ದಾರ ಶ್ರೇಷ್ಟತೆಯ ಸಂಕೇತವಾಗಿತ್ತು. ಆದರೆ ಆ ದಾರ ಶೂದ್ರರಿಗೆ, ಅಸ್ಪೃಶ್ಯರಿಗೆ, ಸ್ತ್ರೀಯರಿಗೆ ಲಭ್ಯವಿರಲಿಲ್ಲ. ಜನ್ನಿವಾರವನ್ನು ಕೊಡುವುದರಲ್ಲಿ ಸ್ತ್ರೀ-ಪುರುಷ ಎಂಬ

ಲಿಂಗಭೇದ, ಬ್ರಾಹ್ಮಣ-ಶೂದ್ರ ಎಂಬ ವರ್ಣಭೇದ, ಸನ್ಯಾಸಿ-ಸಂಸಾರಿ ಎಂಬ ಆಶ್ರಮ ಭೇದಗಳಿದ್ದವು. ಇವೆಲ್ಲವನ್ನೂ ತೊಡೆದು ಹಾಕುವ ಸಾಧನವನ್ನಾಗಿ ಭಾವಿಸಿ, ಎಲ್ಲರಿಗೂ ಶಿವದಾರವನ್ನು ಬಸವಣ್ಣನವರು ದಯಪಾಲಿಸಿದರು. ಮೈಮೇಲೆ ಒಂದು ದಾರವನ್ನು ಕಾಣುತ್ತಲೇ ಅವನು ಸಂಸ್ಕಾರ ಹೊಂದಿದವ, ಶ್ರೇಷ್ಟ ಎಂಬ ಭಾವನೆಗೆ ಪೂರಕವಾಗಿ ಎಲ್ಲರಿಗೂ ದಾರವನ್ನು ಕೊಟ್ಟರು. ಅಲ್ಲದೆ ಶಿವದಾರ ಒಂದು ಮಾಧ್ಯಮಿಕ ಸಾಧನೆ ಮಾತ್ರ. ದಾರವನ್ನು ಲಿಂಗಧಾರಿಗಳು ಪೂಜಿಸರು. ಅದರ ಸಹಾಯದಿಂದ ದೈವೀ ಲಾಂಛನವನ್ನು ಧರಿಸುತ್ತಾರೆ.

ಶಿವದಾರವು (ಇಷ್ಟಲಿಂಗ ಸಹಿತವಾಗಿ) ಯಾರಿಗೆ ಬೇಕಾದರೂ ಲಭ್ಯವಾಗುವುದರಿಂದ ಇದರಲ್ಲಿ ಜಾತಿಭೇದ, ವರ್ಣಭೇದ, ಲಿಂಗಭೇದಗಳ ಕಲ್ಪನೆ ಇಲ್ಲ. ಹಾಗೆಯೇ ಸನ್ಯಾಸಿ-ಸಂಸಾರಿ ಎಂಬ ಭೇದವೂ ಇಲ್ಲ. ವೈದಿಕ ಸಂಪ್ರದಾಯದಲ್ಲಿ ಜನ್ನಿವಾರವನ್ನು ತೆಗೆದು ಸನ್ಯಾಸವನ್ನು ದಯಪಾಲಿಸುವರು; ಅದು ಮೂರು ಋಣಗಳ ಸಂಕೇತ. ಸನ್ಯಾಸಿ ಈ ಮೂರರಿಂದ ಹೊರಗಾಗಬೇಕು ಎಂದು. ಆದರೆ ಶಿವದಾರಕ್ಕೆ ಬಂಧಿಸಿದ ಇಷ್ಟಲಿಂಗ ಪರಾತ್ಪರ ವಸ್ತುವಿನ ಸಂಕೇತವಾದ ಕಾರಣ ಅದನ್ನು ತೆಗೆದೇನೂ ಸನ್ಯಾಸ (ಜಂಗಮ)ದೀಕ್ಷೆ ಕೊಡರು. ಜನ್ನಿವಾರವು ಈಗ ವರ್ಣಗಳ ಸಂಕೇತವಾಗಿ ಕೊಡಲ್ಪಡುತ್ತಿದೆಯಷ್ಟೆ. ಈಗ ಅದನ್ನು ವಿಶಾಲೀಕರಣಗೊಳಿಸಿ, ಯಾವ ಭೇದವೂ ಇಲ್ಲದೆ ಎಲ್ಲರಿಗೂ ಕೊಡಲಾರಂಭಿಸಿದರೆ ಅದಕ್ಕೂ ವ್ಯಾಪಕತೆ ಬರುತ್ತದೆ. ಇಲ್ಲಿ ಕೊಡಲ್ಪಡುವ ವಸ್ತುವಿಗಿಂತ ಕೊಡುವ, ಬಿಡುವ ಹಿಂದಿನ ಉದ್ದೇಶ (Motivation) ಬಹಳ ಮುಖ್ಯ. ಕೆಲಸಕ್ಕೆ ಬಾರದ ಒಂದು ಡಬ್ಬಿ ಮುಚ್ಚಳವನ್ನೇ ಓರ್ವ ಮಲತಾಯಿ ತನ್ನ ಮಗನಿಗೆ ಕೊಟ್ಟು ಮಲಮಗನಿಗೆ ಕೊಡಲಿಲ್ಲ ಎಂದಿಟ್ಟುಕೊಳ್ಳೋಣ. 'ನನಗೇಕಮ್ಮಾ ಕೊಡಲಿಲ್ಲ?' ಎಂದು ಅವನು ಕೇಳಿದಾಗ, 'ನೀನು ನನ್ನ ಮಗನಲ್ಲ, ಮಲಮಗ' ಎಂದರೆ ಅವನು ರೋಷವುಕ್ಕಿ ತನ್ನ ಹಕ್ಕು ಬಾಧ್ಯತೆಗೆ ಹೋರಾಡುತ್ತಾನೆ. ಅಂಥ ಡಬ್ಬಿ ಮುಚ್ಚಳಗಳು ಸಹಸ್ರಾರು ಬಿದ್ದಿರಬಹುದು. ಆದರೆ ಸಂವಿಧಾನಾತ್ಮಕವಾಗಿ ನಿರಾಕರಿಸಿದಾಗ ವಂಚಿತನು ಪ್ರತಿಭಟಿಸುತ್ತಾನೆ. ಅದೇ ರೀತಿ ಹಲವಾರು ದಾರಗಳು ಅಂಗಡಿಯಲ್ಲೆಲ್ಲ ದೊರೆಯುತ್ತವೆ. ಧಾರ್ಮಿಕ ಹಕ್ಕಾಗಿ ನಿನಗೆ ಕೊಡಲಾರೆ ಎಂದಾಗ ಧರ್ಮಶೋಷಿತನು ಪ್ರತಿಭಟಿಸುತ್ತಾನೆ, ಹಕ್ಕು ಬಾಧ್ಯತೆಗಾಗಿ ಹೋರಾಡುತ್ತಾನೆ. ಈ ದೃಷ್ಟಿಯಿಂದ (ಇಷ್ಟಲಿಂಗ ಸಹಿತವಾದ) ಶಿವದಾರ ಸಮಾನತೆಯ ಸಂಕೇತ, ಸಂಸ್ಕಾರದ ಕುರುಹು. ಶಿವದಾರವು ಜಾತಿಯ ಕಟ್ಟುಗಳನ್ನು ಒಡೆದು ಅತಿವರ್ಣಾಶ್ರಮ ಸಮಾಜ ರಚನೆಯನ್ನು ಕುರಿತು ಮಾತನಾಡುತ್ತದೆ. ಜನ್ನಿವಾರ ಧರಿಸಿದವರ ಮಧ್ಯದಲ್ಲಿ ಮತ್ತೆ ಗೋತ್ರ, ಸೂತ್ರಗಳ ಭಿನ್ನಭೇದವಿದೆ. ಇಷ್ಟಲಿಂಗಧಾರಿಗಳು ಎಲ್ಲರೂ

"ಲಿಂಗಸಾಕ್ಷಿ"ಯಾಗಿ ಒಂದೇಯಾಗಿ ಬಾಳಬೇಕೆಂಬ ಸಿದ್ಧಾಂತ ಬಸವಧರ್ಮದಲ್ಲಿ ಇದೆ. ವಿವಿಧ ವರ್ಣಗಳವರು ಧರಿಸುವ ಜನ್ನಿವಾರದಲ್ಲಿ ವಿವಿಧ ಹಂತಗಳಿವೆ. ಶಿವದಾರ ಧಾರಣೆಯಲ್ಲಿ ಈ ಯಾವ ಭೇದವಿಲ್ಲ, "ಅಂಗದ ಮೇಲೆ ಲಿಂಗ ಉಳ್ಳವರೆಲ್ಲ ಸಂಗಮ ನಾಥ" ಸ್ವರೂಪರು ಎಂಬ ಭಾವವಿದೆ. ಹೀಗಾಗಿ ತನ್ನ ಜನ್ಮ-ಜಾತಿಗಳಿಂದ ಬಂದ ಜನ್ನಿವಾರವನ್ನು ನಿರಾಕರಿಸಿದರೂ, ಜಾತಿಮತ ಪಂಥಗಳ ಕಟ್ಟುಗಳನ್ನು ಒಡೆದು ಎಲ್ಲ ರನ್ನೂ ಆಹ್ವಾನಿಸಬಲ್ಲ ಶಿವದಾರವನ್ನು ಬಸವಣ್ಣನವರು ಕೊಟ್ಟರು.

3. "ಜಾತಿ ವೈಷಮ್ಯಗಳನ್ನು ತೊಡೆಯಲು ಉದ್ದೇಶಿಸಿದರೂ ಹೊಸ ಜಾತಿ, ಉಪಜಾತಿಗಳ ಉದಯಕ್ಕೆ ಕಾರಣನಾದ."

ಇಂಥ ಕೆಲವು ಮಾತುಗಳು, ಲೇಖಕರಿಗೆ ಭಾರತದ ಸಮಾಜ ಪದ್ಧತಿಯ ಅರಿವಾಗಲೀ, ಜಾತಿಗಳು ಬೆಳೆದು ಬಂದ ಇತಿಹಾಸವಾಗಲೀ ತಿಳಿದಿಲ್ಲ ಎಂಬುದನ್ನು ಸ್ಪಷ್ಟೀಕರಿಸುತ್ತವೆ. ಬಸವಣ್ಣನವರು ಜಾತಿಯನ್ನಾಗಲೀ ಉಪಜಾತಿಯನ್ನಾಗಲೀ ಸೃಷ್ಟಿಸಲಿಲ್ಲ. ಜಾತಿ ಉಪಜಾತಿಗಳು ವರ್ಣಾಶ್ರಮ ಸಮಾಜ ವ್ಯವಸ್ಥೆಯ ವಿಷಫಲ. ಕಸುಬಿನ ಮೇಲೆ ಜಾತಿಯನ್ನು ನಿರ್ಧರಿಸುವುದು, ಜಾತಿಯ ಮೇಲೆ ಕಸುಬನ್ನು ನಿರ್ಧರಿಸುವುದು, ಯಾವುದಾದರೊಂದು ಜಾತಿಯಲ್ಲಿ ಹುಟ್ಟಿದ ಮಾತ್ರಕ್ಕೆ ಆ ಜಾತಿಯ ಗುಂಪಿನಲ್ಲಿ ಸೇರಿಸುವುದು; ಇದು ಶತಮಾನಗಳಿಂದಲೂ ಬೆಳೆದು ಬಂದಿದ್ದ ಸಮಾಜ ರಚನೆಯ ವ್ಯವಸ್ಥೆ. "ನೇಕಾರ" ಎಂಬುವವ ನೇಯ್ಗೆ ಕಾಯಕದವನು. ಅಂಥವನ ಹೊಟ್ಟೆಯಲ್ಲಿ ಹುಟ್ಟಿದವ ನೇಕಾರ ಜಾತಿಯವನು; ಮತ್ತೆ ಅದರಲ್ಲಿ ಪಟ್ಟದ ಸಾಲಿ, ದೇವಾಂಗ, ಕರಿಜಾಡ, ಬಿಳಿಜಾಡ ಇತ್ಯಾದಿ ಅವರ ನೇಯ್ಗೆ ವಿಧಾನದ ಮೇಲೆ ಬಂದ ಹೆಸರು. ಅವು ಉಪಜಾತಿಗಳು. ಈ ವ್ಯವಸ್ಥೆಗೆ ಬಸವಣ್ಣನವರು ಕಾರಣರಲ್ಲ. ಇದನ್ನು ಉಗ್ರವಾಗಿ ವಿರೋಧಿಸಿದರು. ಬ್ರಾಹ್ಮಣನ ಮಗ ಬ್ರಾಹ್ಮಣ, ಅಗಸನ ಮಗ ಅಗಸ ಎಂಬುದನ್ನು ಖಂಡಿಸಿ ಧರ್ಮಶಾಸ್ತ್ರಗಳನ್ನು ಅಧ್ಯಯನಿಸಿದವ ಬ್ರಾಹ್ಮಣ, ಬಟ್ಟೆ ತೊಳೆಯುವವ ಮಡಿವಾಳ, ನೇಯುವವ ನೇಕಾರ ಎಂದು ಘಂಟಾಘೋಷವಾಗಿ ಸಾರಿದರು. ಶತಶತಮಾನಗಳಿಂದಲೂ ಜನರ ಮತಿಯ ಕ್ಷೇತ್ರದಲ್ಲಿ ಬೇರು ಬಿಟ್ಟಿದ್ದ ನಂಬಿಕೆಗಳನ್ನು ಅಲುಗಿಸುವುದು ಸುಲಭದ ಮಾತಾಗಿರಲಿಲ್ಲ. ಬಸವಣ್ಣನವರು ಸಮಾನತೆಯ ಧರ್ಮವನ್ನು ಸಾರಿ ಅದರ ಹೆಬ್ಬಾಗಿಲು ತೆರೆದಾಗ ಬ್ರಾಹ್ಮಣನಿಂದ ಭಂಗಿಯವರೆಗೆ, ಹಾರುವನಿಂದ ಅಂತ್ಯಜನವರೆಗೆ ಎಲ್ಲರೂ ಒಳಗೆ ಪ್ರವೇಶಿಸಿದರು. ಹೀಗೆ ಪ್ರವೇಶಿಸಿದವರಲ್ಲಿ ಸಹಭೋಜನ, ಸಹಜೀವನ, ಅಂತರ್ಜಾತೀಯ ಮದುವೆ ಎಲ್ಲ ಅನುಮೋದಿಸಿದರು. ಜಾತಿಉಪಜಾತಿಗಳ ಕಟ್ಟು ಸಡಲಿ ಶರಣ ಸಮಾಜವೊಂದು ಬಸವ ತತ್ತ್ವದ ಆಧಾರದ ಮೇಲೆ ರೂಪುಗೊಳ್ಳತೊಡಗಿತು. ಅದಕ್ಕೆ ಅನುಭವ ಮಂಟಪವೇ ಪ್ರಯೋಗಶಾಲೆ

ಯಾಯಿತು. ಆದರೆ ಕಾಲಾನಂತರದಲ್ಲಿ, ಬಸವಣ್ಣನವರ ನಂತರ ಮತಾಂತರಗೊಂಡ ಕೆಲವು ಉಚ್ಚ ವರ್ಣೀಯರು ಮತ್ತೆ ತಮ್ಮ ಮೇಲರಿಮೆ ಸ್ಥಾಪಿಸುವ ಪ್ರಯತ್ನ ನಡೆದು, ಜಾತಿ ಉಪಜಾತಿಗಳು ಮತ್ತೆ ಕಿಸಿದುಕೊಳ್ಳತೊಡಗಿದವು. Divide and rule Policy (ಒಡೆದು ಆಳುವ ನೀತಿ)ಯನ್ನು ಎಂದೆಂದೂ ಬೆಳೆಸಿಕೊಂಡು ಬಂದಿದ್ದ ಕೆಲವರು ಮತ್ತೆ ಅದನ್ನು ಈ ಸಮಾಜದಲ್ಲಿಯೂ ಆರಂಭಿಸಿದರು.

ಜಾತಿ ಉಪಜಾತಿಗಳು ಬಸವ ಪೂರ್ವದ ವರ್ಣವ್ಯವಸ್ಥೆಯ ಬಳುವಳಿ. ವ್ಯವಸ್ಥೆಯ ವಿರುದ್ಧ ಬಸವಣ್ಣನವರು ಎಷ್ಟೇ ಹೋರಾಡಿದರೂ ಹಳೆಯ ಕೊಳೆಯನ್ನು ತೊಳೆಯಲು ಕಷ್ಟಸಾಧ್ಯವಾಯಿತು. ಒಬ್ಬ ಅತ್ಯುತ್ತಮ ಪ್ರತಿಭೆಯ ಇಂಜಿನಿಯರ್ ಇದ್ದಾನೆಂದು ಇಟ್ಟುಕೊಳ್ಳುವ. ಫ್ಯಾಕ್ಟರಿಯವರು ಅವನಿಗೆ ಅನೇಕ ಬಿಡಿಭಾಗಗಳನ್ನು ಕೊಟ್ಟು ಅವನ್ನು ಒಂದುಗೂಡಿಸಿ ಗಡಿಯಾರವನ್ನೋ, ಯಂತ್ರವನ್ನೋ, ಟೇಪ್ ರೆಕಾರ್ಡರನ್ನೋ ತಯಾರಿಸಲು ಹೇಳುತ್ತಾರೆ. ಅಲ್ಲಿ ಇಂಜಿನಿಯರ್ ಹೇಗೆ ಒಂದುಗೂಡಿಸಿದ್ದಾನೆಂಬುದು ಮುಖ್ಯ. ಒಂದುವೇಳೆ ಬಿಡಿಭಾಗಗಳು ಉತ್ಕೃಷ್ಟವಾಗಿರದಿದ್ದರೆ ಅವನು ಏನು ಮಾಡಲು ಸಾಧ್ಯ ? ಹಾಗೆಯೇ ಬಸವಣ್ಣನವರು ಸಂಘಟಿಸಬಯಸಿದ್ದ ಜಾತ್ಯತೀತ ಸಮಾಜಕ್ಕೆ ಬಳಸಿದ ಬಿಡಿಭಾಗಗಳು (Spare parts) ಬಂದುದು ಶತಶತಮಾನಗಳಿಂದ ಬಂದಿದ್ದ ಜಾತಿ ಉಪಜಾತಿಗಳಿಂದ. ಏನೆಲ್ಲ ಕಳಕಳಿ, ಕಲಾವಂತಿಕೆ, ಕೌಶಲ್ಯ ಇದ್ದರೂ ಕಚ್ಚಾಪದಾರ್ಥದ ಗುಣಮಟ್ಟದಿಂದಾಗಿ, ತಯಾರಿಸಿದ ವಸ್ತುವಿನ ಗುಣಮಟ್ಟ ಕಡಿಮೆಯಾಗುವುದು ಸ್ವಾಭಾವಿಕವಷ್ಟೆ !

ಕಚ್ಚಾಮಾಲು ತೀರಾ ಕಡಿಮೆ ಗುಣಮಟ್ಟದ್ದಾದರೂ ಯಂತ್ರಜ್ಞ, ತಂತ್ರಜ್ಞನ ಕೌಶಲ್ಯದಿಂದ ತಯಾರಿಸಿದ ವಸ್ತುವಿಗೆ ಸುಧಾರಿತ, ಸುಂದರ ರೂಪು ಬರುವಂತೆ, ಬಸವಣ್ಣನವರ ಸತತ ಪ್ರಯತ್ನದಿಂದ ಒಂದು ಪರಿಪೂರ್ಣ ಸಮಾಜ ರೂಪುಗೊಂಡಿತು. ಅರ್ಚಕನ ಉದ್ಯೋಗದಿಂದ ಹಿಡಿದು ಚಮ್ಮಾರನ ಉದ್ಯೋಗ ಮಾಡುವವರೆಗೆ ಮಡಿವಾಳ, ಕುರುಬ, ನೇಕಾರ; ಕ್ಷೌರಿಕ ಎಲ್ಲರೂ ಈ ಸಮಾಜದ ಅನುಯಾಯಿಗಳಲ್ಲುಂಟು. ಇಂಥದೊಂದು ಕ್ರಾಂತಿಕಾರಿ, ಸಮಗ್ರ ಸಮಾಜವನ್ನು ಭಾರತದ ಇನ್ನಾವ ಧರ್ಮ-ಸಮಾಜಗಳಲ್ಲೂ ಕಾಣಲು ಸಾಧ್ಯವಿಲ್ಲ. ಈ ಹೊತ್ತು ಲಿಂಗಾಯತ ಸಮಾಜದಲ್ಲಿ ಅನೇಕ ಜಾತಿ ಉಪಜಾತಿಗಳು (ಭಾರತದ ಜಾತಿ ವ್ಯವಸ್ಥೆಯ ವಿಷಫಲವಾಗಿ) ಇದ್ದಾವೆಂದೇ ಭಾವಿಸೋಣ. ಆದರೂ ಇಲ್ಲೊಂದು ವಿಶೇಷವಿದೆ. ಲಿಂಗಧಾರಿಗಳಾದ ಇವರೆಲ್ಲರಲ್ಲಿ ಪರಸ್ಪರ ಭೋಜನ ನಡೆಯುತ್ತದೆ, ವ್ಯವಹಾರ, ಬಳಕೆ ನಡೆಯುತ್ತವೆ. ಬೇರೆಯವರು ದೀಕ್ಷಾ ಸಂಸ್ಕಾರ ಪ್ರಸಂಗ ಬಂದಲ್ಲಿ ಮದುವೆಗಳೂ ನಡೆಯುತ್ತವೆ.

ಪಡೆದು ಸಮಾಜವನ್ನು ಪ್ರವೇಶಿಸಲು ಅಷ್ಟೊಂದು ಅಡ್ಡಿ ಆತಂಕಗಳಿಲ್ಲ; ಮಾತ್ರವಲ್ಲ ಲಿಂಗಾಯತ ಮಠಾಧೀಶರು (ಮುಖ್ಯವಾಗಿ ವಿರಕ್ತಮಠಾಧೀಶರು) ಎಲ್ಲ ಜಾತಿ ಮತ ಪಂಥಗಳ ಜನರಿಗೆ, ವಿದ್ಯಾರ್ಥಿಗಳಿಗೆ ಮಠಗಳಲ್ಲಿ ಪ್ರವೇಶ, ಆಶ್ರಯ, ವಿದ್ಯಾಭ್ಯಾಸ ನೀಡುವುದನ್ನು ಕಾಣುತ್ತೇವೆ. (ಅಯ್ಯ-ಭಕ್ತ) ಎಂಬ ಭೇದದ ಜಾಡ್ಯ ಇನ್ನೂ ಕೊಂಚಕೊಂಚ ಅಂಟಿದ್ದರೂ, ಅದನ್ನೂ ಕಳೆದುಕೊಳ್ಳುವ ಸಾಮಾಜಿಕ ಒತ್ತಡ ಬಂದಂತೆ ಕಡಿಮೆಯಾಗಿ, ಪ್ರಗತಿಪರ ವಿಚಾರಧಾರೆಯತ್ತ ಸಾಗುತ್ತಿದ್ದಾರೆ.) ಶೂದ್ರತ್ವ, ಅಸ್ಪೃಶ್ಯತೆಯ ಆಚರಣೆ ಲಿಂಗಾಯತ ಸಮಾಜದಲ್ಲಿ ಅಷ್ಟಾಗಿ ಇಲ್ಲ. ಒಂದು ವೇಳೆ ಬಸವಣ್ಣನವರು ಮತ್ತು ಅವರಿತ್ತ ಧರ್ಮ ಇತಿಹಾಸದಲ್ಲಿ ಆಗಾಗ ಎಲ್ಲ ಜಾತಿಗಳಿಂದಲೂ ಮತಾಂತರ ಮಾಡಿಕೊಳ್ಳದೆ ಹೋಗಿದ್ದಲ್ಲಿ ಇನ್ನೂ ಬಹಳಷ್ಟು ಜನ ಸಂಸ್ಕಾರ ರಹಿತ ರಾಗಿಯೇ ಇರಬೇಕಾಗುತ್ತಿತ್ತು. ಆದ್ದರಿಂದ ಜಾತ್ಯತೀತ, ಅತಿವರ್ಣಾಶ್ರಮ ಸಮಾಜ ವ್ಯವಸ್ಥೆಯ ಲಿಂಗಾಯತ ಧರ್ಮದ ಉಗಮವನ್ನು ಬಸವಣ್ಣನವರ ಕೊಡುಗೆ ಎನ್ನ ಬಹುದೇ ವಿನಾ, ಎಂದಿನಿಂದಲೋ ಬಂದ ಜಾತಿ ಉಪಜಾತಿಯ ವ್ಯವಸ್ಥೆಯನ್ನಲ್ಲ.

4. "ದುಡಿಮೆಗೆ ಪಾವಿತ್ರ್ಯದ ಕಲ್ಪನೆ ಒದಗಿಸಿದರೂ ದುಡಿಯದೆ ಡೊಳ್ಳು ಬೆಳೆಸುವ ಜಂಗಮ ವರ್ಗವನ್ನು ಪೋಷಿಸುತ್ತ ಬಂದ".

ಶ್ರೀ ಆರ್ಕೆ, ಮಣಿಪಾಲ ಇವರ ಲೇಖನದ ವೈಖರಿ ನೋಡಿದರೆ ಅವರು ಇತ್ತೀಚೆಗೆ ಪ್ರಕಟವಾದ ಸಾಹಿತ್ಯವನ್ನೇನೂ ನೋಡದೆ ತಾವೇ ತಿಳಿದುಕೊಂಡವರೆಂಬ ಭ್ರಾಂತಿಯ ಕೋಟೆಯಲ್ಲಿ ಸಿಕ್ಕಿಬಿದ್ದಂತೆ ತೋರುತ್ತದೆ. "ಜಂಗಮ ತತ್ತ್ವ" ಬಸವಣ್ಣನವರ ಕ್ರಾಂತಿಕಾರಿ ಬೌದ್ಧಿಕ ಕೊಡುಗೆ. "ಜಂಗಮರೆಂದರೆ ಒಂದು ಜಾತಿಯ ಗುಂಪು" ಎಂಬ ಮೂಢ ಕಲ್ಪನೆ ಕೆಲವು ಲಿಂಗಾಯತರಲ್ಲಿ; ಅವರ ಆಚರಣೆ ನೋಡಿ ತಪ್ಪು ತಿಳಿದುಕೊಂಡಿರುವ ಅನ್ಯಮತೀಯರಲ್ಲಿ, ಸಾಹಿತಿಗಳಲ್ಲಿ ತುಂಬಿ ತುಳುಕುತ್ತಿದೆ. ಓರ್ವ ಶಿಲ್ಪಿ ಸುಂದರ ಶಿಲಾಬಾಲಿಕೆಯೊಂದನ್ನು ಕಟೆದು ಇಟ್ಟಿರುವನೆಂದು ತಿಳಿಯೋಣ. ಆಗ ಯಾವನಾದರೊಬ್ಬ ವಿಗ್ರಹ ವಿರೋಧಿಯಾದ ಮುಸಲ್ಮಾನನೋ, ಅಥವಾ ಶಿಲ್ಪಿಯ ಮೇಲೆ ಮತ್ಸರಭಾವವುಳ್ಳ ಸಹೋದ್ಯೋಗಿಯೋ ಆ ಶಿಲಾಬಾಲಿಕೆಯ ಮೂಗನ್ನು ಒಡೆದು ವಿಕೃತ ಮಾಡಿದನೆಂದು ಇಟ್ಟುಕೊಳ್ಳೋಣ. ಆಗ ನಾವು 'ಅವನೆಂಥಾ ಮಹಾಶಿಲ್ಪಿ? ಮೂಗಿಲ್ಲದ ವಿಗ್ರಹವನ್ನು ಕಟೆದಿದ್ದಾನೆ' ಎಂದು ತಪ್ಪು ತಿಳಿದು ಅಪಪ್ರಚಾರ ಮಾಡಬಾರದು. ಆ ಮೂಗು ಹೋದುದು ಯಾವಾಗ? ಏಕೆ? ಯಾರಿಂದ? ಎಂಬುದನ್ನು ತಿಳಿದುಕೊಳ್ಳಲೆತ್ನಿಸಬೇಕು. ಅದೇ ರೀತಿ ವೈಚಾರಿಕ, ತಾತ್ತ್ವಿಕ ಹಿನ್ನೆಲೆಯುಳ್ಳ "ಜಂಗಮ" ತತ್ತ್ವವನ್ನು ಬಸವಣ್ಣನವರು ಕೊಟ್ಟರು. ಕಾಲಾನಂತರದಲ್ಲಿ, ತೀರಾ ಇತ್ತೀಚೆಗೆ ಅದೊಂದು ಜಾತಿಯ ವಿಕೃತ ಸ್ವರೂಪ ಪಡೆ

ಯಿತು. ಅದು ವಿಕೃತಗೊಳ್ಳಲಿಕ್ಕೆ ಬಸವ ಧರ್ಮದ ದ್ವೇಷಿಗಳು, ಸ್ವಾರ್ಥಸಾಧಕರು ಕಾರಣರೇ ವಿನಾ ಬಸವಣ್ಣನವರಲ್ಲ.

ಜಂಗಮ ವರ್ಗವೆಂದರೆ ಡೊಳ್ಳು ಬೆಳೆಸುವ ಸೋಮಾರಿಗಳ ಗುಂಪೆಂದು ಬಸವಣ್ಣನವರು ಎಲ್ಲೂ ಹೇಳಿಲ್ಲ.

1. ವ್ರತ ತಪ್ಪಲು ಸೈರಿಸಬಹುದು, ಕಾಯಕ ತಪ್ಪಲು ಸೈರಿಸಲಾಗದು
2. ಗುರುವಾದರೂ ಕಾಯಕದಿಂದ ಮುಕ್ತಿ
ಲಿಂಗವಾದರೂ ಕಾಯಕದಿಂದ ಮುಕ್ತಿ
ಜಂಗಮವಾದರೂ ಕಾಯಕದಿಂದ ಮುಕ್ತಿ
3. ಓಡಲಾಗದ ಮೃಗವು ಸೊಣಗಂಗೆ ಮಾಂಸವ ಕೊಡುವಂತೆ
ಮಾಡಲಾಗದು ಭಕ್ತ, ಕೊಳಲಾಗದು ಜಂಗಮ........
ತನುವುಕ್ಕಿ ಮನಉಕ್ಕಿ ಮಾಡಬೇಕು ಭಕ್ತನು
ಮಾಡಿಸಿಕೊಳ್ಳಬೇಕು ಜಂಗಮ, ಕೂಡಲ ಸಂಗಮದೇವಾ !
4. ಗುರೂಪದೇಶ ಮಂತ್ರವೈದ್ಯ, ಜಂಗಮೋಪದೇಶ ಶಸ್ತ್ರವೈದ್ಯ
ಹೀಗೆ ಎಲ್ಲರಿಗೂ ಕಾಯಕವನ್ನು ಒತ್ತಿಹೇಳಿದ್ದೇ ಅಲ್ಲದೆ, ಕಾಡುವವ ಬೇಡುವವ ಜಂಗಮನಲ್ಲ ಎಂದಿದ್ದಾರೆ. ಬಸವಣ್ಣನವರು ಕೊಟ್ಟ ಜಂಗಮ ತತ್ತ್ವ 8 ಅರ್ಥಗಳಿಂದ ಕೂಡಿದೆ. (ವಿವರಗಳಿಗೆ ಪದಪ್ರಯೋಗ ಕೋಶ, ಸಂ : ಡಾ|| ಎಸ್. ಆರ್. ಗುಂಜಾಳ್ ಪುಸ್ತಕದ ಮುನ್ನುಡಿ ನೋಡಿರಿ)

1. ಜನನ ಮರಣ ಗಮನ ಶೂನ್ಯ ಮಾಡಿಕೊಂಡವ.
2. ಪಟ್ಟಣಕ್ಕೆ ಪಂಚರಾತ್ರಿಯಂತೆ ಹಳ್ಳಿಗೆ ಏಕರಾತ್ರಿಯಂತೆ ಸಂಚರಿಸಿ ಧರ್ಮ ಪ್ರಚಾರ ಮಾಡುವ ಬೋಧಕ.
3. ಆಚಾರ-ಅರಿವು-ಅನುಭಾವ ಅಳವಟ್ಟು ಭಾವಲಿಂಗಾರಾಧನೆ ಮಾಡಬಲ್ಲ ಅನುಭಾವಿ.
4. ಜಂಗಮವೆಂದರೆ ಜೀವಂತ ವ್ಯಕ್ತಿಗಳ ಒಕ್ಕೂಟವಾದ ಸಮಾಜ.
5. ಪರಶಿವ-ಪರಾಶಕ್ತಿ ಎಂಬ ಅರ್ಥದಲ್ಲೂ ಲಿಂಗ-ಜಂಗಮ ಬಳಕೆಯಾಗುವ ಕಾರಣ, ಲಿಂಗವೆಂದರೆ cosmic soul ಎಂದೂ, ಜಂಗಮವೆಂದರೆ cosmic energy ಎಂದೂ ಅರ್ಥೈಸಬಹುದು.
6. ಸಮಸ್ತ ಜೀವಜಾಲಕ್ಕೆ ಜಂಗಮವೆಂದು ಬಸವಣ್ಣನವರು ಕರೆಯುತ್ತಾರೆ.

7. ಅರ್ಥಶಾಸ್ತ್ರ ದೃಷ್ಟಿಯಿಂದ ಸ್ಥಾವರವೆಂದರೆ ಹಣವೆಂತಲೂ ಜಂಗಮವೆಂದರೆ ದುಡಿತವೆಂತಲೂ ಅರ್ಥೈಸುತ್ತಾರೆ.

8. "ಉಂಬ ಜಂಗಮ ಬಂದರೆ ನಡೆ ನಡೆ ಎಂಬರು ಎಂಬಲ್ಲಿ ಹಸಿದ ಒಂದು ಚೈತನ್ಯ ಎಂದು ಅರ್ಥೈಸಬಹುದು.

ಸಮಾಜದಲ್ಲಿ ಸಂಚರಿಸುವ ತ್ಯಾಗಿ, ಯೋಗಿ, ಧರ್ಮ ಪ್ರಸಾರಕ, ಒಂದು ನೈತಿಕ ಶಕ್ತಿ ಜಂಗಮ ಎಂಬುದನ್ನು ನಾವು ಅರ್ಥಮಾಡಕೊಳ್ಳಬೇಕೇ ವಿನಾ ಪೌರಾಣಿಕ ಜನರು ಅರ್ಥೈಸಿದಂತೆ ಡೊಳ್ಳು ಬೆಳೆಸುವ, ಜಾತಿ ಜಂಗಮರು ಎಂದಲ್ಲ. ಅಧ್ಯಾತ್ಮ ದೃಷ್ಟಿಯಿಂದ ಇದೊಂದು ಸ್ಥಿತಿಯೇ ವಿನಾ ಜಾತಿಯಲ್ಲ.

ಬಸವಣ್ಣನವರ ಮಹಾಮನೆಯಲ್ಲಿ ಸಾಮೂಹಿಕ ಪ್ರಸಾದ ವ್ಯವಸ್ಥೆ ಇದ್ದಿತು. ಆದರ ಉದ್ದೇಶ ಸೋಮಾರಿಗಳನ್ನು ಬೆಳೆಸುವುದಾಗಿರಲಿಲ್ಲ.

1. ವಿಭಿನ್ನ ಜಾತಿಗಳಿಂದ ಮತಾಂತರಗೊಂಡ ಭಕ್ತರನ್ನು ಸಹಭೋಜನದ ಮುಖಾಂತರ ಒಟ್ಟುಗೂಡಿಸುವುದು ಪ್ರಮುಖ ಉದ್ದೇಶ. ವಿವಿಧ ಜಾತಿಗಳಿಂದ ಬಂದವರಲ್ಲಿ ಮೇಲರಿಮೆ ಕೀಳರಿಮೆ ಇರುವುದು ಸ್ವಾಭಾವಿಕ. ಇದನ್ನು ತೊರೆಯ ಬೇಕಾದರೆ ಪರಸ್ಪರ ಸಹಪಂಕ್ತಿ ಭೋಜನ ಅತ್ಯಾವಶ್ಯಕ.

2. ಅನೇಕ ಯಾತ್ರಿಕರು, ಸಂದರ್ಶಕರು, ಸದ್ಭಕ್ತರು ಭೂಕೈಲಾಸವೆನಿಸಿದ್ದ ಕಲ್ಯಾಣವನ್ನು ಕಾಣಲು, ಪ್ರತ್ಯಕ್ಷ ಪರದೈವವಾದ ಬಸವಣ್ಣನವರ ದರ್ಶನ ಆಶೀರ್ವಾದ ಪಡೆಯಲು, ಅನುಭವ ಮಂಟಪದಲ್ಲಿ ಭಾಗವಹಿಸಲು ಬರುತ್ತಿದ್ದುದುಂಟು. ಅಂಥವರಿಗೆಲ್ಲ ಮಹಾಮನೆಯೇ ದಾಸೋಹದ ವ್ಯವಸ್ಥೆ ಮಾಡಿತ್ತು.

3. ತಾನು ತನ್ನದು ಎಂಬುದನ್ನು ತೊರೆದು ತ್ಯಾಗಿಗಳು, ಧರ್ಮಪ್ರಸಾರಕರೂ ಆದ ಜಂಗಮರು ತಮ್ಮ ಕರ್ತವ್ಯ ಮುಗಿಸಿ ಬಂದು ಮಹಾಮನೆಯಲ್ಲಿ ಇದ್ದುಕೊಂಡು ಪ್ರಸಾದ ಸ್ವೀಕರಿಸುತ್ತಿರಲಿಕ್ಕೂ ಸಾಕು. ಈ ದೃಷ್ಟಿಯಿಂದ ಜಂಗಮರು ಸೋಮಾರಿಗಳಾಗದೆ, ತ್ಯಾಗಪೂರ್ಣರಾದ ಕ್ರಿಯಾಶೀಲರಾದ ವ್ಯಕ್ತಿಗಳು ಎಂದು ಹೇಳಬಹುದು.

ಯಾವಾಗಲೂ ನಾವು ಸೈದ್ಧಾಂತಿಕ ಚೌಕಟ್ಟನ್ನು ಮೊದಲು ಗುರುತಿಸಿಕೊಳ್ಳಬೇಕು. ಮನಸ್ಸಿಗೆ ಬಂದಂತೆ ಸಂತರನ್ನು ಅವಹೇಳನ ಮಾಡುವುದು ಬೌದ್ಧಿಕ ಪ್ರಾಮಾಣಿಕತೆಯಲ್ಲ.

5. ವೇದಶಾಸ್ತ್ರಗಳನ್ನು ಧಿಕ್ಕರಿಸಿದರೂ ತನ್ನ ವಚನಗಳಲ್ಲಿ ಉಪನಿಷತ್ತಿನ ವಾಕ್ಯ ಉದ್ಧರಿಸಿದ.

ಶ್ರೀ ಆರ್ಕೆ, ಮಣಿಪಾಲ ಅವರು ಬಸವಣ್ಣನವರನ್ನು ಕೊಂಚವೂ ಅರ್ಥ ಮಾಡಿಕೊಳ್ಳದ ವ್ಯಕ್ತಿಯೆಂದು, ಇಲ್ಲವೇ ಪೂರ್ವಾಗ್ರಹ ಪೀಡಿತ ದೃಷ್ಟಿಕೋನದ, ಉದ್ದೇಶಪೂರ್ವಕವಾಗಿಯೇ ಬೌದ್ಧಿಕ ಅಪ್ರಮಾಣಿಕತನ ತೋರಿಸುವ ವ್ಯಕ್ತಿಯೆಂದು ತಿಳಿಯಬಹುದು. ಬಸವಣ್ಣನವರು ಯಾವುದೇ ಶಾಸ್ತ್ರದ ದ್ವೇಷಿಯಲ್ಲ, ಪರಂಪರೆಯ ವಿರೋಧಿಯಲ್ಲ. ವೇದಗಳ ಕರ್ಮಕಾಂಡ, ಯಜ್ಞಯಾಗ ಅವರಿಗೆ ತೀವ್ರ ಜಿಗುಪ್ಸೆ ಯನ್ನುಂಟುಮಾಡಿದ್ದರೂ ಉಪನಿಷತ್ತು ಮನಸ್ಸಿಗೆ ಆಹ್ಲಾದವನ್ನುಂಟು ಮಾಡುವ ಸ್ಫೂರ್ತಿ ಕೇಂದ್ರಗಳಾಗಿದ್ದವು. ವೇದ, ಪುರಾಣ, ತರ್ಕ-ಈ ಎಲ್ಲವನ್ನೂ ಎಷ್ಟೋ ಬಾರಿ ಟೀಕಿಸಿದ ಬಸವಣ್ಣನವರು ಉಪನಿಷತ್ತುಗಳನ್ನು ಎಲ್ಲೆಲ್ಲಿಯೂ ಟೀಕಿಸಿಲ್ಲ. ಸ್ವತಃ ಉಪನಿಷತ್‌ಕಾರರೇ ವೇದಗಳ ಯಜ್ಞಯಾಗಾದಿಗಳನ್ನು ಟೀಕಿಸಿದ್ದನ್ನು ಕಾಣು ತ್ತೇವೆ. ಹೀಗಾಗಿ ಧೋರಣೆಯಲ್ಲಿ ಏಕ ತಾನತೆ ಕಂಡು ಬಂದ ಕಾರಣ ಉಪನಿಷತ್ ಕಾರರ ಮಾತುಗಳನ್ನು ಉಲ್ಲೇಖಿಸುವುದರಲ್ಲಿ ತಪ್ಪೇನಿದೆ? ಬಸವಣ್ಣನವರು ದಾರ್ಶನಿಕ ದುಂಬಿ. ತಮ್ಮ ಕಣ್ಣೆದುರಿಗಿದ್ದ ಪರಂಪರಾಗತ ಉತ್ಕೃಷ್ಟ ಮೌಲ್ಯಗಳ ವಿಚಾರ ಧಾರೆಗಳ ಮಕರಂದವನ್ನು ಧರ್ಮಶಾಸ್ತ್ರಗಳೆಂಬ ಪುಷ್ಪಗಳಿಂದ ಈಂಟಿ, ವಚನ ಸಾಹಿತ್ಯದ ಜೇಂಗೊಡದಲ್ಲಿ ಅನುಭಾವದ ಜೇನು ತುಂಬಿದವರು. ಮತಿಯು ಅನುಮೋದಿಸಿ ದುದನ್ನು ಪ್ರಾಮಾಣಿಕತೆಯಿಂದ, ನಿರ್ವಂಚನೆಯಿಂದ ಸ್ವೀಕರಿಸಿದವರು. ಇದು ಅವರ ಗುಣಗ್ರಾಹಕತೆಯನ್ನು, ಬೌದ್ಧಿಕ ಪ್ರಾಮಾಣಿಕತೆಯನ್ನು ಸ್ಪಷ್ಟೀಕರಿಸುತ್ತದೆ.

7. ಯಾವ ಜಾತಿಯವರೂ ಲಿಂಗದೀಕ್ಷೆ ಹೊಂದಿದ್ದರೆ 'ಅನುಭವ ಮಂಟಪ'ದ ಅನುಭಾವ ಗೋಷ್ಠಿಯಲ್ಲಿ ಪಾಲುಗೊಳ್ಳಬಹುದಾಗಿತ್ತು; ಅಂಥವರು ಪರಸ್ಪರ ಸಮಾನರಾಗುತ್ತಿದ್ದರು. ಆದರೆ ಜಾತಿವಿನಾಶ ಮಾಡುವ ರೀತಿ ಇದಲ್ಲ.

ಜಾತಿವಿನಾಶ ಮಾಡುವ ವಿಶೇಷ ಸೂತ್ರವೊಂದನ್ನು ಶ್ರೀ ಆರ್ಕೆಯವರು ಕಂಡು ಹಿಡಿದಂತೆ ತೋರುತ್ತದೆ. ಆದರೆ ಭಾರತದ ಇತಿಹಾಸ ದೃಷ್ಟಿಯಿಂದ ಬಸವಣ್ಣನವರದು ಅತ್ಯಂತ ಸೂಕ್ತ ವಿಧಾನ. ಮಹಾತ್ಮಾಜಿಯವರು ಧರ್ಮಸಂಸ್ಕಾರ ನೀಡದೆ ಅಸ್ಪೃಶ್ಯತೆ ಮಾತ್ರ ತೊಡೆಯಲೆಳಸಿದರು. ಈ ವಿಧಾನ ಡಾ|| ಅಂಬೇಡ್ಕರರಿಗೇ ಸಹ್ಯವಾಗಲಿಲ್ಲ. ಏಕೆಂದರೆ ಹಸಿದು ಅಲೆದಾಡುವ ಓರ್ವ ವ್ಯಕ್ತಿಗೆ "ಸಂತೃಪ್ತೆ" ಎಂದೋ, ಅನ್ನಪೂರ್ಣೆ ಎಂದೋ ಹೆಸರಿಟ್ಟ ಮಾತ್ರಕ್ಕೆ ಆಕೆಯ ಹಸಿವು ಹಿಂಗದು. ದಾರಿದ್ರ್ಯದಿಂದ ಬಳಲುವ ಓರ್ವಳಿಗೆ ಸಂಪತ್‌ಲಕ್ಷ್ಮಿ ಎಂದು ನಾಮಾಂತರ ಮಾಡಿದ ಮಾತ್ರಕ್ಕೆ ಆಕೆಯ ಬಡತನ ತೊಲಗದು ಎಂದು ಡಾ|| ಅಂಬೇಡ್ಕರರು ಅರಿತಿದ್ದರು. ಹಸಿದವರಿಗೆ ಅನ್ನಬೇಕಾದಂತೆ ಅಸ್ಪೃಶ್ಯರಿಗೆ ಬೇಕಾಗಿದ್ದುದು ಧರ್ಮ ಸಂಸ್ಕಾರ. ಅಂತೆಯೇ ಬೌದ್ಧ ಧರ್ಮದ ಮೊರೆಹೊಕ್ಕರು. ಧರ್ಮ ಸಂಸ್ಕಾರ ನೀಡದೆ ಸುಧಾರಿತ ಹೆಸರನ್ನು ನೀಡಿದ

ಬಾಪೂಜಿಯವರ ಪ್ರಯತ್ನವನ್ನವರು ಅನುಮೋದಿಸಲಿಲ್ಲ ಇದರಿಂದ ಹರಿಜನರ ಅವಶ್ಯಕತೆ ಏನೆಂಬುದು ನಮಗೆ ಸ್ಪಷ್ಟವಾಗುವುದಲ್ಲದೆ, ಬಸವಣ್ಣನವರು ಕೈಗೊಂಡುದು ಸೂಕ್ತವಿಧಾನ ಎಂದು ಮನದಟ್ಟಾಗುವುದು.

ಇನ್ನು ಜಾತಿವಿನಾಶ ಮಾಡುವ ಮತ್ತೊಂದು ವಿಧಾನವನ್ನು ಕೆಲವು ಆಧುನಿಕ ರಾಜಕಾರಣಿಗಳು ಕಂಡು ಹಿಡಿದಿದ್ದಾರೆ. ಅದೆಂದರೆ ಹಂದಿ ಮಾಂಸವನ್ನು ಉಗ್ರವಾಗಿ ತಿರಸ್ಕರಿಸುವ ಮುಸ್ಲಿಮರು ಹಂದಿಮಾಂಸವನ್ನು, ಗೋಮಾಂಸವನ್ನು ಉಗ್ರವಾಗಿ ತಿರಸ್ಕರಿಸುವ ಹಿಂದುಗಳು ಒಟ್ಟಾಗಿ ಕುಳಿತು ಎರಡೂ ಮಾಂಸ ತಿನ್ನುವುದು ! ಇಂಥ ಆಚರಣೆಗಳಿಂದ ಜಾತಿ ತೊಲಗದು ; ಮೇಲಿದ್ದವನನ್ನು ಕೆಳಗಿಳಿಸಿ ಸಮಾನತೆ ಉಂಟು ಮಾಡುವುದು ಒಂದು ಬಗೆ ; ಕೆಳಗಿದ್ದವನನ್ನು ಮೇಲೇರಿಸಿ ಸಮಾನತೆ ತರುವುದು ಇನ್ನೊಂದು ಬಗೆ. ಉತ್ತಮ ಆಚಾರ ವಿಚಾರ ಸಂಸ್ಕೃತಿ ಕಲಿಸಿ ಶರಣತ್ವಕ್ಕೆ ಏರಿಸಿ, ಜಾತಿ ವಿನಾಶ ಮಾಡುವ ಬಸವಣ್ಣನವರ ವಿಧಾನ ತುಂಬಾ ಅರ್ಥಗರ್ಭಿತ.

'ಸಮಾನತೆ' ಎಂದರೇನು ? ಯಾವುದಾದರೊಂದು ಸೌಲಭ್ಯವನ್ನು, ಹಕ್ಕನ್ನು ಜಾತಿ ಮತ ಅಂತಸ್ತು ಲಿಂಗ ಭೇದವಿಲ್ಲದೆ ಎಲ್ಲರಿಗೂ ಕೊಡುವ ಅವಕಾಶ. ಆ ಅವಕಾಶ ಕೊಟ್ಟರು, ಬಸವಣ್ಣನವರು. ಮಾರುಕಟ್ಟೆಯಲ್ಲಿರುವ ವಿಭಿನ್ನ ಜಾತಿಯ ತರಕಾರಿಗಳನ್ನು ತಂದು ಒಂದು ಪಾತ್ರೆಯಲ್ಲಿ ಹಾಕಿ ಉರಿಕೊಟ್ಟು ಪಾಕ ಮಾಡಿ, ಏಕ ರಸವಾದ ಸಾರನ್ನೋ ಪಲ್ಯವನ್ನೋ ಮಾಡುವಂತೆ, ಭಿನ ಭಿನ್ನ ಸಂಸ್ಕಾರ, ಮತ ಭಾವನೆಗಳಿಂದ ತುಂಬಿದ ಎಲ್ಲರನ್ನೂ ಅನುಭವ ಮಂಟಪದಲ್ಲಿ ಸಮಾವೇಶ ಮಾಡಿ, ಜ್ಞಾನ ಸಂಸ್ಕಾರದಿಂದ ಪಾಕಮಾಡಿ, ಜಾತ್ಯತೀತ ದೈವೀ ಸಮಾಜವನ್ನು ರಚಿಸುವ ದಿಶೆಯಲ್ಲಿ ಪ್ರಯತ್ನ ಮಾಡಿದರು, ಯಶಸ್ವಿಯಾದರು. ಹೀಗೆ ಧರ್ಮ ಸಂಸ್ಕಾರ ನೀಡಿ, ಒಂದು ಮಾಡುವ ಪ್ರಯತ್ನ ಮಾಡಿರದಿದ್ದರೆ ಬಸವಣ್ಣನವರು ತೋರಿದ್ದು ಮಾತಿನ ಮರುಕವಾಗುತ್ತಿತ್ತೇ ವಿನಾ ಕೃತಿಯ ಕರುಣೆ ಆಗುತ್ತಿರಲಿಲ್ಲ. ಅವರು ಮಾತಿನ ಮಲ್ಲರಾಗುತ್ತಿದ್ದರೇ ವಿನಾ ಕೃತಿ ವಿರರಲ್ಲ. ಆಧುನಿಕ ರಾಜಕಾರಣಿಗಳಂತೆ ತಾವು ಕೆಳವರ್ಗದವರ ಸಂಸ್ಕಾರದ ಮಟ್ಟಕ್ಕೆ ಇಳಿಯದೆ, ತಮ್ಮ ಮಟ್ಟಕ್ಕೆ ಎಲ್ಲರನ್ನೂ ಏರಿಸಿಕೊಂಡರು ಆ ಶತಮಾನದ ಆವಶ್ಯಕತೆ ದೇವರು ಧರ್ಮ. ಈಗಿನಂತೆ ಹಣವಾಗಲೀ ಅಧಿಕಾರವಾಗಲೀ ಅಂತಸ್ತಾಗಲೀ ಅಲ್ಲ. ಅಂಥ ದೇವರು ಧರ್ಮವನ್ನು ಒದಗಿಸಿ ಕೊಟ್ಟ ಬಸವಣ್ಣನವರ ಅಸಾಮಾನ್ಯ ಕೊಡುಗೆಯ ಮಹತಿಯನ್ನರಿತಿದ್ದರಿಂದಲೇ ಹರಳಯ್ಯನಂತಹವರು, ತಮ್ಮ ಮೈಚರ್ಮದಿಂದಲೇ ಚಮ್ಮಾವುಗೆ ಮಾಡಿಕೊಟ್ಟದ್ದು.

ಕಡೆಯದಾಗಿ ಸಮಾರೋಪ ಮಾಡುವ ಮುನ್ನ ನನ್ನದೊಂದು ಸಲಹೆ ; ವಿನಾ

ಕಾರಣ, ಜಾತಿದ್ವೇಷದಿಂದ, ಮತಾಂಧತೆಯಿಂದ intoxicate (ಮೈತುಂಬಿಕೊಂಡು) ಆಗಿ ಬಸವಣ್ಣನವರನ್ನು ತಪ್ಪು ತಪ್ಪಾಗಿ ಅರ್ಥ ಮಾಡುವ ಪ್ರಯತ್ನ ಕೆಲವು ವಿದ್ವಾಂಸರು ಬಿಡಲಿ ; ಎರಡನೆಯದಾಗಿ ಧರ್ಮ-ಧಾರ್ಮಿಕ ಮೌಲ್ಯಗಳಲ್ಲಿ ಸಂಪೂರ್ಣ ಆಸಕ್ತಿ ಕಳೆದುಕೊಂಡಿರುವ ಕೆಲವು ವಿಚಾರವಾದಿಗಳಿಗಂತೂ ಬಸವಣ್ಣನ ಧರ್ಮದ ತಳಹದಿಯ ಮೇಲೇ ರೂಪುಗೊಂಡ ಕ್ರಾಂತಿಯನ್ನು ಅರಿಯಲು ಅಸಾಧ್ಯವಾಗುವ ಕಾರಣ, ಅವರು ಸಹ ಬಸವಣ್ಣನವರನ್ನು ತೆಗಳುವ ಕೆಲಸ ಬಿಡಲಿ. ಅಂದಿನ ಹಿನ್ನೆಲೆ, ಸಮಾಜದ ಪರಿಸ್ಥಿತಿ, ಆವಶ್ಯಕತೆಗಳ ವಿವರವನ್ನರಿತು, ಬೌದ್ಧಿಕ ಪ್ರಾಮಾಣಿಕತೆ ಯಿಂದ ಅರಿಯಲು ಯತ್ನಿಸಲಿ. ಅಂದರೆ ಮಾತ್ರ ಇಂದಿನ ರಾಷ್ಟ್ರ ನಿರ್ಮಾಣದ ಪಥದಲ್ಲಿ ಬಸವಣ್ಣನವರ ತತ್ತ್ವ ಬೆಳಕು ನೀಡಿ, ನಮಗೂ ಕಾರ್ಯ ಪ್ರವೃತ್ತರಾಗಲು ಉತ್ಸಾಹ ಶ್ರದ್ಧೆ ಗುರಿಗಳನ್ನು ನೀಡುವುದು.

(ಶ್ರೀ ಆರ್ಕೆ, ಮಣಿಪಾಲ ಅವರ ಮೂಲ ಲೇಖನ ಕಾರಣಾಂತರಗಳಿಂದ ಲಭ್ಯ ವಾಗಿಲ್ಲ. ಪ್ರವಾಸದಲ್ಲಿದ್ದಾಗ ನಾನು ಈ ಉತ್ತರ ಪೂರ್ವಕ ಲೇಖನ ಬರೆದಿದ್ದೇನೆ. ಬಸವ ಸಮಿತಿಯವರ " ಬಸವ ಪಥ " ಪತ್ರಿಕೆಯ ಜೂನ್ 1981ರ ಸಂಪಾದಕೀಯ ದಲ್ಲಿ ಉಲ್ಲೇಖವಾಗಿರುವ ಟೀಕೆಗಳನ್ನು ಆಧರಿಸಿ ಉತ್ತರಿಸಿದ್ದೇನೆ.)

—ಜಗದ್ಗುರು ಮಾತೆ ಮಹಾದೇವಿ

★

★ ಶಸ್ತ್ರ-ಧನ-ಬಲಗಳಿಗಿಂತ, ರಾಷ್ಟ್ರಕ್ಕೆ ಹೆಚ್ಚಿನ ಬಲ ಬರುವುದು ಗೌರವಾನ್ವಿತ ಸಜ್ಜನರಿಂದ.

—ಫ್ರ್ಯಾಂಕ್ಲಿನ್

★ ವಿಪತ್ತು ನಿಜವಾದ ವಿಪತ್ತಲ್ಲ, ಸಂಪತ್ತು ನಿಜವಾದ ಸಂಪತ್ತಲ್ಲ. ದೇವರನ್ನು ಮರೆಯುವುದೇ ವಿಪತ್ತು, ಅವನನ್ನು ಸ್ಮರಿಸುವುದೇ ಸಂಪತ್ತು.

—ಸುಭಾಷಿತಾವಳಿ

★ ಅನೇಕ ದೃಷ್ಟಿಯಿಂದ ಪಶುಗಳು ಮಾನವನಿಗಿಂತ ಉತ್ತಮ. ಏಕೆಂದರೆ ಅವು ಮಾನವನಂತೆ ಪರಸ್ಪರ ವಿನಾಶಕೃತ್ಯದಲ್ಲಿ ತೊಡಗುವುದಿಲ್ಲ.


—ಪಿಂಚರ್

★ ಇತರರ ತಪ್ಪುಗಳನ್ನು ನೋಡಿ ಪಾಠಕಲಿ. ಅವೆಲ್ಲವುಗಳನ್ನು ನೀನೇ ಮಾಡಿ ಕಲಿಯುವಷ್ಟು ಆಯುಷ್ಯ ನಿನಗಿರಲಾರದು.

—ಲೋಥರ್

★ ಹೊಳೆಯನ್ನು ದಾಟುವ ತನಕ ಜನರು ಅಂಬಿಗನನ್ನು ಆಶ್ರಯಿಸುತ್ತಾರೆ. ದಾಟಿದ ಮೇಲೆ ಅವನಿಂದಾಗಲೀ, ದೋಣಿಯಿಂದಲಾಗಲೀ ಏನು ಪ್ರಯೋಜನ ?

—ಸುಭಾಷಿತ



ಲೇ: ಜಗದ್ಗುರು ಮಾತೆ ಮಹಾದೇವಿ.

ಭಾಗ-6

ಆ ಮಳಿಗೆಗೆ ಎಂಟು ಹತ್ತು ಬಾಗಿಲುಗಳು ; ಯಾವ ದ್ವಾರದಿಂದ ಹೊರ ಹೋದೆವೋ, ಬಂದೆವೋ ಅದು ತಿಳಿಯಲಿಲ್ಲ. ನಾವು ಒಳಹೋಗುವಾಗ ಒಂದು ಗ್ರಂಥ ಮಳಿಗೆ ಮೊದಲಿಗೆ ಸಿಕ್ಕದ್ದನ್ನು ನೆನೆಪಿಸಿಕೊಂಡು ಅಲ್ಲಿಗೆ ಬಂದು, ಸತ್ಯರವರ ಮನೆಗೆ ಫೋನ್ ಮಾಡಿದ್ದಾಯಿತು. ನಾನು ಎಲ್ಲಿಯೇ ಹೋದರೂ ಕೈಯಲ್ಲಿ ಅಡ್ರೆಸ್ ಪುಸ್ತಕ, ಫೋನ್‌ನಂಬರ್ ಒಯ್ಯುವ ಪರಿಪಾಠ ; ಹೀಗಾಗಿ ಫೋನ್ ಮಾಡಿ ಅವರ ಮಗನಿಗೆ ನಿಮ್ಮ ತಾಯಿಯ ಫೋನ್ ಬಂದರೆ ನಾವು ಇಂಥಲ್ಲಿ ಇರುವುದಾಗಿ ತಿಳಿಸಿ ಎಂದು ಹೇಳಿದೆವು. ಡಾ|| ವಿಶ್ವನಾಥ್ ಇನ್ನೂ ಮನೆಗೆ ಬಂದಿರಲಿಲ್ಲ. ಇನ್ನವರು ಸಿಕ್ಕದಿದ್ದರೆ ಬೇರೆ ಯಾರ ಮನೆಗಾದರೂ ಫೋನ್ ಮಾಡಿ ಬಂದು ಕರೆದೊಯ್ಯಲು ತಿಳಿಸೋಣ ಎಂದುಕೊಂಡೆವು. ಇಲ್ಲವೇ ಪೋಲೀಸ್ ಸಹಾಯ ಪಡೆದು ಮನೆ ಮುಟ್ಟೋಣ ಎಂದುಕೊಂಡೆವು. ಇಲ್ಲಿಗಾಗಲೇ ರಾತ್ರಿ ಒಂಭತ್ತು ಮುಕ್ಕಾಲು ; ಹತ್ತುಗಂಟೆಗೆ ಆ ಮಳಿಗೆ ಮುಚ್ಚಿಬಿಡುತ್ತದೆ.

ಟ್ಯಾಕ್ಸಿ ತೆಗೆದುಕೊಂಡು ನಾವೇ ಹೋಗಲು ಭಯ. ವಿದೇಶಿ ಪ್ರವಾಸಿಗರು ; ಮೇಲಾಗಿ ಹೆಣ್ಣುಮಕ್ಕಳು. ಕೈಯಲ್ಲಿ ಹಣ ಬೇರೆ ಮತ್ತು ಇತ್ತೀಚೆಗೆ ಭಾರತೀಯ ಸ್ತ್ರೀಯರ ಮೇಲೆ ಹಲ್ಲೆಗಳು ಬಹಳಷ್ಟು ನಡೆಯುತ್ತಿವೆ. ಸಾಮಾನ್ಯವಾಗಿ ಹಿಂದೂ ಸ್ತ್ರೀ ಒಂದು ಮಾಂಗಲ್ಯದ ಸರವನ್ನು, ಬೆಂಡೋಲೆಗಳನ್ನು ಹೊಂದಿರುತ್ತಾಳೆ ಎಂದು ಕಳ್ಳರಿಗೆ ನಂಬುಗೆ : ಅಲ್ಲದೆ ಮತ್ತೆ ಪ್ರತಿಭಟಿಸುವ ಶಕ್ತಿಯೂ ಇರದು ಎಂದು ಬಹಳಷ್ಟು ಹಲ್ಲೆಗಳು ಭಾರತೀಯ ಸ್ತ್ರೀ ಪುರುಷರ ಮೇಲೆ ಜರುಗುತ್ತವೆ.

ಇಂಥ ದೊಡ್ಡ ಮಳಿಗೆಗಳಲ್ಲಿ ಅನೌನ್ಸ್‌ಮೆಂಟ್ ಸೆಂಟರ್‌ಗಳಿರುತ್ತವೆ. ತಪ್ಪಿಸಿಕೊಂಡವರನ್ನು ಹುಡುಕಲು, ಕರೆಯಲು, ಭದ್ರತಾ ಸಿಬ್ಬಂದಿಯವರ ಸಹಾಯ

ದೊರಕಿಸಿಕೊಳ್ಳಲು ಇಂಥ ಪ್ರಸಾರ ಕೇಂದ್ರಗಳು ಉಪಯುಕ್ತವಾಗುತ್ತವೆ. ಅದನ್ನು ವಿಚಾರಿಸಿದರೆ ಆದಾಗಲೇ ಒಂಭತ್ತು ಗಂಟೆಗೆ ಮುಚ್ಚಿತ್ತು. ಮನಸ್ಸಿಗೆ ತುಂಬಾ ಕಳ ವಳವಾಗಿ, ಭಾರವಾದ ಕಾಲನ್ನೆಳೆದುಕೊಂಡು ಹೊರಗೆ ಬಂದಾಗ ಶ್ರೀಮತಿ ಸತ್ಯಾ ರವರು ನಾವು ಒಳಗೆ ಬಂದ ದ್ವಾರದ ಬಳಿ ನಿರಾಶರಾಗಿ, ಆತಂಕದಿಂದ ಕಾಯುತ್ತ ಕುಳಿತಿದ್ದರು. ಪರಸ್ಪರ ನೋಡುತ್ತಲೇ ಸಮಾಧಾನವಾಗಿ ವಿಪತ್ತಿನಿಂದ ಪಾರಾದದ್ದಕ್ಕೆ ಸಮಾಧಾನ ತಾಳಿ ಹೊರಟೆವು. "ಇಂಥ ಪ್ರಸಂಗಗಳಲ್ಲಿ ಯಾರದಾದರೂ ನೆರವಿನಿಂದ ಪೋಲಿಸ್ ಸಹಾಯ ಕೇಳಿದರೆ ಅವರು ಕಾರು ತೆಗೆದುಕೊಂಡು ಬಂದು. ತಲುಪ ಬೇಕಾದ ಸ್ಥಳಕ್ಕೆ ತಲುಪಿಸುತ್ತಾರೆ." ಎಂದು ಶ್ರೀಮತಿ ಸತ್ಯ ಹೇಳಿದರು. ಅಲ್ಲಿಂದ ಡಿಕ್ಸ್ ಹಿಲ್ಸ್‌ಗೆ ಕರೆತಂದು ಶ್ರೀಮತಿ ಜಯಾರವರ ಬಳಿ ಬಿಟ್ಟರು.

ಮರುದಿನ ಬೆಳಿಗ್ಗೆ ಗಡಿಯಾರದ ಮುಳ್ಳೇನೋ ಮುಂದೆ ಸಾಗಿದೆ. ಆದರೆ ಬೆಳಕು ಹರಿದಿಲ್ಲ. ಆಶ್ಚರ್ಯದಿಂದ ನೋಡಿದರೆ ಕಿಟಕಿಗೆಲ್ಲ ಇಬ್ಬನಿಯ ಹೊಗೆ. ಹೊರಗೆ ಧಾರಾಕಾರವಾಗಿ ಹಿಮ ಸುರಿತ. ಯಾರಾದರೂ ಮೇಲೆ ನಿಂತು ಮೊಸರನ್ನು ಸ್ಪ್ರೇ (ತುಂತುರುತುಂತುರಾಗಿ ಚಿಮುಕಿಸು) ಮಾಡುತ್ತಿದ್ದಾರೋ ಅಥವಾ ಹಸಿರು ತೊಟ್ಟಿಲ್ಲದ ಮಲ್ಲಿಗೆ ಹೂಗಳನ್ನು ಎರಚುತ್ತಿದ್ದಾರೋ ಎಂಬಂತೆ ಶುಭ್ರ ಬಿಳಿಯ ಹಿಮ ಸುರಿಯು ತ್ತಿದೆ. ಹಿಂದಿನ ಅಂಗಳದಲ್ಲೆಲ್ಲ ಬಿಳಿಯ ವೆಲ್‌ವೆಟ್‌ನಂತೆ ಹಾಸಲ್ಪಟ್ಟಿದೆ. ಮನೆಗಳ ಮೇಲ್ಛಾವಣಿಗೆ ಬಿಳಿಯ ಮುಸುಗು ಹೊದ್ದಿಸಲ್ಪಟ್ಟಿದೆ. ಹಸಿರು ಗಿಡಗಳೆಲ್ಲ, ಶೃಂಗರಿತ ನವವಧು ಪಾರದರ್ಶಕ ಪರದೆ ಹೊದ್ದಂತೆ ಹಿಮದ ಮುಸುಕು ಹೊದ್ದಿವೆ. ಗಿಡಗಳು ಹಿಮದ ಕಿರೀಟ ಇಟ್ಟುಕೊಂಡಿವೆ. ರಸ್ತೆಯ ಮೇಲೆ, ಹುಲ್ಲಿನ ಮೇಲೆ, ಎಲ್ಲೆಲ್ಲೂ ಹಿಮವೇ ಹಿಮ. ಹಿಮ ಸುರಿಯುವಾಗ ವಾತಾವರಣ ಉಷ್ಣವಾಗಿರುತ್ತದೆ. ಆದರೆ ಕಾಲಿಟ್ಟರೆ ನೆಲದಲ್ಲಿ ಕಾಲು ಹುಗಿದು, ಜಾರುತ್ತಿರುತ್ತದೆ. ಇಂಥ ರಸ್ತೆಯ ಮೇಲೆ ಕಾರು ಓಡಲೂ ಸಾಧ್ಯವಿಲ್ಲ; ಅದು ತುಂಬಾ ಜಾರುತ್ತಲಿರುತ್ತದೆ. ಹಿಮ ಸುರಿಯು ವಾಗ ಬೆಣ್ಣೆಯಂತೆ ಸುರಿಯುತ್ತದೆ. ಆದರೆ ವಾತಾವರಣ ಬಿಸಿ ಏರುತ್ತಿದ್ದಂತೆಯೇ ಕರಗಿ ಮಂಜು ಆದಾಗ ಗಾಜಿನಂತೆ ಜಾರ ತೊಡಗುತ್ತದೆ. ಇದು ತೀರಾ ಅಪಾಯಕಾರೀ. ಸ್ವಲ್ಪ ಹೊತ್ತಿನಲ್ಲೇ ಒಂದಡಿಗೂ ಮಿಕ್ಕಿ ಹಿಮಸುರಿತವಾಯಿತು. ಈಗ ಮೂರು ವರ್ಷಗಳ ಕೆಳಗೆ ಒಮ್ಮೆ ಅನಿರೀಕ್ಷಿತವಾಗಿ ಹಿಮ ಸುರಿತವಾದಾಗ ಕಾರುಗಳು ಮುಚ್ಚಿ ಹೋಗಿದ್ದವಂತೆ. ಮೂರು ದಿನಗಳ ಕಾಲ ಎಲ್ಲ ವ್ಯವಹಾರ ಸ್ಥಗಿತ. ಆಫೀಸುಗಳಲ್ಲಿದ್ದ ವರು ಅಲ್ಲಿಯೇ ! ಶಾಲೆಗಳಲ್ಲಿದ್ದವರು ಅಲ್ಲಿಯೇ ! ಹಿಮ ಸುರಿಯುತ್ತಲೇ ಇದ್ದರೆ ರಸ್ತೆ ಯನ್ನು ಸ್ವಚ್ಛ ಮಾಡುವುದು ಕಷ್ಟಕರ. ಹಿಮ ಸುರಿಯುವುದು ನಿಂತಾಗ ಒಂದು ಬುಲ್‌ಡೋಜರಿನಂತಹ ಯಂತ್ರದಿಂದ ರಸ್ತೆಯ ಮೇಲೆ ಬಿದ್ದ ಹಿಮವನ್ನು ಕೆತ್ತಿ ತೆಗೆಯುವರು. ಆದರೆ ನೆಲದ ಮೇಲೆ ಬಿದ್ದುದು ಕರಗಿ, ಕಚ್ಚಿಕೊಂಡಿರುತ್ತದೆ.

ಇದು ತೀರಾ ಅಪಾಯಕಾರಿ. ಅದನ್ನು ಸ್ವಚ್ಛಗೊಳಿಸಲು ಉಪ್ಪನ್ನು ಯಂತ್ರಗಳ ಮೂಲಕ ಚೆಲ್ಲುತ್ತಾರೆ. ಉಪ್ಪಿನ ಸಂಪರ್ಕದಿಂದ ಮಂಜು ಕರಗುತ್ತದೆ; ನೀರಾಗಿ ಹರಿದು ಹೋಗುತ್ತದೆ. ಎಂಥ ಶೀತಲ ಹವೆಯಲ್ಲೂ ಸಮುದ್ರದ ನೀರು ಹಿಮವಾಗುವುದಿಲ್ಲ ಎಂಬುದನ್ನರಿತ ವಿಜ್ಞಾನಿಗಳು, ಲವಣಾಂಶವೇ ಕಾರಣವಿರಬೇಕೆಂದೂಹಿಸಿ, ಉಪ್ಪಿನ ಸಹಾಯದಿಂದ ಹಿಮವನ್ನು ನೀರಾಗಿಸುವ ವಿಧಾನ ಬಳಕೆಗೆ ತಂದಿದ್ದಾರೆ. ಶೀತ ವಲಯದ ರಾಷ್ಟ್ರಗಳು ಈ ಹಿಮಪಾತದ ವಿರುದ್ಧ ಹೋರಾಡಲು ಕೋಟ್ಯಾಂತರ ಡಾಲರ್‌ಗಳನ್ನು ವ್ಯಯಿಸಬೇಕು. ಅಲ್ಲದೆ ಹಿಮಸುರಿತ ಮತ್ತು ಅದನ್ನು ಕರಗಿಸಲು ಹಾಕುವ ಉಪ್ಪಿನಿಂದ ರಸ್ತೆಗಳು ತೂತು ಬೀಳುವವು. ಇಷ್ಟೆಲ್ಲ ಎಡರುಗಳಿದ್ದರೂ ರಸ್ತೆಗಳು ಸಮ, ಅಚ್ಚುಕಟ್ಟು, ಮತ್ತು ಸ್ವಚ್ಛ. ಅವರು ವ್ಯಯಿಸುವ ಹಣದ ಕೊಂಚ ಭಾಗವಾದರೂ ನಮ್ಮ ದೇಶಕ್ಕೆ ಸಾಕು, ರಸ್ತೆಗಳನ್ನು ಚೆಂದವಾಗಿಡಲು. ಆದರೂ ನಮ್ಮ ರಸ್ತೆಗಳು ತಮ್ಮ ವೈಶಿಷ್ಟ್ಯದಿಂದ, ಗರ್ಭಿಣಿಯರು ಪ್ರಯಾಣಿಸಿದರೆ ದಿನ ತುಂಬುವ ಮೊದಲೇ ಹೆರಿಗೆ ಮಾಡಿಸಬಲ್ಲವು ; ಸಂಧಿವಾತದಿಂದ ಕೀಲು ಹಿಡಿದಿದ್ದರೆ ವಾಹನಗಳು ಕುಕ್ಕಿ ಕುಕ್ಕಿ ಓಡಿ, ಕೀಲುಗಳನ್ನು ಸಡಲಿಸಬಲ್ಲವು.

ಹಿಮದ ಆಚ್ಛಾದನೆಯಲ್ಲಿ ನಿಸರ್ಗ ಅಲಂಕೃತ ವಧುವಿನಂತೆ ಶೋಭಿಸುತ್ತದೆ. ಅಷ್ಟರಲ್ಲಿ ಮಂದ ಪ್ರಕಾಶದೊಡನೆ ಸೂರ್ಯ ಬಾನಿನಲ್ಲಿ ಕಾಣಿಸಿಕೊಂಡ. ಹಿಮ ಕರಗತೊಡಗಿತು. ಗಿಡಗಳ ಮೇಲೆ ಬಿದ್ದ ಹಿಮ ಕರಗಿ ಕರಗಿ ಸುರಿಯುವಾಗ, ಉಷ್ಣತೆಯಲ್ಲಿ ಏರಿಳಿತವಾದರೆ, ಕರಗಿದ ನೀರು ಹಾಗೆಯೇ ಗಟ್ಟಿಕೊಂಡು ಸ್ಫಟಿಕದ ಹರಳಿನಂತೆ ತೋರುವುದು. ಗಾಜಿನ ತೂಗು ದೀಪಗಳಂತೆ ಗಿಡಗಳ ಎಲೆಗಳಿಂದ ತೂಗುಬಿದ್ದಿರುವುದು. ಆಗ ಬಿಸಿಲು ಬಿದ್ದುಬಿಟ್ಟರಂತೂ ಅಪಾರ ಚೆಲುವಿಕೆ ಪುಟಿಯ ತೊಡಗುವುದು. ಪಾರದರ್ಶಕ ಗಾಜಿನ ಅರಮನೆಯ ಮೇಲೆ ಹೊಂಬಿಸಲು ಬಿದ್ದಂತೆ ನಯನ ಮನೋಹರವಾಗಿ ತೋರಿಬರುವುದು. ಹಿಮದ ಸುರಿತ ಕಂಡ ಮಕ್ಕಳು ಸಂತೋಷದಿಂದ ಸೂಕ್ತವಾಗಿ ಗ್ಲೋವುಗಳನ್ನು ಧರಿಸಿ, ಬೂಟುಗಳನ್ನು ಹಾಕಿಕೊಂಡು ಆಟವಾಡಲು ಅಂಗಳಕ್ಕಿಳಿಯುತ್ತಾರೆ. ಹಿಮವನ್ನು ಮುದ್ದೆ ಮಾಡುವುದು ಎಸೆದಾಡುವುದು ಮಾಡಿ ಖುಷಿ ಪಡುತ್ತಾರೆ, ಬೆಟ್ಟಗಳನ್ನು ಹಿಮವು ಮುಸುಕಿದಾಗ ಜಾರಲು ಹೋಗುತ್ತಾರೆ.

24-12-1980 ರಂದು ಡಾ|| ಲಿಂಗರಾಜ್‌ರವರ ಮನೆಗೆ ಆಹ್ವಾನ. ಡಾಕ್ಟರ್ ಲಿಂಗರಾಜ್‌ರವರು ನ್ಯೂಯಾರ್ಕ್ ವೀರಶೈವ ಸಮಾಜದ ಅಧ್ಯಕ್ಷರು. ದಾವಣಗೆರೆಯ ಡಾ|| ಆನಂದತೀರ್ಥರವರ ಸುಪುತ್ರರಾದ ಇವರು ಅತ್ಯಂತ ಮೃದು ಸ್ವಭಾವದ, ಅಷ್ಟೇ ತತ್ತ್ವನಿಷ್ಠುರರಾದ ವ್ಯಕ್ತಿ. ಒಂದು ಸಂಘವನ್ನು, ಸಮಾಜವನ್ನು ನಡೆಸಲು ಬೇಕಾದ ತಾಳ್ಮೆ, ಶ್ರದ್ಧೆ, ನಿಷ್ಠೆ ಅವರಲ್ಲಿವೆ. ಎಂಥದೇ ಪ್ರಸಂಗದಲ್ಲಿಯೂ ದುಡುಕದೆ,

ಎಲ್ಲರ ಮಾತಿಗೆ ಬೆಲೆಗೊಡುತ್ತ ಆದರೆ ಸತ್ಯವನ್ನು ಅನ್ಯರಿಗೆ ಮನಗಾಣಿಸಿಕೊಡುತ್ತ, ಎಲ್ಲರೊಡನೆ ಹೊಂದಿಕೊಂಡು ಹೋಗುವ ವ್ಯಕ್ತಿತ್ವ ಅವರದು. ಅಧಿಕಾರಕ್ಕಾಗಿ ಅಧಿಕಾರ ಬೇಡ, ಸೇವೆಗಾಗಿ ಅಧಿಕಾರ ಎಂದು ನಿಷ್ಠೆಯಿಂದ ಸಮಾಜವನ್ನು ಮುನ್ನಡೆಸುತ್ತಿದ್ದಾರೆ. ಹಿಂದೂ ತತ್ತ್ವವನ್ನು, ಬಸವ ಧರ್ಮವನ್ನು ತಿಳಿದುಕೊಳ್ಳುವ, ಅನ್ಯರಿಗೆ ತಿಳಿಸಿಕೊಡುವ ಕಾತುರ ಅವರದು, ಅದಕ್ಕಾಗಿ ಸರಿಯಾದ ಸಾಹಿತ್ಯ ಇಂಗ್ಲಿಷಿನಲ್ಲಿಲ್ಲ ಎಂಬ ಆತಂಕ. ನಾವು ಹೆಮ್ಮೆಯಿಂದ ಹೇಳಿಕೊಳ್ಳಲು ಇಂದು ಸಾಕಷ್ಟು ಪುಸ್ತಕ ಇಂಗ್ಲಿಷಿಗೆ ತರ್ಜುಮೆಯಾಗಿ ದೊರೆಯುವುದು ನಿಜವಿದ್ದರೂ, ಅವು ಕನ್ನಡ-ಇಂಗ್ಲೀಷ್ ಗ್ರಂಥಗಳೇ ವಿನಾ, ಇಂಗ್ಲಿಷ್ ಇಂಗ್ಲಿಷ್ ಅಲ್ಲ. ಪ್ರತಿಯೊಂದು ಭಾಷೆಗೂ ತನ್ನದೇ ಆದ ಸ್ವಂತಿಕೆ, ಸೌಂದರ್ಯ, ಮಾಧುರ್ಯ ಇರುತ್ತದೆ. ಮಾತೃಭಾಷೆಯ ಪ್ರಭಾವವನ್ನು ಮುದ್ರಿಸಿಕೊಂಡ ನಮ್ಮವರು ಇಂಗ್ಲಿಷ್ ಭಾಷೆಯಲ್ಲಿ ತರ್ಜುಮೆಮಾಡಿ ಸಾಹಿತ್ಯಕೊಟ್ಟರೆ, ಕನ್ನಡದ ಉಕ್ತಿಗಳು, ಗಾದೆಗಳು, ಉಪಮಾನ ಉಪಮೇಯ ಗೊತ್ತಿಲ್ಲದ, ಇಂಗ್ಲಿಷ್ ಮಾತ್ರ ಬಲ್ಲವರಿಗೆ ಅರ್ಥವಾಗುವುದು ಕಷ್ಟ. ಈ ಕೊರತೆ ಇನ್ನೂ ಏನೇನೂ ತುಂಬಿಲ್ಲ. ಇಂಗ್ಲಿಷ್ ಭಾಷೆಯಲ್ಲಿ ಸಾಹಿತ್ಯ ಇಲ್ಲಿ ಮುದ್ರಿತವಾಗುವುದಕ್ಕಿಂತ, ಆ ದೇಶದಲ್ಲೇ ಸಿದ್ಧವಾಗಿ, ಅಲ್ಲಿಯ ಭಾಷಾತಜ್ಞರಿಂದ ಪರಿಷ್ಕರಣಗೊಂಡು ಅಲ್ಲಿಯ ಪ್ರಕಾಶಕರಿಂದ ಬೆಳಕು ಕಾಣಬೇಕು. ಆ ಕೆಲಸ ಕೈಗೊಳ್ಳಿರಿ ಎಂದು ಡಾ|| ಲಿಂಗರಾಜು ಅವರಿಗೆ ನಾನೂ ಸೂಚಿಸಿದೆ. ಅದು ಕಠಿಣತಮ, ವೆಚ್ಚದಾಯಕ ಬಾಬ್ತು ಎಂದು ಅವರಿಗೆ ಗೊತ್ತಿದೆ. ನೋಡೋಣ ಅಂಥ ಕಾಲ ಎಂದು ಬರುವುದೊ?

ಡಾ|| ಲಿಂಗರಾಜು ಅವರ ಧರ್ಮಪತ್ನಿ ಶ್ರೀಮತಿ ಉಮಾದೇವಿ. ಅವರೂ ಅಷ್ಟೇ ಮೃದು ಸ್ವಭಾವದ, ಸೌಜನ್ಯ ಶೀಲ ವ್ಯಕ್ತಿ; ಎರಡು ಮಕ್ಕಳು ಬಿಂದು ಮತ್ತು ವಿನಯ. ಇವರಿಬ್ಬರೂ ಮತ್ತು ಅಪ್ಸರಾ-ನಯನ (ಜಯಾರವರ ಮಕ್ಕಳು) ನಮ್ಮ ಪ್ರೈಮರಿ ಮತ್ತು ನರ್ಸರಿ ಶಾಲೆಯ ಮಕ್ಕಳಿಗಾಗಿ ಅನೇಕ ವರ್ಣಮಯ ಪುಸ್ತಕಗಳನ್ನು ಕೊಡುಗೆಯಾಗಿ ಕೊಟ್ಟುಕಳುಹಿಸಿದ್ದಾರೆ. ಶ್ರೀಮತಿ ಜಯಾ ಮತ್ತು ಶ್ರೀಮತಿ ಸತ್ಯರವರು ಶಾಲೆಯ ಲೈಬ್ರರಿಗಾಗಿ ಅನೇಕ ಉತ್ತಮ ಪುಸ್ತಕಗಳನ್ನು ಕೊಡುಗೆಯಾಗಿ ಕೊಟ್ಟಿದ್ದಾರೆ ಡಾ|| ಲಿಂಗರಾಜು ಅವರು ಮತ್ತು ಅವರ ಮಿತ್ರ ಡಾ|| ಕುಂಬಾರರು ಉಭಯಂತರೂ ನ್ಯೂಯಾರ್ಕ್ ನಗರದ ವಿಶೇಷ ಸ್ಥಾನಗಳನ್ನು ತೋರಿಸಿದರು. ವಿಶ್ವರಾಷ್ಟ್ರ ಸಂಸ್ಥೆ (ಕಲ್ಯಾಣ ಕಿರಣದ ಮಾರ್ಚ್ ಸಂಚಿಕೆಯಲ್ಲಿ ವಿವರವು ಪ್ರಕಟವಾಗಿದೆ), ಅತ್ಯಂತ ಹೆಚ್ಚು ಎತ್ತರದ ಕಟ್ಟಡಗಳಾದ "ಟ್ವಿನ್ ಟವರ್ಸ್" ಮತ್ತು ಸಂಜೆಗೆ ರಾಕ್‌ಫೆಲ್ಲರ್ ವಿದ್ಯುತ್ ಬೆಳಗಿನಲ್ಲಿ ನೋಡಿದೆವು. ಜಗತ್ತಿನ ಕೆಲವೇ ಕೆಲವು ಶ್ರೀಮಂತರಲ್ಲಿ ರಾಕ್‌ಫೆಲ್ಲರ್ ಒಬ್ಬರು. ತಮ್ಮೊಂದು ಬೃಹತ್ ಭವನವನ್ನು ಸಾರ್ವಜನಿಕ ಪ್ರೇಕ್ಷಣೀಯ ಸ್ಥಳವಾಗಿ ಮಾಡಿದ್ದಾರೆ. ಕ್ರಿಸ್‌ಮಸ್ ಸಮಯದಲ್ಲಿ

ಅತ್ಯಂತ ದೊಡ್ಡದಾದ ಕ್ರಿಸ್‌ಮಸ್ ವೃಕ್ಷಕ್ಕೆ ಭವ್ಯವಾಗಿ ದೀಪಾಲಂಕಾರ ಮಾಡಿರುತ್ತಾರೆ. ಕೊಳದಂತಹ ಆವರಣದಲ್ಲಿ ನೆಲಕ್ಕೆ ಹಿಮಸವರಿ ಅದರಲ್ಲಿ ಜಾರಾಟ ಮಾಡುತ್ತಾರೆ. ವಿವಿಧಾಕಾರದಲ್ಲಿ ವೃಕ್ಷಗಳನ್ನು ಕತ್ತರಿಸಿ ಅಲಂಕರಿಸಿ ಬೆಳಕು ಹಚ್ಚಿರುವುದರಿಂದ ಸಂದರ್ಶಕರು, ವಿವಿಧ, ವೇಷ ಧರಿಸಿದ ಮಾನವಾಕೃತಿಗಳೊಡನೆ ಫೋಟೋ ತೆಗೆದುಕೊಳ್ಳುತ್ತಾರೆ. ರಾಕ್‌ಫೆಲ್ಲರ್ ಸೆಂಟರಿನ ಸುತ್ತಲೂ ಇರುವ ಬೃಹತ್ ಕಟ್ಟಡಗಳೂ, ಚರ್ಚ್‌ಗಳಿಗೆ ವಿದ್ಯುದಲಂಕಾರ ಮಾಡಿ ಸ್ವರ್ಗ ಭುವಿಗಿಳಿದಂತೆ ಮಾಡುತ್ತಾರೆ. ಇದೆಲ್ಲವನ್ನೂ ತೋರಿಸಿಕೊಂಡು "ಸಿಟಿ ಮ್ಯೂಸಿಕ್ ಹಾಲ್"ಗೆ ವರ್ಷವಿಡೀ ನಡೆಯುವ ಅಮೆರಿಕಾದ ಸಂಸ್ಕೃತಿ-ಜನಜೀವನ ಸಂಗೀತದ ಮೂಲಕ ಚಿತ್ರಿಸುವ ಸಂಗೀತ ಕಲಾ ಮಂದಿರಕ್ಕೆ ಕರೆತಂದರು. ವಿದೇಶಿ ಪ್ರವಾಸಿಗರು ಇದನ್ನು ನೋಡುವುದನ್ನು ಮರೆಯದಂತೆ, ಮರೆಯಲೂ ಬಾರದು. ಆದರೆ ಕ್ರಿಸ್‌ಮಸ್ ನಿಂದಾಗಿ ನಾಲ್ಕಾರು ದಿನ ಮೊದಲೇ ಟಿಕೆಟ್ ಮುಗಿದಿದ್ದವು. ನಿರಾಶರಾದೆವು. ಮಾತೃಭೂಮಿಗೆ ಮರಳಿ ಹೋಗುವ ಮುನ್ನ ನ್ಯೂಯಾರ್ಕಿಗೆ ಬರಲೇ ಬೇಕಷ್ಟೇ! ಆಗ ಖಂಡಿತಾ ನೋಡಲು ಸಾಧ್ಯ ಎಂಬ ಭರವಸೆ ಹೊತ್ತು ಮನೆಗೆ ಮರಳಿದೆವು.

ದಿ. 25-12-1980 ರಂದು ಕ್ರಿಸ್ತನ ಜನ್ಮದಿನೋತ್ಸವದ ನಿಮಿತ್ಯ ಸಾರ್ವತ್ರಿಕ. ರಜಾದಿನ. ತುಂಬಾ ವೈಭವದಿಂದ ಕ್ರಿಸ್‌ಮಸ್ ಅನ್ನು ಜನರು ಆಚರಿಸುತ್ತಾರೆ. ಮನೆಯ ಮುಂದೆಲ್ಲ ವಿದ್ಯುತ್ ನಕ್ಷತ್ರವನ್ನು ಮಾಡ್ಡಿ ಬಿಡುವುದರ ಜೊತೆಗೆ ಮನೆಯ ಹೊರಗೆ ಕ್ರಿಸ್ತ-ಮೇರಿ ಮುಂತಾದವರ ಜೀವನದ ವಿವಿಧ ಘಟನೆಗಳನ್ನು ಚಿತ್ರಿಸುವ ಗೊಂಬೆಗಳನ್ನು, ಮೂಕ ಚಿತ್ರಗಳನ್ನು ವಿದ್ಯುದಲಂಕಾರದೊಡನೆ ಪ್ರದರ್ಶಿಸುವುದುಂಟು. ಕ್ರಿಸ್ ಮಸ್ ಮರಗಳನ್ನು ಮನೆಯ ಒಳಗೆ ಇಟ್ಟು ತುಂಬಾ ಅಲಂಕಾರ ಮಾಡುವರು. ನಮ್ಮಲ್ಲಿ ಹಬ್ಬಗಳ ಕಾಲದಲ್ಲಿ ಬುಡಕಡಿದ ಬಾಳೆಯ ಕಂದನ್ನು ಮಾರುವಂತೆ, ಅಲ್ಲಿ ಪುಟ್ಟ ಪುಟ್ಟ ಕ್ರಿಸ್‌ಮಸ್ ವೃಕ್ಷ ಮಾರುವದುಂಟು

ವಾಷಿಂಗ್ಟನ್ನಿನಲ್ಲಿ ಸರ್ಕಾರವೇ ಬೃಹತ್ತಾಕಾರದ ಒಂದು ಗಿಡಕ್ಕೆ ವಿಶೇಷ ದೀಪಾಲಂಕಾರ ಮಾಡಿಸುತ್ತದೆ. ಅದರ ಸಂದರ್ಶನಕ್ಕೆ ಎಲ್ಲಿಲ್ಲಿಂದಲೋ ಜನರು ಬರುವುದುಂಟು. ಆದರೆ ಈ ಬಾರಿ ಮಾಡಿಸಿರಲಿಲ್ಲ. ಅಮೆರಿಕನ್ ರಾಯಭಾರಿ ಕಛೇರಿಯ ಸಿಬ್ಬಂದಿ ವರ್ಗದವರು ಇರಾನಿನಲ್ಲಿ ಒತ್ತೆಯಾಳುಗಳಾಗಿದ್ದ ಕಾರಣ, ಇಡೀ ರಾಷ್ಟ್ರವೇ ಆ ದುರ್ದೈವಿಗಳ ದುಃಖದಲ್ಲಿ ಭಾಗಿಯಾಗಲುದ್ದೇಶಿಸಿದ್ದ ಕಾರಣ ಕ್ರಿಸ್ ಮಸ್ ಆಚರಣೆಗೆ ಸರ್ಕಾರ ಆದ್ಯತೆ ನೀಡಲಿಲ್ಲ, ಜನರು ಮಾತ್ರ ವೈಯಕ್ತಿಕವಾಗಿ ಆಚರಿಸಿಕೊಂಡರು.

ಅಂದು ನಾನು ಶ್ರೀಮತಿ ಪ್ರಭಾ ಮತ್ತು ಡಾ॥ ಪಾಟೀಲ್‌ರವರ ಮನೆಯ ಆಮಂತ್ರಣ ಸ್ವೀಕರಿಸಬೇಕಿತ್ತು. ನ್ಯೂಯಾರ್ಕ್ ನಗರದ ಇತಿಹಾಸದಲ್ಲಿ ಅದು ಅತ್ಯಂತ ಚಳಿಯ ದಿನವಂತೆ! ಎಷ್ಟು ಹೀಟರ್ಸ್ ಹಚ್ಚಿದರೂ ನಡುಗುವಂತಾಗಿತ್ತು. ಡಾ॥ ಪಾಟೀಲ್ ತುಂಬಾ ಧರ್ಮಾಭಿಮಾನಿಗಳು, ಆಸಕ್ತರು. ಅವರ ಮಕ್ಕಳು ಅಲ್ಲೇ ಹುಟ್ಟಿ ಬೆಳೆದು ಕನ್ನಡ ಅಷ್ಟಾಗಿ ಬರದವರು. "ಓಂ ಗುರು ಬಸವ ಪ್ರಭು" ಎಂಬ ಮಂಗಲ ಗೀತೆಯನ್ನು ಸುಶ್ರಾವ್ಯವಾಗಿ ಹಾಡಲು ಕಲಿತಿದ್ದೇ ಅಲ್ಲದೆ, ಶಿವರಾತ್ರಿಯಂದು ಹಾಡಿ, ಬಸವಣ್ಣನವರ ಪಾತ್ರಧಾರಣೆ ಮಾಡಿ ತೋರಿಸಿದರು. 26-12-1981 ರಂದು ಶ್ರೀಮತಿ ಮಹಾದೇವಿ ಮತ್ತು ಡಾ॥ ಕುಂಬಾರ್‌ರವರ ಮನೆಯ ಆತಿಥ್ಯ. ದಿನಾಂಕ 28-12-1980ರಂದು ಈಸ್ಟರ್ನ್ ಏರ್‌ಲೈನ್ಸ್‌ನಲ್ಲಿ ನ್ಯೂಯಾರ್ಕಿನಿಂದ ವಾಷಿಂಗ್ಟನ್ನಿಗೆ ಹಾರಿದ್ದಾಯಿತು. ಆ ದಿನ ರಿಯಾಯಿತಿ ದರದಲ್ಲಿ ಸೀಟು ದೊರೆತವು. ನಮ್ಮಲ್ಲಿ ಬಸ್ಸುಗಳು ಹೋಗುವುದಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಮತ್ತು ಸುಲಭವಾಗಿ ವಿಮಾನಗಳು ಹಾರುತ್ತವೆ. ವಿಮಾನಯಾನವು ವೈಯಕ್ತಿಕ ಒಡೆತನಕ್ಕೆ ಸೇರಿದೆ. ಹನ್ನೆರಡು ಗಂಟೆಗೆ ಒಂದು ಪ್ಲೇನ್ ಹೊರಡಬೇಕೆಂದಿದೆ ಎಂದು ಭಾವಿಸೋಣ. ಆಗ ಹನ್ನೊಂದು ಗಂಟೆಗೆ ಟಿಕೆಟ್ ಕೌಂಟರಿಗೆ ಜನರು ಬರುವರೆಂದು ಇಟ್ಟುಕೊಳ್ಳೋಣ. ವಿಮಾನದಲ್ಲಿದ್ದ ಸೀಟುಗಳೆಲ್ಲ ಭರ್ತಿಯಾಗಿ ನಾಲ್ಕಾರು ಜನ ಹೆಚ್ಚಾದರೆಂದು ತಿಳಿಯೋಣ. ಆಗ ಏರ್‌ಲೈನ್ಸ್‌ನವರು ಜನರನ್ನು ವಾಪಸ್ಸು ಕಳಿಸರು ಅಥವಾ ಬೇರೊಂದು ವಿಮಾನದಲ್ಲಿ ಹೋಗಲು ನಿರ್ದೇಶಿಸರು. ಆ ನಾಲ್ಕಾರು ಜನರಿಗಾಗಿ ಸ್ವತಂತ್ರವಾದ ಒಂದು ವಿಮಾನವನ್ನೇ ಮತ್ತೆ ಹೊರಡಿಸುವರು. ನಮ್ಮಲ್ಲಿ ತುರ್ತಾಗಿ ಒಂದು ಬಸ್ಸು ಸಹ ಏರ್ಪಡಿಸಲಾರರು ಎಂಬುದು ವಿಶೇಷ ವಿಷಯವೇನಲ್ಲ. ವಾಷಿಂಗ್ಟನ್‌ನಲ್ಲಿ ಇರುವ ಕಾಲದಲ್ಲಿಯೇ ಒಂದು ಇನ್ಶೂರೆನ್ಸನ್ನು ಡಾ॥ ಕೋರಿಯವರು ಮಾಡಿಸಿದರು. ನಾನು ಇನ್ನು ಮುಂದೆ ಸುದೀರ್ಘವಾದ, ಸತತವಾದ ಪ್ರಯಾಣ ಕೈಗೊಳ್ಳಬೇಕಾಗಿತ್ತು. ಅಕಸ್ಮಾತ್ ಏನಾದರೂ ಅವಗಢ ಸಂಭವಿಸಿದರೆ ಆ ವೆಚ್ಚವನ್ನು ಸ್ಪಾನ್ಸರ್ ಮಾಡಿದವರು ಹೊರಬೇಕಾಗುತ್ತದೆ. ಇನ್ಶೂರೆನ್ಸ್ ಮಾಡಿದರೆ ಆ ವೆಚ್ಚವನ್ನು ಜೀವ ವಿಮಾ ಸಂಸ್ಥೆಯೇ ಭರಿಸುವುದು. ಅಮೆರಿಕಾದಲ್ಲಿ ವೈದ್ಯಕೀಯ ಚಿಕಿತ್ಸೆ ತೀರಾ ತುಟ್ಟಿ. ಒಂದು ಬಹು ದೊಡ್ಡ ವ್ಯಾಪಾರ. ಅಲ್ಲಿ ಒಂದು ಸ್ವಾಭಾವಿಕವಾದ ಹೆರಿಗೆಗೆ ಖರ್ಚಾಗುವ ಮೊತ್ತದಲ್ಲಿ ಹೆಂಗೆಳೆಯರು ಅಲ್ಲಿಂದ ಇಲ್ಲಿಗೆ ಬಂದು ಹೋಗುವ ಮತ್ತು ನರ್ಸಿಂಗ್ ಹೋಮ್‌ನ ವೆಚ್ಚವನ್ನು ನೋಡಿಕೊಂಡು, ಇನ್ನಷ್ಟು ಮಿಗಿಸಬಹುದು. ಈ ಕಾರಣಕ್ಕೆ ಮತ್ತು ತಾಯಿತಂದೆಯರ ವಾತ್ಸಲ್ಯ-ಆರೈಕೆ ಸಿಕ್ಕುವ ಕಾರಣ ಇಲ್ಲಿಗೇ ಬರಲು ಇಚ್ಛಿಸುವರು. (ಆದರೆ ಮಕ್ಕಳು ಅಲ್ಲಿ ಜನ್ಮಿಸಿದರೆ ಅಲ್ಲಿಯ ಪೌರತ್ವ ಸಿಕ್ಕುವುದು ಸುಲಭವೆಂದು ಅಲ್ಲಿ ಹೆರಲೂ ಆದ್ಯತೆ ನೀಡುವರು.) ಎಲ್ಲಕ್ಕೂ

ಇನ್ಸೂರ್ ಮಾಡಿಸಿರುವರೆಂದು ಚಿಕಿತ್ಸೆ ಮಾಡಿಸಿಕೊಳ್ಳಲು ಧೈರ್ಯ ಮಾಡುವರು. ಚಿಕಿತ್ಸೆ ಮಾತ್ರ ತುಂಬಾ ಸಮರ್ಪಕವಾಗಿ ನಡೆಯುವುದು.

31–12–1980 ರಂದು ನಾನು ವಾಷಿಂಗ್ಟನ್ನಿನ ಸುಪ್ರಸಿದ್ಧ National Gallery of Art (ರಾಷ್ಟ್ರೀಯ ಕಲಾಪ್ರದರ್ಶನ ಮಂದಿರ) ಅನ್ನು ನೋಡಿದೆ. ಡಾ|| ಗಂಗಾಧರ ಕೋರಿಯವರು ಕೆಲಸ ಮಾಡುವುದು ವಾಷಿಂಗ್ಟನ್ ಮಧ್ಯದ ಸರ್ಕಾರಿ ಕಛೇರಿಯಲ್ಲೇ. ಇಲ್ಲಿ ನಗರಗಳ ಮಧ್ಯದಲ್ಲಿ ಜಾಗವು ವಿಪರೀತ ತುಟ್ಟಿ. ಅಲ್ಲದೆ ವಾಸಕ್ಕೆ ಜನರು ಇಷ್ಟಪಡರು. ವಾಹನಗಳ ಗದ್ದಲ, ಎತ್ತರದ ಕಟ್ಟಡಗಳು ಮುಂತಾದುವನ್ನು ತೊರೆದು ನಗರಗಳ ಹೊರವಲಯಗಳಲ್ಲಿ, ಪ್ರಶಾಂತ ಬಡಾವಣೆಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸಲು ಇಚ್ಛಿಸುವರು. ಹೀಗಾಗಿ ಕೆಲಸ ಮಾಡುವುದು ವಾಷಿಂಗ್ಟನ್ ನಗರದಲ್ಲಿ ಆದರೂ ಡಾ|| ಕೋರಿಯವರು ವರ್ಜಿನಿಯ ರಾಜ್ಯಕ್ಕೆ ಸಂಬಂಧಿಸಿದ ಬರ್ಕ್‌ಟೌನ್‌ನಲ್ಲಿದ್ದು, ದಿನವೂ ಕಾರ್ಯಾಲಯಕ್ಕೆ ಪ್ರಯಾಣ ಮಾಡುತ್ತಾರೆ. ಬೆಳಗ್ಗೆ ಪೂಜೆ-ಪ್ರಸಾದ ಮುಗಿಸಿ ನಾವು ಸಿದ್ಧವಿದ್ದರೆ ಡಾ|| ಕೋರಿಯವರು ನಮ್ಮನ್ನು ಕರೆತಂದು ಮ್ಯುಸಿಯಮ್‌ಗಳ ಬಳಿ ಬಿಡುವರು. ನಾವು ನೋಡಿ ಮುಗಿಸುವ ವೇಳೆಗೆ ಅಂದರೆ 5 ಗಂಟೆಯ ಸುಮಾರಿಗೆ ಮರಳಿ ಕರೆದುಕೊಂಡು ಹೋಗುತ್ತಿದ್ದರು.

ಈ ರಾಷ್ಟ್ರೀಯ ಕಲಾ ಪ್ರದರ್ಶನಾಲಯ ಅಮೇರಿಕಾ ಸಂಯುಕ್ತ ಸಂಸ್ಥಾನದ ಸಮಸ್ತ ಜನರಿಗೆ ಸೇರಿದ್ದೆಂದು ಘೋಷಿಸಿಕೊಂಡ ಅತ್ಯಪೂರ್ವ ಕಲಾಕಾಶಿ ಒಂದು ವಿಶ್ವಸ್ಥ ಸಂಸ್ಥೆಯಿಂದ ನಡೆಯುವ ಇದು ನಾಲ್ವರು ಸರ್ಕಾರದ ಪ್ರತಿನಿಧಿಗಳು ಮತ್ತು 5 ಗಣ್ಯರನ್ನು ಹೊಂದಿರುತ್ತದೆ. ಈ ವಿಶ್ವಸ್ಥ ಮಂಡಳಿಯ ಮುಖ್ಯಸ್ಥ ರಾಷ್ಟ್ರದ ಪರಮೋಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶ ಈ ಸಂಸ್ಥೆಯು ಅಮೇರಿಕಾ ಮತ್ತು ಯೂರೋಪಿನ ಪರಂಪರೆಯಲ್ಲಿ ನಿರ್ಮಾಣವಾದ ಸುಂದರ ವರ್ಣಚಿತ್ರ, ಶಿಲ್ಪ, ಕಲಾಕೃತಿಗಳನ್ನು ಸಂಗ್ರಹಿಸುತ್ತದೆ. ಸಾರ್ವಜನಿಕರ ದೇಣಿಗೆ ಮತ್ತು ಕಲಾಕೃತಿಗಳ ಕೊಡುಗೆಗಳ ಬಲದಿಂದಲೇ ಅಲ್ಲದೆ ಕೇಂದ್ರ ಸರ್ಕಾರದ ಧನ ಸಹಾಯದಿಂದಲೂ ನಡೆಯುತ್ತದೆ.

1920 ರ ದಶಕಗಳಲ್ಲಿ ಎ. ಡಬ್ಲ್ಯು. ಮೆಲ್ಲನ್ ಶೈಕ್ಷಣಿಕ ದತ್ತಿ ಸಂಸ್ಥೆಯ ವತಿಯಿಂದ ಶ್ರೀ ಮೆಲ್ಲನ್ನರು ವ್ಯಾಪಕ ಸಂಗ್ರಹದಲ್ಲಿ ಆಸಕ್ತರಾದರು. 1937 ರಲ್ಲಿ ಅವರು ತೀರಿಕೊಂಡಾಗ ಅವರ ಬೃಹತ್ ಸಂಗ್ರಹ ರಾಷ್ಟ್ರಕ್ಕೆ ಸಮರ್ಪಿಸಲ್ಪಟ್ಟಿತು. 1941 ರಲ್ಲಿ ರಾಷ್ಟ್ರಾಧ್ಯಕ್ಷ ರೂಸ್‌ವೆಲ್ಟರು ರಾಷ್ಟ್ರದ ಪ್ರತಿನಿಧಿಯಾಗಿ ಸ್ವೀಕರಿಸಿದರು. ಈ ಬೃಹತ್ ಭವನದ ನಿರ್ಮಾಣಕ್ಕೆ ರೂಪುರೇಷೆ ಹಾಕಿದವರು ಜಾನ್ ರಸೆಲ್

ಪೋಪ್‌ರವರು (ಇವರೇ ಸುಪ್ರಸಿದ್ಧ ಜೆಫರ್‌ಸನ್ ಸ್ಮಾರಕಕ್ಕೂ ನಕ್ಷೆ ರೂಪಿಸಿದವರು). ಜಗತ್ತಿನ ಅನೇಕ ಬೃಹತ್ ಅಮೃತ್ ಶಿಲಾಭವನಗಳಲ್ಲಿ ಇದೂ ಸಹ ಅತ್ಯಂತ ಪ್ರಮುಖವಾದ ಕಟ್ಟಡ. ಸುಮಾರು 780 ಅಡಿ ಉದ್ದವಿರುವ ಈ ಕಟ್ಟಡದ ಹೊರಮೈ ಗುಲಾಬಿ ಮಿಶ್ರಿತ ಬಿಳಿಯ ಟೆನಿಸ್ಸಿ ಅಮೃತ ಶಿಲೆಯಿಂದಾದುದು. ಇಲ್ಲಿಯ ಬೃಹದಾಕೃತಿಯ ಕಂಭಗಳಂತೂ ಅತ್ಯಂತ ಭವ್ಯ. ಇಡೀ ಭವನವೇ ಹವಾ ನಿಯಂತ್ರಿತವಾಗಿರುವುದು ಮಾತ್ರವಲ್ಲ, ಬದಲಾವಣೆ ಹೊಂದುವ ಹವಾಮಾನದಿಂದ ಕಲಾಕೃತಿಗಳು ಕೆಡದಂತೆ ಉಷ್ಣತೆಯನ್ನು ನಿಯಂತ್ರಿಸುವುದು.

ಮೂಲಭವನವು ಸಾಕಾಗದಿದ್ದ ಕಾರಣ ಇನ್ನೊಂದು ನೂತನ ಭವನಕ್ಕೆ ಪ್ರದರ್ಶನಾಲಯವನ್ನು ವಿಸ್ತರಿಸಲಾಗಿದೆ. ಈ ನೂತನ ಭವನಕ್ಕೂ ಧನ ಸಹಾಯ ಮಾಡಿದವರು ಮೆಲ್ಲನ್ ಸಂತತಿಯವರೇ ಆದ ಪಾಲ್ ಮೆಲನ್ನರು. ರಾಷ್ಟ್ರೀಯ ಕಲಾ ಸಂಗ್ರಹಾಲಯವು ಇಟ್ಯಾಲಿಯನ್, ವೆನಿಷಿಯನ್, ಜರ್ಮನ್, ಡಚ್, ಸ್ಪಾನಿಷ್, ಫ್ರೆಂಚ್, ಬ್ರಿಟಿಷ್, ಮತ್ತು ಅಮೆರಿಕನ್ ಕಲಾಕೃತಿಗಳನ್ನು ಹೊಂದಿದೆ. ಬ್ರಿಟಿಷ್, ಫ್ರೆಂಚ್ ಇತ್ಯಾದಿ ಪಾಶ್ಚಿಮಾತ್ಯ ಶೈಲಿಯ ಕಲಾಕೃತಿಗಳಲ್ಲಿ, ಕಣ್ಣುಗಳಲ್ಲಿ ಜೀವಂತಿಕೆಯನ್ನು ತುಂಬಿರುವುದನ್ನು ಕಾಣುತ್ತೇವೆ. ನಮ್ಮಲ್ಲಿ ಪೌರಾಣಿಕ ದೇವ ದೇವತೆಯರ ಚಿತ್ರಗಳನ್ನು ಕಂಡಾಗ ಎಲ್ಲಕ್ಕೂ ಒಂದೇ ಮುಖ (ಸಾಮಾನ್ಯವಾಗಿ ಸ್ತ್ರೀ ಮುಖ) ಗೆರೆ ಕೊರೆದಂತೆ ಕಣ್ಣುಗಳು, ತುಂಬಾ ಕೃತಕ ಭಾವನೆ ಚಿತ್ರಿತವಾಗಿರುವುದು. ಪಾಶ್ಚಿಮಾತ್ಯ ಶೈಲಿಯಲ್ಲಿ ವರ್ಣಸಂಯೋಜನೆ ತೀರಾ ಸಾಭಾವಿಕವಾಗಿ ಇರುವುದು. ಹೀಗಾಗಿ ಅಂಥ ಕಲಾಕೃತಿಗಳನ್ನು ನೋಡುವುದಕ್ಕೆ ತುಂಬಾ ಸಂತೋಷ.

ಈ ಕಲಾಪ್ರದರ್ಶನಾಲಯದ ವಿಶೇಷ ಆಕರ್ಷಣೆ Search for Alexander. 'ಅಲೆಕ್ಸಾಂಡರನಿಗಾಗಿ ಅನ್ವೇಷಣೆ' ಈ ವಿಭಾಗವು ಶೂರಾಗ್ರಣಿ ಮೆಸೆಡೋನಿಯಾ (356–323 ಕ್ರಿ. ಪೂರ್ವ)ದ ಅಲೆಕ್ಸಾಂಡರನ ವಿಶೇಷ ಪರಿಚಯವನ್ನು ಮಾಡಿಕೊಡುತ್ತದೆ. ಮಹತ್ವಾಕಾಂಕ್ಷಿಯಾದ ಅಲೆಕ್ಸಾಂಡರನು ಅತ್ಯಂತ ಸದ್ಗುಣವಂತನೂ, ದೇವಾಂಶ ಸಂಭೂತನೂ ಆದಂತೆ ಗ್ರಿಕ್ ಇತಿಹಾಸದಲ್ಲಿ ಚಿತ್ರಿಸಲ್ಪಟ್ಟಿದ್ದಾನೆ. ಮಾನವೋತ್ತಮನಾಗಿ, ಉತ್ತಮ ಬೇಟೆಗಾರ, ಯುದ್ಧ ಪಟು, ಆದರ್ಶ ರಾಜನಾಗಿಯೂ ಚಿತ್ರಿಸಲ್ಪಟ್ಟಿದ್ದಾನೆ. ಇಂತಹ ಅಲೆಕ್ಸಾಂಡರನನ್ನು ಕುರಿತ ಅನೇಕ ಶಿಲ್ಪಗಳು, ಲೋಹ ಪುತ್ಥಳಿಗಳು, ನಾಣ್ಯಗಳು ದೊರೆಯುತ್ತವೆ. ಅವನ ಕಾಲ ಹೆಲೆನ್ ಶಕ. ಹೀಗೆ ಕರೆಯಲ್ಪಟ್ಟ ಅಂದಿನಿಂದ ಇಂದಿನವರೆಗೂ ಲಭ್ಯವಾಗಿರುವ ಕಲಾಕೃತಿಗಳ ಜೋಡಣೆಯನ್ನು ಅದ್ಭುತವಾಗಿ ಮಾಡಲಾಗಿದೆ. ಚಿತ್ರಗಳ ಪ್ರದರ್ಶನಗಳೊಡನೆ ಧ್ವನಿಮುದ್ರಿತ ಕೆಸೆಟ್ಟು-ಟೇಪ್ ರೆಕಾರ್ಡರ್ ಒದಗಿಸುವ ವ್ಯವಸ್ಥೆ ಇರುವುದರಿಂದ, ವಿವರಣೆಯನ್ನು ನಾವೇ ಕೇಳಬಹುದು. ಕೆಲವು ಅಮೃತ ಶಿಲೆಯ ಪುತ್ಥಳಿಗಳಂತೂ ತುಂಬಾ ಸುಂದರವಾಗಿವೆ. ಮೆಸಡೋನಿಯನ್ನರ ಸಂಪ್ರದಾಯದಂತೆ ದೊಡ್ಡ ಮನು

ಷ್ಯರು ಸತ್ತಾಗ ಅವರೊಡನೆ ಹೂಳಿದ್ದ ಕೆಲವು ವಸ್ತುಗಳನ್ನು ಹೊರತೆಗೆಯಲಾಗಿದೆ. ಇವಂತೂ ಅದ್ಭುತ ಕಲಾಕೌಶಲ್ಯದಿಂದ ಕೂಡಿದ್ದು ಅಂದಿನ ಸಂಪದ್ಭರಿತ ಸಮಾಜಕ್ಕೆ ಕೈಗನ್ನಡಿ ಹಿಡಿಯುತ್ತವೆ. 24 ಪೌಂಡು ತೂಕದ ಒಂದು ಚಿನ್ನದ ಪೆಟ್ಟಿಗೆ ಒಂದು ಸಮಾಧಿಯಲ್ಲಿ ದೊರೆತಿದ್ದು, ಅದರ ಕಲಾಕೌಶಲ್ಯ ಒಂದೆಡೆ ಬೆರಗು ಗೊಳಿಸುತ್ತಿದ್ದರೆ, ಕನ್ನಡಿಗಳ ಹಿನ್ನೆಲೆಯಲ್ಲಿ ವಿದ್ಯುತ್ ದೀಪದ ಅಲಂಕಾರದಲ್ಲಿ ಜೋಡಿಸಿಟ್ಟಿರುವ ಬಗೆ ಕಣ್ಣನ್ನು ಕುಕ್ಕಿಸುತ್ತದೆ. ಇನ್ನೊಂದು ಚಿನ್ನದಿಂದ ಮಾಡಿರುವ ಎಲೆಗಳ ಅಡ್ಡಿಕೆ (Necklace) ಇದೆ. ಅದರ ಎಲೆಗಳಲ್ಲಿ ಹಾಯ್ದಿರುವ ಕಡ್ಡಿಗಳನ್ನು, ಮೊಗ್ಗುಗಳನ್ನು ನೋಡಿದರೆ ಸ್ತಂಭೀಭೂತರಾಗುತ್ತೇವೆ. ಹಿಂದಿನ ಜನರಲ್ಲಿ ಇದ್ದ ಪ್ರತಿಭ್ಮಾತಕ ಕಲಾ ಕೌಶಲ್ಯ ಸಾಮಾನ್ಯ ಪ್ರೌಢಿಮೆಯದಲ್ಲ. ಆದ್ದರಿಂದ ನಾವು ಸುಧಾರಿಸಿದವರೋ ಅವರು ಸುಧಾರಿಸಿದವರೋ ಎಂಬ ಪ್ರಶ್ನೆ ಏಳುವಂತಾಗುತ್ತದೆ.

ವ್ಯಾಪಕ ಪ್ರವಾಸ

ನನ್ನನ್ನು ಆಮಂತ್ರಿಸಿ `ಕರೆಸಿದ ವಿ. ಎಸ್. ಎನ್. ಎ ಅವರ ಉದ್ದೇಶವೆಂದರೆ ನಾಡಿನ ವಿವಿಧ ಭಾಗಗಳಲ್ಲಿ ಸಂಚರಿಸಿ, ಅಲ್ಲಲ್ಲೇ ಇರುವ ಭಾರತೀಯ ಕುಟುಂಬಗಳನ್ನು ಸಂದರ್ಶಿಸಿ, ಅವರಿಗೆ ಹಿಂದೂ ಪರಂಪರೆಯ ಔನ್ನತ್ಯ ಮತ್ತು ಸತ್ವವನ್ನು ಪರಿಚಯ ಮಾಡಿಕೊಡುವುದು. ಮಾತೃ ಧರ್ಮ, ಸಂಸ್ಕೃತಿಗಳನ್ನು ಬಿಡದ ರೀತಿಯಲ್ಲಿ ಅವರಿಗೆ ಅಭಿಮಾನ ಹುಟ್ಟಿಸಿ ತಿಳುವಳಿಕೆ ನೀಡುವುದು. ಅಲ್ಲಿರುವ ಲಿಂಗಾಯತ ಕುಟುಂಬಗಳಿಗೆ ಬಸವ ತತ್ತ್ವದ ತಿರುಳನ್ನು, ಲಿಂಗಪೂಜೆಯ ಮರ್ಮವನ್ನು, ತಿಳಿಸಿಕೊಡುವುದು. ಅಲ್ಲಲ್ಲೇ ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಭಾಷಣ ಮಾಡಿ, ಅಧ್ಯಾತ್ಮ ಮೌಲ್ಯಗಳ ಆವಶ್ಯಕತೆ, ಹಿಂದೂ ತತ್ತ್ವದ ಶ್ರೇಷ್ಟತೆ ಕುರಿತು ಮನಗಾಣಿಸುವುದು. ಹೀಗೆ ಬಹುಮುಖ ಉದ್ದೇಶವನ್ನು ಹೊತ್ತು ಆಮಂತ್ರಣ ನೀಡಿದ್ದ ಸಮಿತಿಯ ಅಧ್ಯಕ್ಷ ಡಾ॥ ಕೋರಿಯವರು ವ್ಯಾಪಕವಾದ ಒಂದು ಯೋಜನೆ ಸಿದ್ಧ ಪಡಿಸುತ್ತಿದ್ದರು. ಅಮೆರಿಕಾದ ಒಂದು ಭೂಪಟ ಇಟ್ಟುಕೊಂಡು, ವಾಷಿಂಗ್ಟನ್‌ನಿಂದ ಹೊರಟು ಸುತ್ತಲೂ ಸಂಚರಿಸಿ ಪ್ರವಚನದ ಸ್ಥಳಗಳ ಜೊತೆಗೆ, ಸಂದರ್ಶಿಸಬಹುದಾದ ಪ್ರೇಕ್ಷಣೀಯ ತಾಣಗಳನ್ನೂ ಸೇರಿಸಿ ಒಂದು ಪ್ರಯೋಗಾತ್ಮಕ ಪ್ರವಾಸ ವಿವರ ಸಿದ್ಧಪಡಿಸಿ, ಅಲ್ಲಲ್ಲಿಗೆ ಜನರನ್ನು ದೂರವಾಣಿಯ ಮುಖಾಂತರ ಸಂಪರ್ಕಿಸತೊಡಗಿದ್ದರು. ಒಂದು ಪ್ರಮುಖ ನಗರಕ್ಕೆ ನಾನು ಹೋಗುವುದು, ಅಲ್ಲಿಂದ ಐವತ್ತು, ನೂರು, ಇನ್ನೂರು ಮೈಲುಗಳ ಒಳಗಿದ್ದವರು ಕೇಂದ್ರ ನಗರದಿಂದ ಕರೆದುಕೊಂಡು ಹೋಗಿ, ಕಾರ್ಯಕ್ರಮ ಮಾಡಿಸುವುದು. ಹೀಗೆ ನಿರ್ಧರಿಸಿ ಕಾರ್ಯಕ್ರಮ ಯೋಜಿಸ ತೊಡಗಿದಾಗ, ನಾವೂ ಆವಶ್ಯಕ ಸಾಮಾನುಗಳನ್ನು ಹೊಂದಿಸಿಕೊಂಡು ಸಿದ್ಧರಾಗತೊಡಗಿದೆವು.

(ಸಶೇಷ)

Viswakalyana Mission Education Society

(Registered Society)

BASAVA MANTAPA

No. 24, Chord Road, II Block, Rajajinagar, Bangalore-560 010

ಸಹೃದಯರಿಗೆ ಶುಭ ಹಾರೈಕೆಗಳು.

ವಿದ್ಯಾದಾನಕ್ಕಿಂತ ಮಿಗಿಲಾದ ದಾನವಿಲ್ಲ, ವಿದ್ಯಾಲಯಕ್ಕಿಂತ ಮಿಗಿಲಾದ ದೇವಾಲಯವಿಲ್ಲ. ಇದು ಭಾರತೀಯ ಪರಂಪರೆಯ ಮಹಾಘೋಷಣೆ. ಇದನ್ನರಿತು ವಿಶ್ವಕಲ್ಯಾಣ ಮಿಷನ್ ವಿದ್ಯಾಸಂಸ್ಥೆಯು ಶೈಕ್ಷಣಿಕ ಸೇವೆಯನ್ನು ಮಾಡಬಯಸಿ ಶ್ರೀ ಬಸವಭಾರತಿ ವಿದ್ಯಾಲಯ ಎಂಬ ರೆಸಿಡೆನ್ಶಿಯಲ್ ಶಾಲೆಯನ್ನು ತೆರೆದಿದೆ.

ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮಗಳೆರಡರಲ್ಲೂ ಬೋಧನೆ ನಡೆಯುವ ಈ ಶಾಲೆಯಲ್ಲಿ 5ನೇ ತರಗತಿಯಿಂದ 9ನೇ ತರಗತಿಯವರೆಗೆ ತರಗತಿಗಳು ನಡೆಯುತ್ತಿದ್ದು 1982 ಶೈಕ್ಷಣಿಕ ವರ್ಷಕ್ಕೆ 10ನೆಯ ತರಗತಿ ಸಹ ನಡೆಯಲಿದೆ. ಉತ್ಕೃಷ್ಟ ಶಿಕ್ಷಣ ನೀಡುತ್ತಿರುವ ಈ ಶಾಲೆಯ ಜನಪ್ರಿಯತೆ ಹೆಚ್ಚಿದ್ದು ವಿದ್ಯಾರ್ಥಿಗಳು ಅಧಿಕಧಿಕ ಸಂಖ್ಯೆಯಲ್ಲಿ ಪ್ರವೇಶ ಕೋರುತ್ತಿದ್ದಾರೆ.

ಶಾಲೆ ಮತ್ತು ವಸತಿ ಗೃಹಗಳ ಕಟ್ಟಡ, ಪೀಠೋಪಕರಣಗಳು, ಪ್ರಯೋಗ ಶಾಲೆ, ಗ್ರಂಥಾಲಯ, ಪ್ರಸಾದ ನಿಲಯದ ಪಾತ್ರೆಪಡಗ ಮುಂತಾದ ಅವಶ್ಯಕತೆಗಳು– ಈ ಎಲ್ಲ ಪೂರೈಸಲು ಅಪಾರವಾದ ಧನಸಹಾಯ ಬೇಕಾಗಿದೆ. ಅನೇಕ ಸದ್ಭಕ್ತರು ಉದಾರವಾದ ದೇಣಿಗೆ ಕೊಡುತ್ತಾರೆ. ಇಂಥ ಪ್ರಸಂಗದಲ್ಲಿ ನಿಮ್ಮಿಂದಲೂ ನೆರವು ಬಯಸುತ್ತೇವೆ, ನಿಮ್ಮ ನಿಮ್ಮ ಶಕ್ತ್ಯಾನುಸಾರ ಎಲ್ಲರೂ ಸಹಾಯ ಮಾಡಬಹುದು.

ಶಾಲಾ ಕೋಣೆಯ ನಿರ್ಮಾಣಕ್ಕೆ	ರೂ. 25001-00
ವಸತಿ ಗೃಹದ ಕೋಣೆಯ ನಿರ್ಮಾಣಕ್ಕೆ	ರೂ. 11001-00
ಮಹಾಪೋಷಕರು	ರೂ. 5001-00
ಪೋಷಕರು	ರೂ. 1001-00
ಹಿತೈಷಿಗಳು	ರೂ. 501-00

ವಿಶ್ವಕಲ್ಯಾಣ ಮಿಷನ್ ವಿದ್ಯಾಸಂಸ್ಥೆಗೆ ಆದಾಯ ತೆರಿಗೆ ರಿಯಾಯಿತಿ ಇದ್ದು ದಾನಿಗಳು ಇದರ ಸೌಲಭ್ಯ ಪಡೆಯಬಹುದು. No. 718/48/79-C.I.T. (I) Dt. 17-8-1980 Exempted under section 80 G. Viswakalyana Mission Education Society, Bangalore ಈ ಹೆಸರಿಗೆ ಬರೆದ ಕ್ರಾಸ್ ಚೆಕ್ ಅಥವಾ ಡಿ.ಡಿ. ಮುಖಾಂತರ ಕೊಡುಗೆ ಸಲ್ಲಿಸಬಹುದು. ನಿಮ್ಮ ನೆರವನ್ನು ಬಯಸುವ,

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಪ್ರೆಸಿಡೆಂಟ್

ವಿ.ಕ.ಮಿ. ವಿದ್ಯಾಸಂಸ್ಥೆ, ಬೆಂಗಳೂರು

KALYANA KIRANA FOR AMERICAN READERS

Those who wish to get Kalyana Kirana magazine are requested to send an yearly subscription of Rs. 86 to India. And those who wish to send their subscription in the form of U. S. A. dollars can post a cheque for $ 10-00 (dollars Ten) only as one year's subscription or $ 19-00 as two years subscription to the following address :

Mrs. JAYA Dr. SHIVAMURTHY,
9, Hemmingway Drive
Dix. Hills, NEW YORK-11746

Mrs. Jayashivamurthy, a sincere social worker and a very good organizer has agreed to do a favour for us by collecting subscription for Kalyana Kirana in U.S.A. We thank her for her kind co-operation. The cheque should be written in favour of Jagadguru Mathe Mahadevi.

Correspondent.

ವಿದೇಶಗಳಲ್ಲಿರುವವರಿಗೆ ಕಲ್ಯಾಣಕಿರಣ

ಕನ್ನಡ ಬಲ್ಲವರಿದ್ದು, ಧಾರ್ಮಿಕ ವಿಷಯುಗಳಲ್ಲಿ ಆಸಕ್ತರಾದ ಓದುಗರಿದ್ದರೆ ವಿದೇಶಗಳಲ್ಲಿರುವ ಕನ್ನಡಿಗರು ಚಂದಾದಾರರಾಗಬಹುದು. ವಾರ್ಷಿಕ ಚಂದಾ 16 ರೂ. ಸಾಮಾನ್ಯವಾಗಿ ಅಂಚೆ ವೆಚ್ಚ 6 ರೂಪಾಯಿ (ಒಂದು ಪ್ರತಿಗೆ). ಈ ಮೊತ್ತ ಅಂದರೆ 86 ರೂ.ಗಳನ್ನು ರೂಪಾಯಿಯಲ್ಲಿ ಇಲ್ಲೇ ಕಟ್ಟಿ, ವಿದೇಶಗಳಲ್ಲಿರುವ ನಿಮ್ಮ ಮಿತ್ರರು, ಬಂಧು ಬಳಗದವರಿಗೆ ಕಲ್ಯಾಣಕಿರಣ ಹೋಗುವಂತೆ ಮಾಡಬಹುದು. ಪ್ರತಿ ತಿಂಗಳೂ ಕಲ್ಯಾಣಕಿರಣವನ್ನು ಅಂಚೆಯಲ್ಲಿ ಕಳಿಸಲಾಗುತ್ತದೆ.

ಇಲ್ಲವೇ ಅಲ್ಲಿಂದಲೇ ಹಣ ಕಳಿಸುವವರು ವರ್ಷಕ್ಕೆ 10 ಡಾಲರ್, ಎರಡು ವರ್ಷದ ಚಂದಾ 19 ಡಾಲರ್ (ಅಮೆರಿಕನ್ ಡಾಲರ್ಸ್) ಅಥವಾ 90 ರೂ.ಗಳಿಗೆ ಸರಿಹೊಂದುವಂತೆ ಬೇರೆ ಬೇರೆ ದೇಶಗಳ ಹಣವನ್ನು ಕಳಿಸಬಹುದು. ನೇರವಾಗಿ ಕಲ್ಯಾಣಕಿರಣ ಕಾರ್ಯಾಲಯದೊಡನೆ ವ್ಯವಹರಿಸಬಹುದು. ಇಲ್ಲವೇ ಶ್ರೀಮತಿ ಜಯಾ ಡಾ|| ಶಿವಮೂರ್ತಿಯವರ ವಿಳಾಸಕ್ಕೂ ವ್ಯವಹರಿಸಬಹುದು.

Correspondent

ಕಲ್ಯಾಣ ಕಿರಣ
ಮಾಸ ಪತ್ರಿಕೆ

ಸಂಸ್ಕೃತಿ, ಸಾಹಿತ್ಯ, ನೀತಿ, ಅಧ್ಯಾತ್ಮ ಮೌಲ್ಯಗಳ ಪ್ರಸಾರಕ್ಕೆ ಮೀಸಲಾದ ಪತ್ರಿಕೆ

ಪ್ರಧಾನ ಸಂಪಾದಕರು :
ಪೂಜ್ಯ ಶ್ರೀ
ಜಗದ್ಗುರು ಮಾತೆ ಮಹಾದೇವಿ.

* * *

ಪ್ರಕಾಶಕರು :
ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಪರವಾಗಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಪ್ರಕಾಶನ ಪಡಿಸುವುದು.

ಕೇಂದ್ರ ಕಾರ್ಯಾಲಯ :
ಕಲ್ಯಾಣ ಕಿರಣ ಮಾಸಪತ್ರಿಕೆ
ಬಸವ ಮಂಟಪ, ನಂ. ೨೪, ಎರಡನೇ ಬ್ಲಾಕು, ಕಾರ್ಡ್‌ರೋಡ್, ರಾಜಾಜಿನಗರ,
ಬೆಂಗಳೂರು-೫೬೦ ೦೧೦.
ದೂರವಾಣಿ : ೬೨೩೩೫.

ಚಂದಾ ವಿವರ :

ಬಿಡಿ ಸಂಚಿಕೆ :	ರೂ.	೧-೫೦
ವಾರ್ಷಿಕ :	ರೂ.	೧೬-೦೦
ದ್ವೈವಾರ್ಷಿಕ :	ರೂ.	೩೧-೦೦
ಆಜೀವ ಸದಸ್ಯತ್ವ :	ರೂ.	೧೫೧-೦೦
ಪೋಷಕರು :	ರೂ.	೫೦೧-೦೦
ಮಹಾಪೋಷಕರು :	ರೂ.	೧೦೦೧-೦೦

* ಪತ್ರಿಕೆಯು ಪ್ರತಿ ತಿಂಗಳ ದಿನಾಂಕ ಮೂರರಂದು ಪ್ರಕಟವಾಗುವುದು.
* ಲೇಖಕರು ಲೇಖನಗಳನ್ನು ೧೦ನೇ ದಿನಾಂಕದೊಳಗೆ ಕಳಿಸಬೇಕು.
* ಪತ್ರಿಕೆ ಉದ್ದೇಶವಾದ ಧಾರ್ಮಿಕ, ಸಾಂಸ್ಕೃತಿಕ ಎಲ್ಲಾ ಬಗೆಯ ತಾತ್ವಿಕ ವಿಚಾರಗಳ ಲೇಖನ, ಕಥೆ, ಕವನಗಳಿಗೆ ಸ್ವಾಗತವಿದೆ.
* ಲೇಖನಗಳನ್ನು ಕಾಗದದ ಒಂದು ಮಗ್ಗುಲಿಗೆ ಸ್ಫುಟವಾಗಿ ಬರೆದಿರಬೇಕು.
* ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಅಥವಾ ಸಾಧಾರ ಲೇಖನಗಳಾದರೆ ಅದನ್ನು ಸ್ಪಷ್ಟವಾಗಿ ತಿಳಿಸಿ, ಮೂಲ ಲೇಖಕರ ಮತ್ತು ಪ್ರಕಾಶಕರ ಹೆಸರನ್ನು ಕಾಣಿಸಬೇಕು.
* ಅಸ್ವೀಕೃತ ಲೇಖನ ಬೇಕಾಗಿದ್ದಲ್ಲಿ ಮರಳಿಸಲು ಬೇಕಾದ ಅಂಚೆ ವೆಚ್ಚಕ್ಕೆ ಅವಶ್ಯಕವಿರುವ ಸ್ಟಾಂಪುಗಳನ್ನೂ ಕಳಿಸಬೇಕು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.
* ಚಂದಾ ಹಣ ಕೊಡದೆ ಇದ್ದವರು ಪತ್ರಿಕೆಯು ತಲುಪಿದ ತಕ್ಷಣ ಕಳಿಸಬೇಕು.
* ಹೊಸ ಚಂದಾದಾರರು ೧೬-೦೦ (ಹದಿನಾರು ರೂಪಾಯಿ) ಎಂ. ಓ. ಮಾಡಬೇಕು. (ವಿ. ಪಿ. ಇಲ್ಲ.)
* ಚಂದಾದಾರರು ಪತ್ರ ವ್ಯವಹಾರಗಳಲ್ಲಿ ವಿಳಾಸದ ಮೊದಲಲ್ಲಿ ಬರೆದ ಚಂದಾ ಸಂಖ್ಯೆಯನ್ನು ನಮೂದಿಸಬೇಕು.
* ವಿಳಾಸ ಬದಲಾವಣೆಗಳನ್ನು ತಿಳಿಸಬೇಕು. ಚಂದಾದಾರರಾದ ತಿಂಗಳಿಂದ ಮರುವರ್ಷದ ಆ ತಿಂಗಳವರೆಗೆ ಪತ್ರಿಕೆಗಳನ್ನು ಕಳಿಸಲಾಗುವುದು.

ಕಲ್ಯಾಣ ಕಿರಣ Regd. No. KRNB 312 ಅಕ್ಟೋಬರ್ 1981

Licenced to post without pre-payment No. WPP-25

